
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

12 ಏಪ್ರಿಲ್ 2017 ಪುಟ 20 ರೂ. 15/-



ಅಂಗನವಾಡಿ ಮಹಿಳೆಯರ ಹೋರಾಟ ಕಥನ




ರಾಜ್‌ಕುಮಾರ್

ಸದ್ದು ಸಡಗರ



ಮಂಡ್ಯ ಕೃಷ್ಣರಿಂದ ಸೀಟೂ ಇಲ್ಲ ಸುಖವೂ ಇಲ್ಲ

ಬೈಂದೂರು ಹೆಗ್ಡೆ ಬಿಜೆಪಿ ಹುರಿಯಾಳು ಆಗಬಹುದಾ?



ತುಮಕೂರು ಸಂಘಪರಿವಾರದ ಪುಢಾರಿಗಿರಿ








ಹೊಳಲ್ಕೆರೆ ಆಂಜನೇಯರಿಗೆ ಉಮಾಪತಿಯ ಗುನ್ನಾ

ರಾಯಚೂರು ನೀರಿಗಾಗಿ ರೈತರ ಗುಡುಗು



ಜನರ ಸಮಸ್ಯೆಗಳಿಗೆ ರಾಜಕೀಯ ಬೆರೆಸಬೇಕ

ಅಂಚಿನಿಂದ....



ಡಾ.ವಾಸು ಎಚ್.ವಿ.

'ಯಾವ ಕಾರಣಕ್ಕೂ ಇದರಲ್ಲಿ ರಾಜಕೀಯ ಬೆರೆಸಬಾರದು', 'ಒಂದ್ಸಾರಿ ಇಲ್ಲಿ ರಾಜಕೀಯ ಎಂಟ್ರಿ ಆಯ್ತು ಅಂದ್ರೆ ಕೆಲ್ಸ ಕೆಡ್ತು ಅಂತಾನೇ ಅರ್ಥ', 'ಅವ್ರನ್ನ ಇದ್ರಲ್ಲಿ ಸೇರಿಸ್‌ಬಾರ್ದು, ಅವ್ರು ಬಂದ್ರೆ ಇಲ್ಲಿ ರಾಜಕೀಯ ಮಾಡ್ತಾರೆ' ಇಂತಹ ಮಾತುಗಳು ಅಲ್ಲಲ್ಲಿ ಕೇಳಿಬರುತ್ತಿರುತ್ತವೆ. ರಾಜಕೀಯವೆನ್ನುವುದು ಸ್ವಹಿತಾಸಕ್ತಿ, ರಾಜಕೀಯವೆನ್ನುವುದು ರಾಜಕಾರಣಿಗಳು ಸಾರ್ವಜನಿಕ ಒಳಿತು ನೋಡದೇ ತಮ್ಮ ಲಾಭಕ್ಕಾಗಿ ನಡೆಸುವ ತರಲೆ ಕೆಲಸ ಎಂಬ ಭಾವನೆ ವ್ಯಾಪಕವಾಗಿದೆ. ಯಾವ ರಾಜಕೀಯ ಪಕ್ಷವೂ ಸರಿ ಇಲ್ಲ ಎಂಬುದು ಬೇರೆ, ರಾಜಕಾರಣವೇ ಬೇಡ ಎಂಬುದು ಬೇರೆ. ರಾಜಕಾರಣವೇ ಬೇಡ ಎಂಬ ಭಾವನೆ ಈ ಸದ್ಯ ಹಿಂದಿಗಿಂತ ಕಡಿಮೆಯಾಗಿದೆ. ಇದುವರೆಗೆ ಇದ್ದ ಪಕ್ಷಗಳು ಸರಿ ಇರಲಿಲ್ಲ, ಈಗ ಸರಿಯಾದ ರಾಜಕಾರಣ ಮಾಡೋಣ ಎಂಬ ಭಾವನೆಯನ್ನು ಮಧ್ಯಮ ವರ್ಗದ ಒಂದು ಸಣ್ಣ ವಿಭಾಗದಲ್ಲಿ ಮೂಡಿಸುವ ಕೆಲಸವನ್ನು ಆಮ್ ಆದ್ಮಿ ಪಕ್ಷ ಮಾಡಿತು. ಎಡಪಕ್ಷಗಳೂ ಇದನ್ನು ಆಗಿಂದಾಗ್ಗೆ ಮಾಡುವ ಪ್ರಯತ್ನ ಮಾಡಿವೆ. ಆದರೆ, ಇದನ್ನು ನಿಜಕ್ಕೂ ಭಾರೀ ಪ್ರಮಾಣದಲ್ಲಿ ಬಿತ್ತಿರುವುದು ಮೋದಿ ಮತ್ತು ಪಟಾಲಂ ಆಗಿದೆ. ಅದಕ್ಕೆ ಅವರು ಬಳಸಿದ ಕೆಲವು ನುಡಿಗಟ್ಟುಗಳು ಸಾಕಷ್ಟು ಬಳಕೆಯಲ್ಲಿವೆ. '70 ವರ್ಷ ಆಳಿದವರು ದೇಶವನ್ನು ಏನು ಮಾಡಿದರು ಎಂಬುದು ಗೊತ್ತಿದೆ'. (ಈ 70 ವರ್ಷಗಳಲ್ಲಿ ಮೋದಿಯವರ ಪಕ್ಷದ ನೇತೃತ್ವ ಅಥವಾ ಸಹಭಾಗಿತ್ವದಲ್ಲಿ 8ಕ್ಕೂ ಹೆಚ್ಚು ವರ್ಷಗಳ ಆಳ್ವಿಕೆ ನಡೆದಿತ್ತು) 'ಈಗ ಸರಿಪಡಿಸುವ ಒಬ್ಬ ದೇವಮಾನವ ಅವತರಿಸಿದ್ದಾನೆ' ಎಂಬಂತೆ ಅವರ ಪ್ರಚಾರದ ಧಾಟಿ ಇದೆ.

ಆಪ್ ಮತ್ತು ಬಿಜೆಪಿ ಒಳ್ಳೆಯ ಆಡಳಿತ ಹಾಗೂ ಭ್ರಷ್ಟಾಚಾರದ ವಿರುದ್ಧ ಸಾಕಷ್ಟು ಮಾತನಾಡಿದವು. ರಾಜಕೀಯವೆಂದರೆ ಅದೇ ಎಂತಲೂ ಬಿಂಬಿಸಲಾಯಿತು. ರಾಜಕೀಯವೆಂದರೆ ಅಷ್ಟೇ ಆಗುವುದು ಹೇಗೆ ಸಾಧ್ಯ? ಈ ಎರಡು ಗುಂಪುಗಳು ಮುಂದಿಟ್ಟ ಕಾರ್ಯಸೂಚಿಯಲ್ಲಿ ಸಾಮಾಜಿಕ ನ್ಯಾಯ, ಸಮಾನತೆಯ ಅಂಶಗಳು ಗೌಣವಾಗಿದ್ದವು. ವಾಸ್ತವದಲ್ಲಿ ಬಿಜೆಪಿ ಪಕ್ಷದ ನೀತಿ, ನಿಲುವು ಮತ್ತು ಧೋರಣೆಗಳು ಸಾಮಾಜಿಕ ನ್ಯಾಯ ಹಾಗೂ ಸಮಾನತೆಗೆ ವಿರುದ್ಧವಾಗಿವೆ. ಪ್ರಜಾತಂತ್ರದಲ್ಲಿ ರಾಜಕೀಯದ ಅರ್ಥವನ್ನು ಅಂತಿಮವಾಗಿ ಜನರ ಕೈಗೆ ಅಧಿಕಾರ ಬರುವಂತೆ ಮಾಡುವುದು ಎಂದಲ್ಲದೇ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುವುದು ಸಾಧ್ಯವಿಲ್ಲ. ಹಾಗಾಗಿ ಈ ದೇಶದ ಸಂವಿಧಾನದಲ್ಲಿ ಅಡಕವಾಗಿರುವ ಸಾಮಾಜಿಕ, ರಾಜಕೀಯಾರ್ಥಿಕ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳನ್ನು ಒಳಗೊಳ್ಳದ ರಾಜಕೀಯ ಇರಲು ಸಾಧ್ಯವಿಲ್ಲ.

ಜನರ ಕೈಗೆ ಅಧಿಕಾರ ಬರುವುದಾದಲ್ಲಿ ಮಾತ್ರ ಅವರ ಉಳಿದೆಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆಂದೂ, ಹಾಗಾಗಿ ಆ ನಿಟ್ಟಿನಲ್ಲಿ ಮಾಡಬೇಕಾದ ಎಲ್ಲಾ ಕೆಲಸಗಳು - ಚುನಾವಣೆಯಲ್ಲೂ, ಚುನಾವಣೆಯ ಆಚೆಗೂ - ರಾಜಕೀಯದ ವ್ಯಾಪ್ತಿಯಲ್ಲಿ ಬರುತ್ತವೆಂದೂ ಹೇಳುವ ಕೆಲಸವನ್ನು ಮುಖ್ಯವಾಹಿನಿ ರಾಜಕೀಯ ಪಕ್ಷಗಳು ಮಾಡಿಲ್ಲ. 5-6 ದಶಕಗಳಲ್ಲಿ ಇದನ್ನು ಸೀಮಿತಗೊಳಿಸುತ್ತಾ ಸಾಗಿದ ಕಾಂಗ್ರೆಸ್ ಪಕ್ಷವು ಇಂದು ಅತ್ಯಂತ ದುಸ್ಥಿತಿಯಲ್ಲಿದೆ. ಅದನ್ನೇ ಬಳಸಿಕೊಂಡು, ಪ್ರಜಾತಂತ್ರದ ಮೂಲ ಆಶಯಗಳನ್ನು ತಿರುವುಮುರುವು ಮಾಡುವ ಕೆಲಸವನ್ನು ಬಿಜೆಪಿ ಹಾಗೂ ಅದರ ಪರಿವಾರವು ಮಾಡುತ್ತಿದೆ; ಅದರಲ್ಲಿ ದಿನೇದಿನೇ ಯಶಸ್ವಿಯಾಗುತ್ತಿದೆ.

ಇದನ್ನು ತಿರುವುಮುರುವು ಮಾಡುವ ಪ್ರಕ್ರಿಯೆಯನ್ನು ನಾವು ಆರಂಭಿಸದೇ, ಜನದ್ರೋಹಿ ರಾಜಕಾರಣವನ್ನು ಚುನಾವಣೆಯಲ್ಲಷ್ಟೇ ಸೋಲಿಸುವ ಯಾವ ಪ್ರಯತ್ನವೂ ಅಷ್ಟಾಗಿ ಫಲ ಕೊಡುವ ಸಾಧ್ಯತೆ ಇಲ್ಲ. ಏಕೆಂದರೆ, ಬಿಜೆಪಿ ಇರಲಿ, ಕಾಂಗ್ರೆಸ್ ಇರಲಿ ಅಥವಾ ಮತ್ತೊಂದು ಪಕ್ಷವಿರಲಿ ಅವರಿಂದ ತಮ್ಮ ನಿಜವಾದ ಸಮಸ್ಯೆಗಳು ಪರಿಹಾರವಾಗುವ ಆಡಳಿತ ಬೇಕು; ನಿಜವಾದ ಅಧಿಕಾರದಲ್ಲಿ ತಮಗೆಲ್ಲರಿಗೂ ನಿಜವಾದ ಪಾಲು ಬೇಕು ಎಂದು ಜನರು ಅಂದುಕೊಳ್ಳುವಂತಾಗಬೇಕು. ಆಗ ಮಾತ್ರ ಪ್ರಜಾತಂತ್ರವನ್ನು ಸರಿ ಮಾಡುವ ಕೆಲಸ ಆಗಬಹುದು.

ಜನರು ತಮ್ಮ ನಿತ್ಯದ ಸಮಸ್ಯೆಗಳ ಪರಿಹಾರಕ್ಕಾಗಿ ಅವರಿಗೆ ಲಭ್ಯವಿರುವ ಪುಢಾರಿಗಳು ಅಥವಾ ಹೋರಾಟಗಾರರನ್ನು ಆಶ್ರಯಿಸುತ್ತಾರೆ. ಈ ನಿತ್ಯದ ಸಮಸ್ಯೆಗಳಲ್ಲಿ ರೇಷನ್ ಕಾರ್ಡ್ ಸಮಸ್ಯೆಯಂತಹವುಗಳಿಂದ ಹಿಡಿದು, ದೌರ್ಜನ್ಯ ದಬ್ಬಾಳಿಕೆಗಳಿಂದ ರಕ್ಷಣೆ ಹಾಗೂ ನ್ಯಾಯದವರೆಗೆ ಅಥವಾ ಉದ್ಯೋಗ, ಬದುಕಿನ ಭದ್ರತೆಯಂತಹ ವಿಶಾಲ ಸಮಸ್ಯೆಗಳತನಕ ಬೇರೆ ಬೇರೆ ರೀತಿಯವು ಇರುತ್ತವೆ. ಪುಢಾರಿಗಳು ಇವುಗಳಲ್ಲಿ ಕೆಲವನ್ನು ಬಗೆಹರಿಸಬಲ್ಲರು, ಹೋರಾಟಗಾರರೂ ಬಗೆಹರಿಸಬಲ್ಲರು. ಇಬ್ಬರೂ ಜನರ ಕಣ್ಣಲ್ಲಿ 'ಸಮಾಜ ಸೇವಕ'ರಾಗಿ ಇರುತ್ತಾರೆ. ಆದರೆ ಪುಢಾರಿಗಳು ಅದನ್ನು ಜನವಿರೋಧಿ ರಾಜಕಾರಣಕ್ಕೆ ಬಳಸಿಕೊಳ್ಳಬಲ್ಲರು. ಹೋರಾಟಗಾರರು ಸಮಾಜಸೇವಕರಾಗಿ ಅಥವಾ ನಿರಂತರ ಭಿನ್ನಮತೀಯರಾಗಿ ಉಳಿದುಬಿಡುತ್ತಾರೆ. ರಾಜಕೀಯಕ್ಕೂ ಜನರ ಸಣ್ಣ ಪುಟ್ಟ ಸಮಸ್ಯೆಗಳಿಗೂ ಇರುವ ಸಂಬಂಧವನ್ನು ಅರ್ಥ ಮಾಡಿಸುವಲ್ಲಿ ಚಳವಳಿಯ ರಾಜಕಾರಣ ವಿಫಲವಾಗಿರುವುದು ಇದಕ್ಕೆ ಕಾರಣವಿರಬಹುದು.

ಇನ್ನು ಎರಡನೆಯ ಬಗೆಯ ಪ್ರಯತ್ನವೊಂದಿದೆ. ಅದು ರಾಜಕಾರಣವನ್ನು ಚುನಾವಣೆಗಳಿಗೆ ಮಾತ್ರ ಸೀಮಿತಗೊಳಿಸುವುದು. ಚುನಾವಣೆಗಳಾಚೆ ನಡೆಯಲೇಬೇಕಾದ ಚಳವಳಿಯ ರಾಜಕಾರಣ ಅವಗಣನೆ ಮಾಡುವುದು. ಎರಡನ್ನೂ ಬೆಸೆದು ನಾವು ಸಮಾಜವನ್ನು ಕ್ರಾಂತಿಕಾರಿ ಹಾದಿಗೆ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದವರು ಇಲ್ಲವೇ ಇಲ್ಲವೆಂದಲ್ಲ. ಸಂಸದೀಯ ಎಡಪಕ್ಷಗಳು ಅದನ್ನೇ ಹೇಳುತ್ತಾ ಬಂದಿವೆ. ಆದರೆ ಅವರು ಚುನಾವಣೆಯಲ್ಲಿ ದೊಡ್ಡ ಮಟ್ಟದ ಗೆಲುವು ಸಾಧಿಸಿದ ಕಡೆ ಪ್ರಧಾನವಾಗಿ ಚುನಾವಣಾ ರಾಜಕಾರಣವನ್ನೂ, ಗೆಲ್ಲುವ ಸಾಧ್ಯತೆ ಇಲ್ಲದೆಡೆ ಪ್ರಧಾನವಾಗಿ ಚಳವಳಿಯ ರಾಜಕಾರಣವನ್ನೂ ಮಾಡುತ್ತಾ ಬಂದಿದ್ದಾರೆ. ಈಗ ಅದರ ಸರಿ-ತಪ್ಪುಗಳ ವಿಶ್ಲೇಷಣೆಗೆ ಹೋಗುವುದು ಈ ಲೇಖನದ ಉದ್ದೇಶವಲ್ಲವಾದ್ದರಿಂದ ಅದನ್ನು ಪಕ್ಕಕ್ಕಿಟ್ಟು 'ಪ್ರಧಾನ ಧಾರೆಯ ಚುನಾವಣಾ ರಾಜಕಾರಣ ಮತ್ತು ಪ್ರಧಾನ ಧಾರೆಯ ಚಳವಳಿಯ ರಾಜಕಾರಣದ' ಕುರಿತ ವಿಶ್ಲೇಷಣೆಗೆ ಇದನ್ನು ಸೀಮಿತಗೊಳಿಸಲಾಗಿದೆ.

ಓಟಿನ ಮಹತ್ವವನ್ನು ಜನರಿಗೆ ತಿಳಿಸುವ ಕೆಲಸವನ್ನು ಬಿಎಸ್‌ಪಿ ಮಾಡಿದೆ. ಆದರೆ, ಅದು ಇನ್ನೊಂದು ತುದಿಯಲ್ಲಿ ನಿಂತಿದೆ. ದಿನನಿತ್ಯದ ಜನರ ಸಮಸ್ಯೆಗಳಲ್ಲಿ ಭಾಗಿಯಾಗುತ್ತಾ, ಅವುಗಳಿಗೂ ರಾಜಕಾರಣಕ್ಕೂ ಇರುವ ಮಹತ್ವವನ್ನು ಮನವರಿಕೆ ಮಾಡಿಕೊಳ್ಳುವ ಮತ್ತು ಮಾಡಿಕೊಡುವ ಪ್ರಕ್ರಿಯೆ ಬೇರೆ; ರಾಜಕೀಯ ಅಧಿಕಾರ ಮಾತ್ರವೇ ಕೀಲಿಕೈ ಎಂದು ಹೇಳುತ್ತಾ, ಇಡೀ ಚರ್ಚೆಯನ್ನು ಚುನಾವಣೆಯಲ್ಲಿ ಹೇಗಾದರೂ ಗೆಲ್ಲುವ ಕ್ರಿಯೆಗೆ ಸೀಮಿತಗೊಳಿಸುವುದು ಬೇರೆ.

ತಮ್ಮ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕೆ ಸಂಘಟನೆಯನ್ನು ಆಶ್ರಯಿಸುವ ಜನರು ಚುನಾವಣೆಯ ಸಂದರ್ಭದಲ್ಲಿ ಅದನ್ನು ಸಂಪೂರ್ಣ ಪಕ್ಕಕ್ಕಿಡುವುದು ಏತಕ್ಕಾಗಿ? ಕಬ್ಬು ಬೆಳೆ 15 ತಿಂಗಳನ್ನು ದಾಟುತ್ತಿದ್ದಂತೆ ಅದರ ಕಟಿಂಗ್ ಮಾಡಿಸಿಕೊಳ್ಳುವುದು ಜೀವನ್ಮರಣದ ಪ್ರಶ್ನೆಯಂತೆ ಒದ್ದಾಡುವ ರೈತರು, ಕಬ್ಬಿಗೆ ಸರಿಯಾದ ಬೆಲೆ ಸಿಗುವುದು ಆ ಸಂದರ್ಭದ ಅತ್ಯಂತ ಮಹತ್ವದ ವಿಚಾರವೆಂಬಂತೆ ಒದ್ದಾಡುವ ರೈತರು ಅದಕ್ಕೆ ರಾಜಕೀಯ ಪಕ್ಷಗಳನ್ನು ಹೊಣೆಗಾರರನ್ನಾಗಿ ಮಾಡುವುದು ಬಹಳ ಕಡಿಮೆ. ಒಮ್ಮೆ ಮಂಡ್ಯ ತಾಲೂಕಿನ ಹಳ್ಳಿಯೊಂದರಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರಿದ್ದ ಸ್ಥಳೀಯ ಶಾಸಕರೊಬ್ಬರ ಸಭೆ ಇತ್ತು, ಆ ಸಭೆಯಲ್ಲಿ ರೈತರೊಬ್ಬರು ಕಬ್ಬಿನ ಬೆಲೆಯ ವಿಚಾರವನ್ನು ತೆಗೆದರು. ಕೂಡಲೇ ಹರಿಹಾಯ್ದ ಜೆಡಿಎಸ್ ಕಾರ್ಯಕರ್ತರು, 'ಅದನ್ನು ಅಣ್ಣಾವ್ರ ಹತ್ತಿರ ಯಾಕಯ್ಯಾ ಕೇಳ್ತಿಯಾ? ಅದನ್ನ ರೈತಸಂಘದವ್ರ ಹತ್ರ ಕೇಳು' ಎಂದು ಕೂಗಾಡಿದರು. ಸುತ್ತಲಿನ ಯಾರಿಗೂ ಇದು ಅಸಹಜ ಎನ್ನಿಸಲೇ ಇಲ್ಲ.

ಇದೇರೀತಿಯಲ್ಲಿ ಅಸ್ಪೃಶ್ಯತೆ, ದೌರ್ಜನ್ಯ ಇತ್ಯಾದಿ ದೊಡ್ಡ ವಿಚಾರಗಳಿಗೆ ಸಂಬಂಧಿಸಿದಂತೆಯೂ ಯಾವುದಾದರೂ ಪಕ್ಷವನ್ನು ಹೊಣೆ ಮಾಡಿ ಅದರ ವಿರುದ್ಧ ಜನರು ಓಟು ಮಾಡಿದ್ದು ಬಹಳ ಕಡಿಮೆ. ಅಂತಹ ಸಂದರ್ಭದಲ್ಲಿ ಜೊತೆಗೆ ನಿಂತ ಸಂಘಟನೆಗಳು ಏನಾದರೂ ತಪ್ಪು ಮಾಡಿದರೆ, ಅವರನ್ನು ದೂರಿ ದೂರ ಮಾಡುವ ಸಾಧ್ಯತೆಗಳು ಹೆಚ್ಚು. ಇಂತಹ ಚಳವಳಿಗಾರರು ಒಂದುವೇಳೆ ಚುನಾವಣೆಗೆ ಸ್ಪರ್ಧಿಸಿದರೆ, ಅವರನ್ನು ಮಿಕ್ಕ ರಾಜಕಾರಣಿಗಳಿಗಿಂತ ಪ್ರಯೋಜನಕ್ಕಿಲ್ಲದವರು ಎಂದು ಸಹ ನೋಡಲಾಗುತ್ತದೆ.



ಹಾಗೆಂದು, ರಾಜಕಾರಣಿಗಳೆಂದರೆ ಸರ್ವೋತ್ತಮರು ಎಂದು ಜನರು ಭಾವಿಸಿಲ್ಲ, ಚಳವಳಿಗಾರರನ್ನು 'ನೀವೂ ನಾಳೆ ಚುನಾವಣೆಗೆ ಹೋಗಲ್ಲ ಅಂತ ಏನು ಗ್ಯಾರಂಟಿ? ಇದನ್ನು ಇಟ್ಟುಕೊಂಡು ನಾಳೆ ಓಟು ಕೇಳಲು ಬರಬಾರದು' ಎಂದು ಕೆಲವೆಡೆ ತಾಕೀತು ಸಹಾ ಮಾಡಲಾಗುತ್ತದೆ. ಈ ವೈರುಧ್ಯಕ್ಕೆ ಏನು ಕಾರಣ?

ಚಳವಳಿಯ ರಾಜಕಾರಣ ಹಾಗೂ ಸಂಸದೀಯ ರಾಜಕಾರಣಗಳೆರಡರ ನಡುವಿನ ಸಂಬಂಧದಲ್ಲಿ ಇರುವ ಸಮಸ್ಯೆಗಳೇ ಇದಕ್ಕೆ ಪ್ರಧಾನ ಕಾರಣವೆನಿಸುತ್ತದೆ. ಈ ಎಲ್ಲಾ ಚರ್ಚೆಯ ಇನ್ನೊಂದು ತುದಿಯಲ್ಲಿರುವ ಸೈದ್ಧಾಂತಿಕ ನಿಲುವೂ ಒಂದಿದೆ. ಅದು ನಕ್ಸಲೈಟ್ ಸಂಘಟನೆಗಳ ಚುನಾವಣಾ ಬಹಿಷ್ಕಾರದ ನಿಲುವು.

ತಮ್ಮ ಕಷ್ಟಸುಖಗಳಲ್ಲಿ ಜೊತೆಗೆ ನಿಂತವರಿಗೆ ಚುನಾವಣೆಗಳಲ್ಲಿ ಮತವನ್ನೂ ಹಾಕದವರು, ಸಶಸ್ತ್ರ ಹೋರಾಟದ ಜೊತೆಗೆ ದೇಶದ ಎಲ್ಲಾ ಭಾಗಗಳಲ್ಲಿ ಜೊತೆಗೆ ನಿಲ್ಲುವ ಸಾಧ್ಯತೆ ಕಡಿಮೆಯೇ. ಹಾಗಾಗಿಯೇ ನಕ್ಸಲೀಯ ಚಳವಳಿ ಪ್ರಬಲವಾಗಿದ್ದೆಡೆಯೂ ಚುನಾವಣಾ ಬಹಿಷ್ಕಾರದ ಕರೆ ಯಶಸ್ವಿಯಾಗಿಲ್ಲ. ಈಗಿರುವ ಪ್ರಜಾಪ್ರಭುತ್ವ ಈಗಿರುವಂತೆಯೇ ಶುದ್ಧವಾಗಿಬಿಡುವುದು ಸಾಧ್ಯವಿಲ್ಲ, ಇದರ ರಚನೆಯಲ್ಲೇ ಸಮಸ್ಯೆಗಳಿವೆ ಎಂಬುದು ಸರಿಯಾಗಿದೆ. ಆ ರೀತಿಯ ರಾಚನಿಕ ಸಮಸ್ಯೆಗಳಿಗೆ ಪರಿಹಾರ ಕೇವಲ ಚುನಾವಣೆಗಳಲ್ಲಿ ಇಲ್ಲ, ಚುನಾವಣೆಗಳನ್ನು ದಾಟಿದ ಜನಾಂದೋಲನದಲ್ಲಿ ಇದೆ ಎಂಬುದೂ ಸರಿ. ಆದರೆ ಚುನಾವಣೆಗಳನ್ನು ಉಪೇಕ್ಷಿಸಿಬಿಡುವುದಕ್ಕೆ ಸಾಧ್ಯವೇ ಇಲ್ಲ.

ಮೊಟ್ಟಮೊದಲಿಗೆ ಆಗಬೇಕಿರುವುದು ಜನರ ನಿಜವಾದ ಸಮಸ್ಯೆಗಳನ್ನು ಚುನಾವಣಾ ವಿಷಯಗಳನ್ನಾಗಿ ಮಾಡುವುದು. ರೈತರ ಆತ್ಮಹತ್ಯೆಗಳು ಮತ್ತು ಬಿಕ್ಕಟ್ಟು ಚುನಾವಣೆಯ ವಿಚಾರ ಆಗಲ್ಲ, ಹೆಚ್ಚೆಂದರೆ ಸಾಲಮನ್ನಾ ಚುನಾವಣೆಯ ವಿಷಯ ಆಗುತ್ತದೆ. ಸ್ಮಶಾನ, ಖಬರಸ್ತಾನವನ್ನು ಚುನಾವಣೆಯ ವಿಷಯ ಮಾಡಿದ ಒಬ್ಬ ಪ್ರಧಾನಿ ಇರುವ ದೇ... ನಾವಿದ್ದೇವೆ. ಅವರಿಗೆ ಜನರಿಗೆ ನೀಡುವ ಭರ... ಕೇವಲ ಜುಮ್ಲಾಗಳು (ಚುನಾವಣಾ ಸಂದರ್ಭದಲ್ಲಿ ... ಮಾಮೂಲಿ ಸುಳ್ಳುಗಳು). ಮಹಿಳೆಯರಿಗೆ ಸ... ದೌರ್ಜನ್ಯ ಮುಕ್ತ ಬದುಕು, ಜಾತಿ ಹಾಗೂ ... ಮುಕ್ತ ಸಮಾಜ ಇವೆಲ್ಲವೂ ಚುನಾ... ವಿಷಯಗಳಾಗಬೇಕು. ಈ ರೀತಿ ಹೋದಾಕ್ಷಣ, ... ಕ್ಷೇತ್ರದಲ್ಲಿ ಬಹುಸಂಖ್ಯಾತರಾಗಿರುವ ಅ... ಪ್ರಬಲವಾಗಿರುವ ಸಮುದಾಯಗಳ ಬ... ಕಳೆದುಕೊಳ್ಳಬೇಕಾಗುವುದರಿಂದ ಇಂತಹ ವಿಷಯ... ಹೇಗೆ ನುಣುಚಿಕೊಳ್ಳುವುದು ಎಂತಲೇ ರಾಜಕೀಯ ... ನೋಡುತ್ತಿರುತ್ತವೆ. 15 ದಿನಗಳ ಕೆಳಗೆ ಮಳವಳ್ಳಿ ... ಕ್ಷೇತ್ರದಿಂದ ಬಂದ ಶಾಸಕರು, 'ಈ ನಾಲ್ಕು ವರ್ಷ... ನಾನು ಒಂದೇ ಒಂದು ಅಟ್ರಾಸಿಟಿ ಕೇಸು ... ಮೇಲಾದರೂ ಹಾಕಿಸಿದ್ದರೆ ಅದನ್ನು ಸಾಬೀತುಪಡಿಸಿ' ... ಅದನ್ನೇ ಒಂದು ಸಾಧನೆಯೆಂಬಂತೆ ಸವಾಲು ಹಾಕಿ... ಇಂದು ಅಸ್ತಿತ್ವದಲ್ಲಿರುವ ಚುನಾವಣಾ ವಿಧಾನದಲ್ಲಿ ... ಬದಲಿಸುವುದು ಕಷ್ಟಸಾಧ್ಯವೇ ಸರಿ. ಹಾಗಾಗಿಯೇ ... ಮತಕ್ಷೇತ್ರದ ವಿಚಾರ ಬಾಬಾಸಾಹೇಬ್ ಅಂಬೇಡ... ಬಹಳ ಮಹತ್ವದ ವಿಚಾರವಾಗಿತ್ತು.

ಇಂತಹ ಕೆಲವು ಸವಾಲುಗಳ ಹೊರತಾಗಿಯೂ ... ಸಮಸ್ಯೆಗಳನ್ನು ಚುನಾವಣಾ ಇಶ್ಯೂಗಳನ್ನಾಗಿಸುವ ಸವಾ... ಈ ಸಾರಿಯಾದರೂ ಸಂಘಟನೆಗಳು ಕೈಗೆತ್ತಿ... ಬೇಕೆನಿಸುತ್ತದೆ. ಅದಕ್ಕೆ ಆಗಲೇ ಕಾಲ ಮೀರುತ್ತಿದೆ. ಆ... ಬೇಗ ಈ ನಿಟ್ಟಿನಲ್ಲಿ ಸಂಘಟಿತ, ಐಕ್ಯ ಪ್ರಯತ್ನ... ಮಾಡಬೇಕಿದೆ.

ಇದುವರೆಗೂ ಚಾಲ್ತಿಯಲ್ಲಿರುವ ಕೆಲವು ಪ್ರಜಾ... ವಿರೋಧಿ ಆದರೆ ಜನಪ್ರಿಯ ಅಂಶಗಳನ್ನು ನಾವು ಮು... ಹೋಗಬಾರದು ಎಂಬ ಅಭಿಪ್ರಾಯವೂ ಒ... ಉದಾಹರಣೆಗೆ, ಜನರು ಚುನಾವಣೆಗಳ ಸಂದರ್ಭ... ಹಣ ತೆಗೆದುಕೊಳ್ಳುವುದನ್ನು ವಿರೋಧಿಸುವುದು ... ಬದಲಿಗೆ 'ಈ ಸಂದರ್ಭದಲ್ಲಾದರೂ ಕಾಸು ಬ... ರಾಜಕಾರಣಿಗಳಿಂದ, ಸಾಧ್ಯವಾದಷ್ಟು ಕಿತ್ತುಕೊಳ್ಳು... ಒಳ್ಳೆಯದು' ಎಂದು ಹೇಳುವವರು ಇದ್ದಾರೆ. ಅರ... ಕೇಜ್ರಿವಾಲ್ ಅವರು 'ಬೇರೆ ಪಕ್ಷದವರು ಕೊಡುವ ... ಇಸ್ಕೊಳ್ಳಿ, ಅದು ನಿಮ್ಮದೇ ಹಣ. ಆದರೆ ಓಟು ನ... ಹಾಕಿ' ಎಂದು ಬಹಿರಂಗವಾಗಿಯೇ ಹೇಳಿಕೆ ನೀಡಿ... ಒಂದರ್ಥದಲ್ಲಿ ಇದು, 'ಬೇರೆ ಇನ್ಯಾವ ಭರವಸೆಗಳ... ಇಡಲಾಗದ ರಾಜಕಾರಣಿಗಳಿಂದ ಸಾಧ್ಯವಿರುವ... ಪಡೆದುಕೊಳ್ಳಲು ಜನರು ಕಂಡುಕೊಂಡಿರುವ ಮಾ... ಎಂದು ನಾವು ಹೇಳಿಬಿಡಬಹುದು. ಆದರೆ, ... ಪರಿಣಾಮದಲ್ಲಿ ಒಳ್ಳೆಯದನ್ನೇನೂ ಮಾಡುತ್ತಿಲ್ಲ. ಏಕೆ... ಇದನ್ನು ಒಂದು ಮೌಲ್ಯ ನಿರ್ಮಾಣದ ಭಾಗವಾಗಿ... ನೋಡಬೇಕು. ಹಾಗೆ ನೋಡಿದರೆ, ನಮ್ಮ ಜನರು ನೀ... ಉಳಿಸಿಕೊಂಡಿದ್ದಾರೆ. ಹಣ ಪಡೆದುಕೊಂಡರೆ, ಬಹು... ಅವರಿಗೇ ಓಟು ಹಾಕುತ್ತಾರೆ. ಒಂದು ವೇಳೆ ಇ... ಮೂವರು ಅಭ್ಯರ್ಥಿಗಳು ಹಣ ನೀಡಿದ್ದರೆ, ಹೆಚ್ಚು ... ನೀಡಿದವರಿಗೆ ಓಟು ಹಾಕುತ್ತಾರೆ. ಇದು ನಿಯತ್ತಾ ... ಕೆಲವರು ಹಂಗಿಸಬಹುದು. ಹಣ ತೆಗೆದುಕೊಳ್ಳು... ಸರಿಯಲ್ಲ, ಆದರೆ ತೆಗೆದುಕೊಳ್ಳಿ, ಅವರಿಗೆ ಓಟು ವ... ಹಾಕಬೇಡಿ ಎನ್ನುವುದು ನಕಾರಾತ್ಮಕ ಮೌಲ್ಯ ನಿರ್ಮಾ... ಮಾಡುತ್ತದೆ. ಆ ರೀತಿ ಮೋಸ ಮಾಡಿ ಎಂದು ಹೇಳುವ... ಜನರನ್ನು ಎಲ್ಲೆಡೆ ಮೋಸ ಮಾಡಲೇ ಪ್ರೇರೇಪಿಸುತ್ತ...

ಪಕ್ಕದ ಮನೆಯವರು, ನೆಂಟರು, ಪ್ರತಿನಿತ್ಯ ಮ... ನೋಡಲೇಬೇಕಾದ ವ್ಯಕ್ತಿಯೊಬ್ಬರು ಚುನಾವ... ನಿಂತಿರುತ್ತಾರೆ. ಅವರಿಂದಲೂ ಹಣ ಪಡೆಯುವ ಮ... ಹಲವೆಡೆ ನಮ್ಮ ಗ್ರಾಮ ಪಂಚಾಯತಿ ಚುನಾವಣೆ... ಇಳಿದಿವೆ. ಆ ರೀತಿ ಹಣ ತೆಗೆದುಕೊಳ್ಳುವಾಗ ಅಥ... ಕೊಡುವಾಗ ಮುಜುಗರ ಆಗುವುದಿಲ್ಲವೇ ಎಂಬ ಪ... ಬರುವ ಉತ್ತರ ಏನು ಗೊತ್ತೇ? 'ಒಂದು ವೇಳೆ ಅ... ಹಣ ತೆಗೆದುಕೊಳ್ಳದೇ ಇದ್ದರೆ, ನಮಗೆ ಓಟು ಹಾಕುವು... ಹಾಗಾಗಿಯೇ ಹಣ ತೆಗೆದುಕೊಳ್ಳುತ್ತಿಲ್ಲ ಎಂಬ ಭಾ... ಬಂದುಬಿಡುತ್ತದೆ. ಹಾಗಾಗಿ ಅಂತಹ ಮುಜುಗರವೇ... ಇಲ್ಲದೇ ಈ ವ್ಯವಹಾರ ನಡೆಯುತ್ತದೆ. ಚುನಾ... ಯೆಂಬುದು ಈ ರೀತಿಯ ಒಂದು ವ್ಯವಹಾರ ಆಗಿಬಿ... ಅಲ್ಲಿ ರಾಜಕೀಯಕ್ಕೆ ಅವಕಾಶವಿಲ್ಲ. ಚುನಾವಣಾ ರಂಗ... ಚಳವಳಿಯ ಭಾಗ ಎಂದು ಪರಿಗಣಿಸುವ ಎಲ್ಲರೂ, ... ಒಂದು ವ್ಯವಹಾರ ದಂತಲ್ಲದೇ, ಒಂದು ಸಂಪ್ರದಾ... ದಂತಲ್ಲದೇ, ಅನಗತ್ಯ ಸಂಗತಿಗಳ ಸುತ್ತುವ ಸರ್ಕಸ್ಸಿನಂತ... ಜನಾಭಿಪ್ರಾಯದ ಅಭಿವ್ಯಕ್ತಿಯನ್ನಾಗಿಸಲು ಗಂಭೀರ ಪ್ರ... ಹಾಕಬೇಕಿದೆ.

...ುವ ಮತ್ತು ಹಿರಿಯ ಹೋರಾಟಗಾರರೊಂದಿಗೆ ದೆಹಲಿಯಲ್ಲಿ ನಾಲ್ಕು ದಿನ



...ೇಣುಕಾ, ಉಮರ್ ಮತ್ತು ವಿಶ್ವಾಸ್‌ನೊಂದಿಗೆ...



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

...ಳೆದ ತಿಂಗಳು ಮಂಗಳೂರಿನಿಂದ ಗೆಳತಿ ವಿದ್ಯಾ ...ರ್ ಫೋನ್ ಮಾಡಿ "ಮಾರ್ಚ್ ತಿಂಗಳಲ್ಲಿ ...ಯಲ್ಲಿ ಮಾನವ ಹಕ್ಕು ಹೋರಾಟಗಾರರ ರಾಷ್ಟ್ರೀಯ ...ರ ಸಂಕಿರಣ ಇದೆ. ನೀವು ಭಾಗವಹಿಸುತ್ತೀರಾ?" ...ು ಕೇಳಿದಾಗ ತಕ್ಷಣವೇ ಒಪ್ಪಿಕೊಂಡಿದ್ದೆ. ಆ ವಿಚಾರ ...ಷ್ಠಿಯು ಪತ್ರಿಕೆ ಮುದ್ರಣಕ್ಕೆ ಹೋಗುವ ದಿನವೇ ...ದ್ದರಿಂದ ಕಳೆದ ವಾರದ ಪತ್ರಿಕೆಯನ್ನು ನಮ್ಮ ತಂಡ ...ು ದಿನಗಳ ಮುಂಚಿತವಾಗಿಯೇ ಸಿದ್ದಪಡಿಸಿತು.

...ಮಾರ್ಚ್ 22 ಮತ್ತು 23ರಂದು ನಡೆದ ಆ ...ರಸಂಕಿರಣ ಅದ್ಭುತವಾಗಿತ್ತು. ಇವತ್ತು ಫ್ಯಾಸಿಸಂ ...ವವಾಡುತ್ತಿರುವುದರಿಂದ ದೇಶದ ನಾನಾ ಭಾಗಗಳಲ್ಲಿ ...ರವಾದ ನಾನಾ ವಿಧದ ಹೋರಾಟಗಳನ್ನು ...ುತ್ತಿರುವವರನ್ನೆಲ್ಲ ದೆಹಲಿಗೆ ಆಹ್ವಾನಿಸಲಾಗಿತ್ತು. ...ದಲನೆ ಗೋಷ್ಠಿ 'ಸಾಂವಿಧಾನಿಕ ಹಕ್ಕು ಮತ್ತು ...ತ್ರ್ಯವನ್ನು ರಕ್ಷಿಸುವ ಬಗೆ' ಎಂಬುದಾಗಿತ್ತು. ಅದರಲ್ಲಿ ...ವ ಹಕ್ಕುಗಳ ವಕೀಲೆ ವೃಂದಾ ಗ್ರೋವರ್, ನಕಲಿ ...ಕೌಂಟರ್ ಮತ್ತು ಲಾಕಪ್ ಡೆತ್‌ಗಳ ವಿರುದ್ಧ ...ರಾಟ ಮಾಡುತ್ತಿರುವ ಮಿಹಿರ್ ದೇಸಾಯಿ, ಇತ್ತೀಚೆಗೆ ...ಳು ಗಲಾಟೆ ಮಾಡಿದ ರಾಮ್ಜಸ್ ಕಾಲೇಜಿನಲ್ಲಿ ...ಾಸ ಪ್ರಾಧ್ಯಾಪಕರಾಗಿರುವ ಮುಕುಲ್ ಮಾಂಗ್ಲಿಕ್ ... ಅನುಭವಗಳನ್ನು ಹಂಚಿಕೊಂಡರು. ಆ ಗೋಷ್ಠಿಯ ...ತೆ ವಹಿಸಿದ್ದವರು ಹಿರಿಯ ಮಹಿಳಾವಾದಿ ಉಮಾ ...ರ್ಜಿ.


...ೇಶ್ ಅರೋಳಿ, ಪುರುಷೋತ್ತಮ್ ಬಿಳಿಮಲೆ ಮತ್ತು ರೇಣುಕಾ ಜೊತೆ...


ಬ್ರಹ್ಮಪುತ್ರ ಹಾಸ್ಟೆಲ್‌ನಲ್ಲಿ ಕನ್ಹಯ್ಯನೊಂದಿಗೆ....

...ರಡನೆ ಗೋಷ್ಠಿ 'ಪ್ರತಿಭಟನೆಗಳ ದಮನ ಮತ್ತು ... ಎದುರಿಸುವ ಬಗೆ' ಕುರಿತದ್ದಾಗಿತ್ತು. ಆಮ್ನೆಸ್ಟಿ ... ವಿಜೇತ, 'ಪೀಪಲ್ಸ್ ವಾಚ್' ಎಂಬ ಮಾನವ ... ಸಂಘಟನೆಯ ಸ್ಥಾಪಕ ಮತ್ತು ಎರಡು ದಿನಗಳ ...ಸಂಕಿರಣದ ಆಯೋಜಕರಲ್ಲಿ ಒಬ್ಬರಾಗಿದ್ದ ಹೆನ್ರಿ ... ಅವರ ಅಧ್ಯಕ್ಷತೆಯಲ್ಲಿ ನಡೆದ ಆ ಗೋಷ್ಠಿ ...ಮವಾಗಿತ್ತು. ತಮಿಳುನಾಡಿನಲ್ಲಿ ಕೂಡಂಕುಲಂ ಅಣು ...ದ ವಿರುದ್ಧ ಸಾವಿರಾರು ಜನರನ್ನು ಸಂಘಟಿಸಿ ...ಾಡಿದ್ದ ಎಸ್.ಪಿ. ಉದಯಕುಮಾರ್ ಆಡಳಿತ ವ್ಯವಸ್ಥೆ ...ತಮ್ಮ ವಿರೋಧವನ್ನು ಹತ್ತಿಕ್ಕಲು ಯತ್ನಿಸಿತು ಎಂದು ...ರಾಗಿ ತಿಳಿಸಿದರು. ಜೆಎನ್‌ಯುನಲ್ಲಿ ಭಾಷಾಧ್ಯಯನ ...ದಲ್ಲಿ ಪ್ರೊಫೆಸರ್ ಆಗಿರುವ ಆಯಿಶಾ ಕಿದ್ವಾಯಿ ... ಇವತ್ತು ಹೇಗೆ ತಮ್ಮ ವಿವಿಗೆ ಮಸಿ ಬಳಿಯಲಾಗಿದೆ ... ತಮ್ಮ ನೋವನ್ನು ತೋಡಿಕೊಂಡರು. ಪಶ್ಚಿಮ ...ದಲ್ಲಿ ರಸ್ತೆ ಬದಿ ಮಾರಾಟಗಾರರ ಪರವಾಗಿ ...ಾಡುತ್ತಿರುವ ಶಕ್ತಿಮಾನ್ ಘೋಶ್ ಇವತ್ತು ...ಾಲಯಗಳೂ ಜನಸಾಮಾನ್ಯರ ಪರ ನಿಂತಿಲ್ಲ ...ದನ್ನು ಬಿಡಿಸಿಟ್ಟರು. ಹೈದರಾಬಾದ್ ಕೇಂದ್ರ ...ವ್ಯಾಲಯದಲ್ಲಿ ರೋಹಿತ್ ವೇಮುಲನೊಂದಿಗೆ ...ಹೊರಹಾಕಲ್ಪಟ್ಟಿದ್ದ ಪ್ರಶಾಂತ್ ಧೋಂತ ನ್ಯಾಯಕ್ಕಾಗಿ ...ನ ತಾಯಿ ಮತ್ತು ದಲಿತರ ಹೋರಾಟಗಳು ...ದಿಲ್ಲ ಎಂದು ಹಣಕೊಟ್ಟರು. ಒಡಿಸ್ಸಾದಲ್ಲಿ ...ಗಳ ಪರ ಹೋರಾಡುತ್ತಿರುವ ಪ್ರಫುಲ್ಲಾ ಸಮಾಂತರ ...ಕೈ ಎಂಬ ದೈತ್ಯ ಅಂತರರಾಷ್ಟ್ರೀಯ ಕಂಪನಿಯ ... ನಡೆದ ಹೋರಾಟದ ವಿವರಗಳು, ಅದರಿಂದಾಗಿ ಪೋಸ್ಕೋಗೆ ಸರ್ಕಾರ ಮಂಜೂರು ಮಾಡಿದ್ದ ಭೂಮಿಯ ಕರಾರು ರದ್ದಾಗಿದ್ದು, ಆದರೂ ಇಲ್ಲಿಯ ತನಕ ಆ ಭೂಮಿ ಆದಿವಾಸಿಗಳಿಗೆ ಸಿಗದಿರುವುದರ ಬಗ್ಗೆ ತಿಳಿಸಿದರು. ರಾಖಿ ಸಾವಂತ್ ಅವರು ಗುರ್‌ಗಾಂವ್‌ನಲ್ಲಿರುವ ಮಾರುತಿ ಸುಜುಕಿ ಕಂಪನಿಯ ಕಾರ್ಮಿಕರು ನಡೆಸಿದ ಹೋರಾಟ ಮತ್ತು ಅದನ್ನು ಹೇಗೆ ಪ್ರಭುತ್ವ ದಮನ ಮಾಡಲು ಯತ್ನಿಸಿತು ಎಂಬುದರ ಬಗ್ಗೆ ಮಾತನಾಡಿದರು.

ಅವತ್ತಿನ ಕೊನೆಯ ಗೋಷ್ಠಿ ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತದ್ದು. ಹಿರಿಯ ಪತ್ರಕರ್ತ ಹರ್‌ತೋಷ್ ಸಿಂಗ್ ಬಾಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ಆ ಗೋಷ್ಠಿಯಲ್ಲಿ ಗೆಳತಿ ತೀಸ್ತಾ ಸೆಟಲ್‌ವಾದ್, 'ಮುಜಫರ್‌ನಗರ್ ಬಾಕಿ ಹೈ' ಎಂಬ ಸಾಕ್ಷ್ಯಚಿತ್ರವನ್ನು ನಿರ್ದೇಶಿಸಿರುವ ನಕುಲ್ ಸ್ವಾಹ್ನೆ, ಕಾಶ್ಮೀರದಲ್ಲಿ ಪತ್ರಕರ್ತರಾಗಿರುವ ನಜೀಬ್ ಮುಬಾರಕಿ ಮತ್ತು ನಾನು ಭಾಗವಹಿಸಿದೆವು. ಉತ್ತರ ಪ್ರದೇಶದ ಫಲಿತಾಂಶ ಕಂಡು ದಿಗಿದಿಗಿ ಉರಿಯುತ್ತಿದ್ದ ತೀಸ್ತಾ ಜಾತ್ಯತೀತ ಎಂದು ಬಣ್ಣಿಸಿಕೊಳ್ಳುವ ರಾಜಕೀಯ ಪಕ್ಷಗಳ ಢೋಂಗಿತನ ಮತ್ತು ನಿಜವಾಗಿಯೂ ಜಾತ್ಯತೀತರಾದ ಚಿಂತಕರ ಅಸಹಾಯಕತೆ ಬಗ್ಗೆ ಮಾತನಾಡಿದರು. ನಕುಲ್ ಅಭಿವ್ಯಕ್ತಿಯ ವಿವಿಧ ಆಯಾಮಗಳ ಬಗ್ಗೆ ಚರ್ಚಿಸಿದರು. ನಜೀಬ್ ಕಾಶ್ಮೀರದ ಇಂದಿನ ಸ್ಥಿತಿಗತಿಗಳನ್ನು ವಿವರಿಸುತ್ತಾ ಜಾತ್ಯತೀತರು, ಜನಪರರು ಎನಿಸಿಕೊಳ್ಳುವವರು ಪ್ಯಾಲೆಸ್ತೀನಿಯರ ಹೋರಾಟಕ್ಕೆ ಬೆಂಬಲ ಸೂಚಿಸುತ್ತಾರೆಯೇ ಹೊರತು ಕಾಶ್ಮೀರಿಗಳ ಪರ ನಿಲ್ಲುವುದಿಲ್ಲ ಎಂದು ಎಲ್ಲರನ್ನು ತರಾಟೆಗೆ ತಗೆದುಕೊಂಡರು. ನಾನು ಕರ್ನಾಟಕದಲ್ಲಿಯ ಇವತ್ತಿನ ವಿದ್ಯಮಾನಗಳನ್ನು ವಿವರಿಸಿ, ಕಲ್ಬುರ್ಗಿ, ಯು.ಆರ್.ಅನಂತಮೂರ್ತಿ, ಕೆ.ಎಸ್.ಭಗವಾನ್, ಯೋಗೇಶ್ ಮಾಸ್ಟರ್ ಅವರುಗಳ ಮೇಲಾದ ದಾಳಿ, ಅದರ ಹಿಂದಿರುವ ಭುವಿತ್ ಶೆಟ್ಟಿ, ನರೇಶ್ ಶೆಣೈ ಮತ್ತು ಇತರೆ ಚೆಡ್ಡಿಗಳ ಬಗ್ಗೆ ಹೇಳಿ ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಗಳ ಬಗ್ಗೆ ನನ್ನ ಆತಂಕವನ್ನು ಹಂಚಿಕೊಂಡೆ.

ನಮ್ಮ ಗೋಷ್ಠಿ ನಡೆಯುತ್ತಿದ್ದಾಗಲೇ ನನ್ನ 'ಪುತ್ರ' ಕನ್ಹಯ್ಯನಿಂದ ಫೋನ್ ಬಂತು. "ಎಲ್ಲಿದ್ದೀರಿ?" ಎಂದ ಕನ್ಹಯ್ಯ. "ದೆಹಲಿಯಲ್ಲಿದ್ದೀನಿ" ಅಂದೆ. "ಹಾಗಾದರೆ ಯಾಕೆ ಇನ್ನೂ ಜೆಎನ್‌ಯುಗೆ ಬಂದಿಲ್ಲ?" ಎಂದು ಪ್ರಶ್ನಿಸಿದ. ವಿಚಾರಸಂಕಿರಣ ಮುಗಿಸಿ ಶುಕ್ರವಾರ ಬರುತ್ತೇನೆ ಎಂದೆ.

ಅವತ್ತಿನ ಸಭೆ ಮುಗಿದ ನಂತರ ನಜೀಬ್ ಮತ್ತು ನಾನು ಸ್ವಲ್ಪ ಹೊತ್ತು ಕಾಶ್ಮೀರದ ಬಗ್ಗೆ ಚರ್ಚಿಸುತ್ತಾ ರಾಜೇಂದ್ರ ಭವನದ ಮೆಟ್ಟಿಲ ಮೇಲೆ ಕೂತಿದ್ದೆವು. ನಕುಲ್ ಸ್ವಾಹ್ನೆ ನಮ್ಮನ್ನು ಸೇರಿದ. "ನಾನು ನಿನ್ನ ಸಿನಿಮಾ ನೋಡಿಲ್ಲ" ಅಂದಿದ್ದಕ್ಕೆ "ನೀವು ಎಷ್ಟು ದಿನ ದೆಹಲಿಯಲ್ಲಿ ಇರುತ್ತೀರಿ? ನಿಮಗೆ ಒಂದು ಕಾಪಿ ತಲುಪಿಸುತ್ತೇನೆ" ಎಂದ. ಅದಕ್ಕೆ ವ್ಯವಸ್ಥೆ ಮಾಡಿಕೊಂಡೆವು. ಗೆಳತಿ ಭಾವದೀಪ್ ಕಾಂಗ್ ಮನೆಯಲ್ಲಿ ತಂಗಿದ್ದ ನಾನು ಅವತ್ತು ರಾತ್ರಿ ನಮ್ಮ ಮಾಸಿಕ 'ಗ್ರಿಪ್' ಪತ್ರಿಕೆಯ ಕೆಲಸ ಮುಗಿಸಿ ನಿದ್ರೆ ಮಾಡುವ ಹೊತ್ತಿಗೆ ರಾತ್ರಿ ಎರಡು ಗಂಟೆ ದಾಟಿತ್ತು.

ಮಾರನೆ ದಿನವೂ ಹಲವಾರು ಮಹಿಳಾವಾದಿಗಳು, ಮಾನವಹಕ್ಕು ಹೋರಾಟಗಾರರು, ಜನಪರ ಚಿಂತಕರು ಮಾತನಾಡಿದರು. ನಾವೆಲ್ಲರೂ ಜೊತೆಗೂಡಿ ಜನಪರವಾದ ಒಂದು ರಾಷ್ಟ್ರೀಯ ಮಟ್ಟದ ಒಕ್ಕೂಟವನ್ನು ರಚಿಸುವ ಅಗತ್ಯತೆ ಬಗ್ಗೆ ಮಾತುಕತೆಗಳು ನಡೆದವು.

ಅವತ್ತು ಸಂಜೆ ಭಾವದೀಪ್ ನಮ್ಮಿಬ್ಬರಿಗೂ ಆತ್ಮೀಯರಾದ ಮೂವರು ಮಿತ್ರರನ್ನು ತನ್ನ ಮನೆಗೆ ಆಹ್ವಾನಿಸಿದ್ದಳು. ಅವರೆಲ್ಲರೂ ಪತ್ರಕರ್ತರು ಮತ್ತು ಲೇಖಕರು. ಮನೋಜ್ ಮಿಟ್ಟ ಟೈಮ್ಸ್ ಆಫ್ ಇಂಡಿಯಾದಲ್ಲಿ ನನ್ನ ಮತ್ತು ಭಾವದೀಪ್‌ಳ ಸಹೋದ್ಯೋಗಿ ಆಗಿದ್ದ. ಆನಂತರ ಆತ ಇಂದಿರಾ ಗಾಂಧಿಯ ಹತ್ಯೆಯ ನಂತರ ದೆಹಲಿಯಲ್ಲಿ ನಡೆದ ಗಲಭೆಗಳನ್ನು ಕುರಿತು 'ವೆನ್ ಅ ಟ್ರೀ ಶುಕ್ ಡೆಲ್ಲಿ' ಎಂಬ ಪುಸ್ತಕವನ್ನು ಬರೆದ. ಮೂರು ವರ್ಷಗಳ ಹಿಂದೆ 2002ರ ಗುಜರಾತ್ ಗಲಭೆಗಳಲ್ಲಿ ಮೋದಿಯ ಪಾತ್ರ ಕುರಿತು 'ದಿ ಫಿಕ್ಷನ್ ಆಫ್ ಫ್ಯಾಕ್ಟ್ ಫೈಂಡಿಂಗ್' ಎಂಬ ಪುಸ್ತಕವನ್ನು ಬರೆದಿದ್ದಾನೆ. ಅಲ್ಲಂ ಶ್ರೀನಿವಾಸ್ ಕೂಡ ಹಿಂದೆ ನಮ್ಮ ಜೊತೆ ಕೆಲಸ ಮಡಿದವನೇ. ಆತ ಅಂಬಾನಿ ಸಹೋದರರ ನಡುವಿನ ಕಾಳಗ ಕುರಿತು ಮತ್ತು ಭಾರತೀಯ ಕ್ರಿಕೆಟ್ ಮಂಡಳಿಯಲ್ಲಿ ನಡೆಯುವ ಹಗರಣಗಳ ಕುರಿತು ಪುಸ್ತಕಗಳನ್ನು ಬರೆದಿದ್ದಾನೆ. ಪಾರ್ಸ ವೆಂಕಟೇಶ್ವರ ರಾವ್ ಕೂಡ ಪತ್ರಕರ್ತ ಮತ್ತು ಲೇಖಕ. ಹರಟೆ, ತಮಾಷೆ, ಪರಸ್ಪರ ಅಭಿಮಾನ ಮತ್ತು ಬೆಂಬಲ, ಹೋರಾಟದ ಹಾದಿ, ಯೌವನದ ದಿನಗಳ ಮೆಲುಕು, ಇತ್ಯಾದಿಗಳಲ್ಲಿ ಅವತ್ತಿನ ರಾತ್ರಿ ಕರಗಿಹೋಯಿತು.

ಮಾರನೆ ಬೆಳಗ್ಗೆ ಲೇಖಕಿ ರೇಣುಕಾ ನಿಡಗುಂದಿ ನನ್ನನ್ನು ದೆಹಲಿ ಕರ್ನಾಟಕ ಸಂಘಕ್ಕೆ ಕರೆದುಕೊಂಡು ಹೋದರು. ಮುಂದಿನ ಎರಡು ದಿನಗಳ ನನ್ನ ವಾಸ್ತವ್ಯಕ್ಕೆ ಸಂಘದ ಒಂದು ಕೊಠಡಿಯಲ್ಲಿ ಹಿರಿಯ ಚಿಂತಕರಾದ ಪುರುಷೋತ್ತಮ ಬಿಳಿಮಲೆ ವ್ಯವಸ್ಥೆ ಮಾಡಿದ್ದರು. ಹನ್ನೊಂದು ಗಂಟೆಗೆ ನಾವೆಲ್ಲ ಜೆಎನ್‌ಯು ತಲುಪಿದೆವು. ಆದರೆ ವಿವಿಯನ್ನು ಒಂದು ರೀತಿಯ ಹತಾಶ ವಾತಾವರಣ ಕವಿದಿತ್ತು. ಯಾಕೆಂದರೆ ಹಿಂದಿನ ದಿನವೇ ಯುಜಿಸಿ ಹೊಸ ಪ್ರವೇಶಾತಿ ನಿಯಮಗಳನ್ನು ಪ್ರಕಟಿಸಿತ್ತು. (ಆ ವಿವರಗಳನ್ನು ಮುಂದಿನ ವಾರ ಬರೆಯುವೆ.) ಆ ನಿಯಮಗಳ ಉದ್ದೇಶ ಜೆಎನ್‌ಯು ಕತ್ತು ಹಿಸುಕಿ ಅದನ್ನು ನಾಶಮಾಡುವುದೇ ಆಗಿದೆ. ವಿವಿಯಲ್ಲಿ ಕನ್ನಡ ಪೀಠದ ಅಧ್ಯಕ್ಷರಾಗಿರುವ ಬಿಳಿಮಲೆ ಅವರ ಕೊಠಡಿಯಲ್ಲಿ ಕೂತಿದ್ದಾಗ ಯುವ ಕವಿ ರಮೇಶ್ ಅರೋಲಿ ಮತ್ತು ಸಂಶೋಧಕ ಅಲಿ ಬಂದರು. ನಾವೆಲ್ಲರೂ ವಿವಿಯಲ್ಲಿ ಸುತ್ತಾಡಿದೆವು. ಈ ಮಧ್ಯೆ ಮಿತ್ರ ವಿಶ್ವಾಸ್ ಶಿವಪುರ್ ನನ್ನೊಂದಿಗೆ ಜೆಎನ್‌ಯುಗೆ ಭೇಟಿ ನೀಡಲೆಂದೇ ದೆಹಲಿಗೆ ಬಂದಿದ್ದ. ಆದರೆ ಕನ್ಹಯ್ಯ, ಉಮರ್ ಖಾಲಿದ್, ಪ್ರಸ್ತುತ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಮೋಹಿತ್ ಪಾಂಡೆ... ಯಾರೂ ನನ್ನ ಫೋನ್ ಕರೆಗಳನ್ನು ಎತ್ತಲೇ ಇಲ್ಲ. ಯಾಕೆಂದರೆ ಅವರೆಲ್ಲರೂ ಹೊಸ ಪ್ರವೇಶಾತಿ ನಿಮಯಗಳ ವಿರುದ್ಧ ಯುಜಿಸಿ ಕಚೇರಿಯ ಮುಂದೆ ಮಧ್ಯಾಹ್ನ ಒಂದು ಗಂಟೆಯಿಂದ ಪ್ರತಿಭಟಿಸಲು ಸಜ್ಜಾಗುತ್ತಿದ್ದರು. ಇದೆಲ್ಲದರ ಮಧ್ಯೆ ಜೆಎನ್‌ಯುನಲ್ಲಿ ಇತಿಹಾಸ ವಿಭಾಗದಲ್ಲಿ ಪ್ರಾಧ್ಯಾಪಕಿ ಆಗಿರುವ ಮೂವತ್ತು ವರ್ಷಗಳ ಗೆಳತಿ ಜಾನಕಿ ನಾಯರ್ ತನ್ನೆಲ್ಲ ಕೆಲಸಗಳ ಒತ್ತಡದ ನಡುವೆಯೂ ನಮ್ಮೆಲ್ಲರಿಗೆ ಅಡುಗೆ ಮಾಡಿ ಕಾಯುತ್ತಿದ್ದರು. ಅಲ್ಲಿ ಊಟ ಮುಗಿಸುವ ಹೊತ್ತಿಗೆ ನೂರಾರು ವಿದ್ಯಾರ್ಥಿಗಳು ಯುಜಿಸಿ ಕಡೆಗೆ ಹೊರಟರು. ಮೋದಿಯ ಫ್ಯಾಸಿಸ್ಟ್ ಸರ್ಕಾರದ ವಿರುದ್ಧ ಪ್ರತಿಭಟಿಸುತ್ತಲೇ ಇರುವ ನಾನು ಇನ್ನೇನು ಮಾಡುವುದು? ಸಹಜವಾಗಿಯೇ ವಿದ್ಯಾರ್ಥಿಗಳಿಗೆ ನನ್ನ ಬೆಂಬಲ ಸೂಚಿಸಲು ನಾನೂ ಯುಜಿಸಿ ಕಚೇರಿಗೆ ಹೋಗಲು ನಿರ್ಧರಿಸಿದೆ. ಜೊತೆಗೆ ವಿಶ್ವಾಸ್, ರೇಣುಕಾ ಮತ್ತು ಅಲಿ ಬಂದರು. ಸುಡುವ ಬಿಸಿಲಿನಲ್ಲೇ ಪ್ರತಿಭಟನೆ ಸಂಜೆ ಆರು ಗಂಟೆಯ ತನಕ ಮುಂದುವರೆಯಿತು. ತಮ್ಮ ಮನವಿಯನ್ನು ಸ್ವೀಕರಿಸಬೇಕೆಂದು ವಿದ್ಯಾರ್ಥಿಗಳ ಹಟ್ಟು, ಸ್ವೀಕರಿಸುವುದಿಲ್ಲ ಎಂದು ಯುಜಿಸಿ ಹಠ... ನಡುನಡುವೆ ಕನ್ಹಯ್ಯ, ಉಮರ್ ಮತ್ತು ಮೋಹಿತ್ ಬಂದು ನನ್ನನ್ನು ಮಾತನಾಡಿಸುತ್ತಿದ್ದರು.


ಅವತ್ತು ಸಂಜೆ ಸ್ವಾಗತ್ ಎಂಬ ಮಂಗಳೂರು ಮೀನು ಹೋಟೆಲ್‌ನಲ್ಲಿ ಊಟ. ವಿಶ್ವಾಸ್, ರೇಣುಕಾ, ನಾನು, ಬಿಳಿಮಲೆ, ರಮೇಶ್ ಮತ್ತು ಪತ್ರಕರ್ತ ಮಿತ್ರ ಉಮಾಪತಿ ಊಟ ಮುಗಿಸಿದ ನಂತರ ಹೊರಗಡೆ ಫುಟ್‌ಪಾತ್ ಮೇಲೆ ರಮೇಶರಿಂದ ಕಾವ್ಯವಾಚನ! ಮಧ್ಯರಾತ್ರಿ ಕೊಠಡಿ ಸೇರುವ ಹೊತ್ತಿಗೆ ನನಗೆ ಸುಸ್ತೋ ಸುಸ್ತು.

ಮಾರನೆ ಬೆಳಗ್ಗೆ ಒಂದಿಷ್ಟು ಶಾಪಿಂಗ್. ಆಮೇಲೆ ವಿಶ್ವಾಸ್ ಮತ್ತು ನಾನು ಜೆಎನ್‌ಯುಗೆ ಹಾಜರ್. ಒಂದು ಸಾವಿರ ಎಕರೆಗಳಲ್ಲಿ ಹರಡಿಕೊಂಡಿರುವ ಕ್ಯಾಂಪಸ್ ನೋಡಿ "ಇದು ಕಾಡು ತರಹ ಇದೆ" ಎಂದು ವಿಶ್ವಾಸ್ ಬೆಕ್ಕಸಬೆರಗಾದ. ಕಾಲುನಡಿಗೆಯಲ್ಲೇ ಸುತ್ತಾಡುತ್ತಾ ಜೆಎನ್‌ಯುಎಸ್‌ಯು ಕಚೇರಿ ತಲುಪಿದೆವು. ಅಲ್ಲಿ ರಾಮ ನಾಗ ಇದ್ದ. ಬಡ ಆದಿವಾಸಿ ಕುಟುಂಬದಿಂದ ಬಂದಿರುವ ರಾಮ ಒಡಿಸಾದ ಅತಿ ಹಿಂದುಳಿದ ಪ್ರದೇಶದವನು. ಆತ ಇಂಜಿನಿಯರ್ ಅಥವಾ ಡಾಕ್ಟರ್ ಆಗಿದ್ದರೆ ಆತನ ಕುಟುಂಬದ ಆರ್ಥಿಕ ಸ್ಥಿತಿ ಉತ್ತಮಗೊಳುತ್ತಿತ್ತು. ಆದರೆ ರಾಮನಿಗೆ ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜಿನ ಶುಲ್ಕ ಕಟ್ಟುವುದು ಕಷ್ಟವಾಗಿತ್ತು. ಆದ್ದರಿಂದ ಕಡಿಮೆ ದರದಲ್ಲಿ ವಿದ್ಯೆ ಕೊಡುವ ಜೆಎನ್‌ಯು ಆಯ್ಕೆ ಮಾಡಿಕೊಂಡ. ಇವತ್ತು ಆತ ಕೃಷಿ ವಲಯದಲ್ಲಿ ಕಾರ್ಪೊರೇಟ್ ಕಂಪನಿಗಳ ಪಾತ್ರದ ಬಗ್ಗೆ ಎಮ್‌ಫಿಲ್ ಮಾಡುತ್ತಿದ್ದಾನೆ. ಹೋದ ವರ್ಷ ರಾಮ ವಿವಿಯ ವಿದ್ಯಾರ್ಥಿ ಸಂಘದಲ್ಲಿ ಪದಾಧಿಕಾರಿ ಆಗಿದ್ದರಿಂದ ಆತನನ್ನೂ 'ದೇಶದ್ರೋಹಿ' ಎಂದು ಮೋದಿಯ ಗೂಂಡಾ ಪಡೆ ಕರೆದಿತ್ತು. ಆತನ ಜೊತೆ ಮಾತನಾಡುತ್ತಿದ್ದಾಗ ಮೋಹಿತ್ ಬಂದ. ಪಕ್ಕದಲ್ಲೇ ಇರುವ ಕ್ಯಾಂಟೀನ್‌ನಲ್ಲಿ ಹೊಸ ಪ್ರವೇಶಾತಿ ನಿಯಮಗಳಿಂದ ಆಗುವ ಅಪಾಯಗಳ ಬಗ್ಗೆ ಚರ್ಚಿಸಿದೆವು. ಹಾಗೆಯೇ ಮೋಹಿತ್ ಉತ್ತರ ಪ್ರದೇಶದವನಾದ್ದರಿಂದ ಅಲ್ಲಿನ ಚುನಾವಣಾ ಫಲಿತಾಂಶಗಳ ಬಗ್ಗೆಯೂ ಮಾತುಕತೆ ಆಯಿತು. ಆಗ ಮೋಹಿತ್‌ನನ್ನು ಮಾತನಾಡಿಸಲು ಇಮ್ರಾನ್ ಪ್ರತಾಪ್‌ಗಡಿ ಬಂದರು. ಕವಿ ಮತ್ತು ಹಾಡುಗಾರರಾಗಿರುವ ಇಮ್ರಾನ್ ಜೆಎನ್‌ಯು ವಿದ್ಯಾರ್ಥಿಗಳ ಜೊತೆ ನಿಂತಿದ್ದಾರಲ್ಲದೆ ಕಳೆದ ವರ್ಷ ನಾಪತ್ತೆಯಾದ ನಜೀಬ್ ಎಂಬ ವಿದ್ಯಾರ್ಥಿಯ ಕುರಿತು ಬರೆದಿರುವ ಒಂದು ಹಾಡು ವೈರಲ್ ಆಗಿದೆ. ಅವರು ಜೆಎನ್‌ಯುನಲ್ಲಿ ಮಾಡಿರುವ ಭಾಷಣ ಮತು ನಜೀಬ್ ಕುರಿತ ಹಾಡನ್ನು ನಾನು ಯುಟ್ಯೂಬ್‌ನಲ್ಲಿ ನೋಡಿದ್ದರಿಂದ ಅವರನ್ನು ಗುರುತಿಸಿ ನನ್ನ ಪರಿಚಯ ಮಾಡಿಕೊಂಡೆ.

ಒಂದು ಗಂಟೆಯ ನಂತರ ಕನ್ಹಯ್ಯ ಬಂದ. ಅವನಿಗೆ ಹೇಳಿದೆ: "ವಿಶ್ವಾಸ್ ನನ್ನನ್ನು ಕೇಳುತ್ತಿರುತ್ತಾನೆ 'ಇಂತಹ ರಾಜಕೀಯ ಸ್ಥಿತಿಯಲ್ಲೂ ಅದು ಹೇಗೆ ನೀನು ಮತ್ತು ಕನ್ಹಯ್ಯ ತರಹದವರು ಉತ್ಸಾಹ ಕಳೆದುಕೊಳ್ಳದೆ ಆಶಾಭಾವನೆಯನ್ನು ಹೊಂದಿರುತ್ತೀರ' ಎಂದು." ಅದಕ್ಕೆ ನಕ್ಕ ಕನ್ಹಯ್ಯ "ಇವತ್ತು ನಾವು ಭಯ ಪಡಬೇಕಾಗಿರುವುದು ಮೋದಿ ಮತ್ತು ಆರೆಸ್ಸೆಸ್ ಬಗ್ಗೆ ಅಲ್ಲ, ಬದಲಾಗಿ ನಿರಾಶೆ ಮತ್ತು ಭೀತಿಯ ಬಗ್ಗೆ" ಎಂದ. ಕೋಮುವಾದವನ್ನು ಹೇಗೆ ಎದುರಿಸಬೇಕೆಂದು ಚರ್ಚಿಸಿದೆವು. ನಾನಿದ್ದಲ್ಲಿಗೆ ಬರುತ್ತೇನೆ ಎಂದಿದ್ದ ಉಮರ್ ಇನ್ನೂ ನಾಪತ್ತೆ ಆಗಿದ್ದ. "ಬಾ, ನನ್ನ ಹಾಸ್ಟೆಲ್ ತೋರಿಸುತ್ತೇನೆ" ಎಂದು ಕನ್ಹಯ್ಯ ನಮ್ಮನ್ನು ಬ್ರಹ್ಮಪುತ್ರ ಹಾಸ್ಟೆಲ್‌ಗೆ ಕರೆದುಕೊಂಡು ಹೋದ. ಅಲ್ಲಿ ಅತಿಥಿಗಳೊಂದಿಗೆ ಚರ್ಚೆ ಮಾಡಲು ಒಂದು ರೂಮ್ ಇದೆ. ಅಲ್ಲಿಗೆ ಹೋದೆವು. ನನಗೆ ಆಮ್ಲೆಟ್ ಮತ್ತು ಟೀ ತರಿಸಿಕೊಟ್ಟ. ನಾನು ಅವನಿಗೆಂದು ಖರೀದಿಸಿದ್ದ ಬಟ್ಟೆಗಳನ್ನು


►► 11


ಬೈಂದೂರು: ಬುಡುಬುಡಿಕೆ ಹೆಗ
ಬಿಜೆಪಿ ಹುರಿಯಾಳು ಆಗಬಹುದಾ





ಕಡಲತಡಿಯ ಉಡುಪಿ ಜಿಲ್ಲೆಯ ಬಿಜೆಪಿಯಲ್ಲೀಗ ಒಂಥರಾ ಅಲ್ಲೋಲಕಲ್ಲೋಲ. ಹಿಂದೂ ಹೆಣ್ಣಿನ ಮಾನ-ಗೋವಿನ ಪ್ರಾಣ ಪಣಕ್ಕಿಟ್ಟು ಅನೈತಿಕ ಪೊಲೀಸ್‌ಗಿರಿ ಮಾಡಿ ಬಿಜೆಪಿ ಬೆಳೆಸಿದ್ದ ಭಂಡ ಹಿಂದೂತ್ವದ ಪುಂಡರ ಪಡೆಯಲ್ಲಿ ಏನೋ ಅವ್ಯಕ್ತ ತಳಮಳ. ಇರುವೆ ಕಟ್ಟಿದ ಹುತ್ತದಲ್ಲಿ ಘಟಸರ್ಪಗಳು ಒಂದೊಂದಾಗಿ ಬಂದು ಸೇರುತ್ತಿವೆಯೆಂದು ಅಲವತ್ತು ಕೊಳ್ಳುತ್ತಿದೆ ಸಂಘಪರಿವಾರಿ ಪಟಾಲಮ್ಮು. ಹೋದಲ್ಲೆಲ್ಲ ಯಜಮಾನಿಕೆ ನಡೆಸಿ ಮೂಲ ನಿವಾಸಿಗಳ ಆಪೋಷನ ಪಡೆಯುವ ಪಾಳೆಗಾರಿ ಪರಾಕ್ರಮಿ ಜಯಪ್ರಕಾಶ್ ಹೆಗ್ಡೆ ಬಿಜೆಪಿ ಸೇರಿದ ನಂತರವಂತೂ ಜಿಲ್ಲೆಯ ಕೇಸರಿ ಪಾಳೆಯದಲ್ಲಿನ ಗೊಂದಲ ಎಂಬುದು ಮತ್ತಷ್ಟು ಗೋಜಲು-ಗೋಜಲಾಗಿ ಹೋಗಿದೆ.


ಜಯಪ್ರಕಾಶ್ ಹೆಗ್ಡೆ ಯಾನೆ ಪ್ರಕಾಶ್ ಹೆಗ್ಡೆ ದಿಲ್ಲಿ-ಬೆಂಗಳೂರು ಮಟ್ಟದ ಬಿಜೆಪಿಯ ಯಾವ್ಯಾವುದೋ ಕಂತ್ರಿ ಪುಢಾರಿಗಳ ಕಾಲಿಗೆ ಬಿದ್ದು ಅಂತೂ-ಇಂತೂ ಕೋಮುವಾದಿ ಬಳಗದಲ್ಲಿ ಬೆರೆತುಕೊಂಡಿದ್ದಾರೆ. ಶೋಭಾ ಕರಂದ್ಲಾಜೆಯಂಥ ಕೂಗುಮಾರಿಗೆ ಶರಣಾದ ಹೆಗ್ಡೆ ತಾನೀಗ ಅಧಿಕಾರ ರಾಜಕಾರಣದ ಚಕ್ರದಲ್ಲಿ ಮೇಲಕ್ಕೇರುತ್ತಿದ್ದೇನೆಂಬ ಖುಷಿಯಲ್ಲಿದ್ದಾರೆ. ಆದರೆ ಹೆಗ್ಡೆ ತನ್ನ ಮೂರು ದಶಕದ











ರಾಜಕೀಯ ಚರಿತ್ರೆಯ ಮೇಲೆ ತಾನೇ ಮಸಿ ಮಡಿಕೆ ಒಡೆದುಕೊಂಡಂತಾಗಿದೆ! ವಿಜಯಾ ಬ್ಯಾಂಕ್ ನೌಕರರ ಸಂಘಟನೆಯ ಮುಂಚೂಣಿ ಮುಖಂಡತ್ವದಿಂದ ಮೊನ್ನೆ-ಮೊನ್ನೆ ಕಾಂಗ್ರೆಸ್‌ನಿಂದ ಗೇಟ್‌ಪಾಸ್ ಪಡೆದ ನಂತರದ ದಿನಗಳವರೆಗೂ ಹೆಗ್ಡೆಯ ವ್ಯಕ್ತಿತ್ವಕ್ಕೆ ಒಂದು ಪ್ರಭೆಯಿತ್ತು, ಅಧಿಕಾರಕ್ಕಾಗಿಯೇ ಅಲ್ಲ; ಜನರಿಗಾಗಿ, ತತ್ವ-ಸಿದ್ಧಾಂತ, ಮನುಷ್ಯತ್ವಕ್ಕಾಗಿ ಹೋರಾಡುತ್ತಾರೆಂಬ ಭಾವನೆಯಿತ್ತು. ಆದರೆ ಅಧಿಕಾರದ ವ್ಯಾಮೋಹಕ್ಕೆ ಪಕ್ಕಾದ ಪ್ರಕಾಶ್ ಹೆಗ್ಡೆ ಮನುವಾದಿಗಳ ಪಲ್ಲಕ್ಕಿ ಹೊರುವ ಕಾಲಾಳಾಗಿ ರೂಪಾಂತರಗೊಂಡದ್ದು ದುರಂತವೇ ಸರಿ.

ಯಡ್ಡಿ-ಸೋಬಕ್ಕ-ಅಸೋಕಣ್ಣ ವಗೈರೆ ಚೆಡ್ಡಿ ಚತುರರು ಹತಾಶ ಹೆಗ್ಡೆಗೆ ಅದೇನೆಂದು ಆಸೆ ತೋರಿಸಿ ಬುಟ್ಟಿಗೆ ಹಾಕಿಕೊಂಡಿದ್ದಾರೋ ಅದಾತನಿಗೇ ಗೊತ್ತು. ಹೆಗ್ಡೆಯನ್ನು ಬಿಜೆಪಿಯಲ್ಲಿ ಎಮ್ಮೆಲ್ಲೆ ಮಾಡ್ತಾರೆ; ಎಂಪಿ ಮಾಡ್ತಾರೆ; ಮಂತ್ರಿಯೂ ಆಗ್ತಾರೆಂಬ ಗುಲ್ಲುಗಳು ಪುಟಿಪುಟಿದು ಏಳುತ್ತಿವೆ. ಆದರೆ ಸ್ಥಳೀಯ ಮಟ್ಟದಲ್ಲಿ ಹೆಗ್ಡೆಯ ವಲಸೆ ಬಗ್ಗೆ ಬೇಸರ-ಅಸಮಾಧಾನ-ಆಕ್ರೋಶ ಒಳಗೊಳಗೇ ಹೊಗೆಯೆಬ್ಬಿಸಿದೆ! ಪಕ್ಷ ಗೆಲ್ಲುವಷ್ಟು ಮಜಬೂತಾದಾಗ ಹೊರಗಿನಿಂದ ಬರುವವರಿಗೆ ಚಾನ್ಸ್ ಕೊಟ್ಟರೆ ಅಸಲಿ ಹಿಂದೂತ್ವದ ಹೊಡೆದಾಟಗಾರರಿಗೆ ಘೋರ ಅನ್ಯಾಯ ಆಗುತ್ತದೆಯೆಂಬುದು ಕಟ್ಟರ್ ಕೇಸರಿಗಳ ವಾದ.

ಪರಮ ಚೆಡ್ಡಿಯಾಗಿದ್ದ ವಿ.ಎಸ್. ಆಚಾರ್ಯರ ಹಠಾತ್ ನಿರ್ಗಮನದ ನಂತರ ಉಡುಪಿ ಬಿಜೆಪಿಯಲ್ಲಿ ದಿಕ್ಕಿಲ್ಲದ ಅನಾಥಸ್ಥಿತಿ ನೆಲೆ ನಿಂತಿದೆ. ಕಲ್ಲಡ್ಕದ ಚೆಡ್ಡಿ ಹೈಕಮಾಂಡ್ ಅದ್ಯಾಕೋ ಇತ್ತೀಚಿನ ದಿನಗಳಲ್ಲಿ ದಕ್ಷಿಣ ಕನ್ನಡದಲ್ಲೇ ವೀಕ್ ಆಗಿದೆ. ಅಲ್ಲಿ ಸಂಸದ ಕಟೀಲು ನಳಿನ್‌ಕುಮಾರ್ ಬಲಿಗೊಂಡಿದ್ದಾರೆ. ಇಂಥ ಗತಿಗೇಡಿ ಸ್ಥಿತಿಯಲ್ಲಿ ಉಡುಪಿ ಬಿಜೆಪಿಗೆ ನಾಯಕಿಯಾಗಿ ಅವತರಿಸಿರುವಾಕೆಯೇ ಅತಿಥಿ ಸಂಸದೆ ಶೋಭಾ ಕರಂದ್ಲಾಜೆ ಮೇಡಮ್!! ಈ ಸೋಬಕ್ಕನ ಗೇಮ್ ಪ್ಲಾನ್‌ಗೆ ಪ್ರಕಾಶ್ ಹೆಗ್ಡೆ ಬಲಿಯಾಗುತ್ತಾರೆಂಬ ಭವಿಷ್ಯವಾಣಿ ಬಿಜೆಪಿಯ ಯಾವ ಬಣಕ್ಕೂ ಸೇರದ ಪಕ್ಕಾ ಕಮಲಿಗರು ಬತ್ತುರಿಸುತ್ತಿದ್ದಾರೆ. ಬೈಂದೂರು ಬಿಜೆಪಿ ಟಿಕೆಟ್ ಪ್ರಕಾಶ್ ಹೆಗ್ಡೆಗೆ ಅಷ್ಟು ಸುಲಭವಾಗಿ ದಕ್ಕಲಾರದು; ಸಿಕ್ಕರೂ ಗೆಲ್ಲುವುದೂ ಕಷ್ಟವೇ ಎಂಬ ಅಭಿಪ್ರಾಯ ಮೂಡಿದೆ.

ಉಡುಪಿ ಜಿಲ್ಲೆಯ ಅಸೆಂಬ್ಲಿ ಕ್ಷೇತ್ರಗಳ ಪೈಕಿ ಪ್ರಕಾಶ್ ಹೆಗ್ಡೆ ಚಲಾವಣೆಯಲ್ಲಿ ಇರುವುದು ಪ್ರಾಪರ್ ಉಡುಪಿಯಲ್ಲಷ್ಟೇ. ಹಿಂದಾತ ಪಕ್ಷೇತರನಾಗಿಯೂ ಎರಡೆರಡು ಬಾರಿ ಗೆದ್ದ ಬ್ರಹ್ಮಾವರ ಕ್ಷೇತ್ರವಿಂಗಡಣೆ ಹೊತ್ತಲ್ಲಿ ಉಡುಪಿ ಹಾಗು ಕುಂದಾಪುರದಲ್ಲಿ ಹಂಚಿಹೋಗಿದೆ. ಹೀಗಾಗಿ ಕ್ಷೇತ್ರವಿಲ್ಲದಂತಾಗಿರುವ ಹೆಗ್ಡೆ ಬಿಜೆಪಿಯ ಬಾಸ್‌ಗಳಲ್ಲಿ ಬೈಂದೂರು ಕ್ಷೇತ್ರದ ಟಿಕೆಟ್ ಬೇಡಿಕೆಯಿಟ್ಟಿದ್ದಾರೆ. ಉಡುಪಿ ಮೇಲೆ ಹೆಗ್ಡೆಗೆ ಕಣ್ಣಿದೆಯಾದರೂ ಅಲ್ಲಿ ಹೆಂಡತಿಯನ್ನು ಸ್ವರ್ಗಕ್ಕೆ ಕಳಿಸಿ ಮತ್ತೊಂದು ಮದುವೆ ಮಾಡಿಕೊಂಡಿರುವ ರಸಿಕ ವಿಪ್ರೋತ್ತಮ ರಘುಪತಿ ಭಟ್ಟ ಟವಲ್ ಹಾಕಿ ಇಟ್ಟಿದ್ದಾನೆ. ಚೆಡ್ಡಿ ವಲಯದಲ್ಲಿ ವಲಸಿಗ ಹೆಗ್ಡೆಗಿಂತಲೂ ಪ್ರಭಾವಿಯಾದ ಭಟ್ಟ ತನ್ನ ಕ್ಷೇತ್ರ ಹೆಗ್ಡೆಗೆ ಬಿಟ್ಟುಕೊಡುವ ಪೈಕಿಯೇ ಅಲ್ಲ ಬಿಡಿ.

ಹೆಸರು ನಾನಾ ನಮೂನೆಯಲ್ಲಿ ಕೆಡಿಸಿಕೊಂಡಿರುವ ಭಟ್ಟನಿಗೆ ಬಿಜೆಪಿ ಟಿಕೆಟ್ ಭಾಗ್ಯ ಸಿಗುತ್ತದೋ ಇಲ್ಲವೋ ಆತನಿಗೇ ಗೊತ್ತಿಲ್ಲ. ಹಾಗಂತ ಪ್ರಯತ್ನ ಆತ ಜೋರಾಗಿಯೇ ನಡೆಸಿದ್ದಾನೆ. ಚೆಡ್ಡಿಗಳ ಸಹವಾಸಕ್ಕೆ ಬಿದ್ದು ದಿವೈಎಸ್‌ಪಿಯಂಥ ದೊಡ್ಡ ನೌಕರಿಗೆ ಸಂಚಕಾರ ತಂದುಕೊಂಡ ಅನುಪಮಾ ಶೆಣೈಗೆ ಉಡುಪಿಯಲ್ಲಿ ಅಭ್ಯರ್ಥಿ ಮಾಡುವ ಒಳತಂತ್ರಗಾರಿಕೆ ಸೋಬಕ್ಕ ನಡೆಸಿರುವುದು ಭಟ್ಟನಿಗೂ ಗೊತ್ತಿದೆ; ಪ್ರಕಾಶ್ ಹೆಗ್ಡೆಗೂ ಪಕ್ಕಾ ಆಗಿದೆ. ಪಕ್ಕದ ಕಾಪು ಕ್ಷೇತ್ರದಿಂದ ಸ್ಪರ್ಧಿಸುವ ಆಫರ್ ಹೆಗ್ಡೆಗೆ ಬಿಜೆಪಿ ಭೂಪರು ಕೊಟ್ಟಿದ್ದಾರೆ. ಆದರೆ ಅದು ಸುರಕ್ಷಿತ ಪ್ರದೇಶವಲ್ಲ ಎಂಬ ಭಯ ಹೆಗ್ಡೆಗೆ. ಜತೆಗೆ ಗುರ್ಮೆ ಸುರೇಶ್ ಶೆಟ್ಟಿ ಎಂಬ ಧನವಂತ ಮುಂಬೈನ ಹೊಟೇಲಿಯರ್ ಹಲವು ವರ್ಷದಿಂದ ಕಾಪುಗಾಗಿ ಕಟಿಪಿಟಿ ಮಾಡುತ್ತ ಬಿಜೆಪಿ ಫಂಕ್ಷನ್‌ಗಳಿಗೆ ಕಾಸು ಹರಿಸುತ್ತ ಬಂದಿದ್ದಾನೆ. ಈ ಸುರೇಶ್ ಶೆಟ್ಟಿಗೆ ಟಿಕೆಟ್ ತಪ್ಪಿಸಿದ ಅಪಖ್ಯಾತಿಗೆ ತುತ್ತಾದರೆ ಸ್ವಜಾತಿ ಬಂಟರ ಸಮುದಾಯದಲ್ಲೇ ಕಿಮ್ಮತ್ತು ಕಳಕೊಳ್ಳಬೇಕಾಗುತ್ತದೆ ಎಂದು ಹೆಗ್ಡೆ ಕಾಪು ಕಡೆಗೆ ತಲೆ ಹಾಕಿಯೂ ಮಲಗುತ್ತಿಲ್ಲವಂತೆ.


ಹೀಗಾಗಿ ಅಭಿನವ ಚೆಡ್ಡಿ ಹೆಗ್ಡೆಯ ಕಣ್ಣಿರುವುದು ಬೈಂದೂರು ಕ್ಷೇತ್ರದ ಮೇಲಷ್ಟೆ! ಈ ಬೈಂದೂರು ಉಡುಪಿ ಜಿಲ್ಲೆಯದಾದರೂ ಯಡ್ಡಿಯ ಶಿವಮೊಗ್ಗ ಸಂಸದ ಕ್ಷೇತ್ರ ವ್ಯಾಪ್ತಿಗೆ ಬರುತ್ತದೆ. ಬಂಟರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ; ಯಡ್ಡಿ ಪ್ರಭಾವವೂ ಇದೆ. ಇಲ್ಲಿಯ ಹಾಲಿ ಶಾಸಕ ಗೋಪಾಲ ಪೂಜಾರಿಗೂ ಆಡಳಿತ ವಿರೋಧಿ ಬಿಸಿ ಬೇಯಿಸುತ್ತಿದೆ. ಮುಸ್ಲಿಮ್ ಬಾಹುಳ್ಯದ ಗಂಗೊಳ್ಳಿ ಬೈಂದೂರು ಕ್ಷೇತ್ರಕ್ಕೆ ಸೇರಿರುವುದರಿಂದ ಹಿಂದೂತ್ವದ ಹಿಕಮತ್ತು ವರ್ಕ್‌ಔಟ್ ಆಗುತ್ತದೆಂಬ ದೂ(ದು)ರಾಲೋಚನೆ ಪ್ರಕಾಶ್ ಹೆಗ್ಡೆಯದು. ಆದರೆ ಕ್ಷೇತ್ರದ ಜಾತಿ ಕೆಮಿಸ್ಟ್ರಿ ಅಷ್ಟು ಸರಳವಾಗೇನೂ ಇಲ್ಲ. ಬೈಂದೂರಲ್ಲಿ ಬಿಲ್ಲವರೇ ಅತಿ ಹೆಚ್ಚಿದ್ದಾರೆ. ಕಾಂಗ್ರೆಸ್ ಶಾಸಕ ಕಂ ಕೆಎಸ್‌ಆರ್‌ಟಿಸಿ ಛೇರ್‌ಮನ್ ಗೋಪಾಲ ಪೂಜಾರಿ ಬಿಲ್ಲವರ ಕುಲಕಂಠೀರವ. ಈ ಬಿಲ್ಲವರೊಂದಿಗೆ ಮುಸ್ಲಿಮರ ಮತ ಸೇರಿಕೊಂಡರೆ ಪ್ರಕಾಶ್ ಹೆಗ್ಡೆ ಗೆಲ್ಲುವುದು ಹೇಗೆ?!

ಬಿಲ್ಲವರ ಒಂದು ವರ್ಗಕ್ಕೆ ಜಾತಿಬಂಧು ಗೋಪಾಲ ಪೂಜಾರಿ ಬಗ್ಗೆ ಬೇಸರವಿದೆ. ಆತ ಬೆಳೆಸಿರುವುದು ಬಂಟರ ಭಂಡ ಸರ್ಕಾರಿ ಗುತ್ತಿಗೆದಾರ ಪಡೆಯನ್ನೆಂಬುದು ಈ ಬಿಲ್ಲವರ ಸಿಟ್ಟಿಗೆ ಕಾರಣ. ಇದು ಸತ್ಯವೂ ಹೌದು. ಪೂಜಾರಿ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರಾದರೂ ಆತ ತಂದಿರುವ ಅನುದಾನದಿಂದ ಬಂಟರ ಗುತ್ತಿಗೆದಾರರು ದುಂಡಗಾಗಿದ್ದಾರೆಂಬ ಅಭಿಪ್ರಾಯವಿದೆ. ಜತೆಗೆ ಹಿಂಬಾಲಕರ ಪ್ರಜಾಪೀಡನೆ ಪಾಪ, ರಿಯಲ್ ಎಸ್ಟೇಟ್ ದಂಧೆಯ ದಗಲುಬಾಜಿ ಮತ್ತು ರಸಿಕ ರಗಳೆ ಎಫೆಕ್ಟ್ ಹೈಸ್ಕೂಲು ಪರಭಾರೆ ಭಾನ್ಗಡಿ ಪೂಜಾರಿಯನ್ನು ಬಾಧಿಸುತ್ತಿದೆ. ಆದರೆ ಆದೆಷ್ಟೇ ಅನಾನುಕೂಲಗಳು ಕಾಡಿದರೂ ದುಷ್ಟನಲ್ಲ, ಕೆಲಸಗಾರ ಎಂಬ ಪ್ಲಸ್ ಪಾಯಿಂಟ್‌ಗಳು ಗೋಪಾಲ ಪೂಜಾರಿ ನೆರವಿಗೆ ಬರಲಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರಕಾಶ್ ಹೆಗ್ಡೆ ಜಾತಿವಾದಿ ಎಂಬುದು ಕ್ಷೇತ್ರದ ಬಹುಸಂಖ್ಯಾತ ಬಿಲ್ಲವರ ಒಂದುಗೂಡಿಸಲಿದೆ. ಕ್ಷೇತ್ರದಲ್ಲಿನ ಪರಂಪರಾಗತವಾದ ಬಿಲ್ಲವರು ಮತ್ತು ಬಂಟರ ಮೇಲಾಟ, ಜಾತಿ ರಾಜಕಾರಣಗಳು ಪ್ರಕಾಶ್ ಹೆಗ್ಡೆಗೆ ಫಜೀತಿ ಮಾಡಲಿದೆ ಎಂದು ರಾಜಕೀಯ ವಿಶ್ಲೇಷಕರು ಈಗಲೇ ಅಂದಾಜಿಸತೊಡಗಿದ್ದಾರೆ.

ಇವೆಲ್ಲ ಪ್ರಕಾಶ್ ಹೆಗ್ಡೆ ಬಿಜೆಪಿ ಅಭ್ಯರ್ಥಿಯಾದಾಗ ನಡೆಯುವ ರಾಜಕೀಯ ಸೂತ್ರ-ಸಮೀಕರಣದ ಕ್ರಿಯೆ-ಪ್ರತಿಕ್ರಿಯೆಯಷ್ಟೆ. ಅದಕ್ಕೂ ಮೊದಲು ಹೆಗ್ಡೆಗೆ ಬಿಜೆಪಿ ಟಿಕೆಟ್ಟೇ ಕೈತಪ್ಪುತ್ತದೆ ಎಂಬ ಚರ್ಚೆ ಬಿಜೆಪಿಯಲ್ಲೇ ನಡೆಯುತ್ತಿದೆ. ಬಿಜೆಪಿಯಲ್ಲಿ ತಾನೆ ಸರ್ವೋಚ್ಚ ನಾಯಕನೆಂಬ ಭ್ರಮೆಯಲ್ಲಿರುವ ಯಡ್ಡಿಯ ಅಂತಃಪುರದ ಆತ್ಮ ಸಂಗಾತಿ ಶೋಭಕ್ಕನಿಗೆ ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿ ನಲ್ವತ್ತು ಸಾವಿರಕ್ಕೂ ಅಧಿಕ ಮತದಂತರದಿಂದ ಸೋತ ಒಣಸೊಕ್ಕಿನ ಸುಕುಮಾರ ಶೆಟ್ಟಿ ಬಗ್ಗೇ ಒಲವು ಜಾಸ್ತಿ. ಪ್ರಕಾಶ್ ಹೆಗ್ಡೆ ಶಾಸಕನಾದರೆ ಮಂತ್ರಿಯೂ ಆದರೂ ಆಗಬಹುದು. ಅಂಥ ತಂತ್ರಗಾರಿಕೆಯಲ್ಲಿ ಆತನದು ಗೆರಿಲ್ಲಾ ಕಾರ್ಯಾಚರಣೆ. ಮಂತ್ರಿಯಾಗಿ ತಮ್ಮ ಮೇಲೆ ಆತ ಸವಾರಿ ಮಾಡುತ್ತಾನೆಂಬ ಭಯ ಸೋಬಕ್ಕನಿಗಿದೆ. ಪ್ರಕಾಶ್ ಹೆಗ್ಡೆಯ ಆಕ್ರಮಣಕಾರಿ ಮಹತ್ವಾಕಾಂಕ್ಷೆಯ ರಾಜಕಾರಣ ಬಲ್ಲವರಂತೂ ಆತನಿಗೆ ಎಮ್ಮೆಲ್ಲೆ ಟಿಕೆಟ್ ಬೇಡವೇಬೇಡವೆಂದು ಹೇಳುತ್ತಿದ್ದಾರೆ.

ಕುಂದಾಪುರ-ಬೈಂದೂರು ಕ್ಷೇತ್ರದಲ್ಲಿ ಮತ್ತೊಂದು ಗಮ್ಮತ್ತಿದೆ. ಈ ಪ್ರಕಾಶ್ ಹೆಗ್ಡೆ ಮತ್ತು ಕುಂದಾಪುರದ 'ಪಕ್ಷೇತರ' ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿಗೆ ಆಗದು. ಇಬ್ಬರೂ ಹತ್ತಿರದ ಸಂಬಂಧಿಗಳು ಆದರೆ ರಾಜಕೀಯ-ಕೌಟುಂಬಿಕವಾಗಿ ಎದುರಾಳಿಗಳು. ಹಾಲಾಡಿ ಬಿಜೆಪಿ ಬಿಟ್ಟು ಹೋದರೂ ಆ ಪಕ್ಷದೊಳಗೆ ಕೈಹಾಕಿ ಕರಾಮತ್ತು ಮಾಡುತ್ತಲೇ ಇದ್ದಾರೆ. ಇದನ್ನು ವಿರೋಧಿಸುವ ಒಂದು ದೊಡ್ಡ ಗ್ಯಾಂಗೇ ಕುಂದಾಪುರ ಬಿಜೆಪಿಯಲ್ಲಿ ಹುಟ್ಟಿಕೊಂಡಿದೆ. ಈ ಬಣ ಈಗ ಪ್ರಕಾಶ್ ಹೆಗ್ಡೆ ಸುತ್ತ ಗಿರಕಿ ಹೊಡೆಯುತ್ತಿದೆ. ಇದು ಬಿಜೆಪಿಗೆ ಅಧಿಕೃತವಾಗಿ ನುಗ್ಗಲು ಮಗ್ಗಲು ಬದಲಿಸುತ್ತಿರುವ ಹಾಲಾಡಿಗೆ ಕೆರಳಿಸಿದೆ. ಮಂತ್ರಿಯಾಗಿ ಜೀವನದ ಕೊನೆಯ ಆಸೆ ಈಡೇರಿಸಿಕೊಳ್ಳುವ ತವಕದಲ್ಲಿರುವ ಹಾಲಾಡಿಗೆ ದಾಯಾದಿ ಪ್ರಕಾಶ್ ಹೆಗ್ಡೆಗೆ ಎಮ್ಮೆಲ್ಲೆ ಟಿಕೆಟ್ ಸಿಗಬಾರದೆಂದೇ ಇದೆ. ಈತ ಶಾಸಕನಾದರೆ ಬಿಜೆಪಿಯಲ್ಲಿ ತನಗೆ ಸದಾ ಘುಗ್ಗಲು ಮುಳ್ಳೇ ಎಂಬುದು ಹಾಲಾಡಿ ಭಾವನೆ.

ಹಾಲಾಡಿ ಬಿಜೆಪಿಗಿನ್ನೂ ಸೇರಿಲ್ಲ. ಸೋಬಕ್ಕ ಆತನ ರಮಿಸುತ್ತಲೇ ಇದ್ದಾಳೆ. ಸೋಬಕ್ಕನಿಗೆ ಈ ಹಾಲಾಡಿ ಎಂದರೆ ಪ್ರಕಾಶ್ ಹೆಗ್ಡೆಗಿಂತಲೂ 'ಮೋಹ' ಹೆಚ್ಚು! ಈಗ ಹಾಲಾಡಿ ಒಂದು ಷರತ್ತು ಸೋಬಕ್ಕನಿಗೆ ಹಾಕಿದ್ದಾರೆಂದು ಬಿಜೆಪಿಗರು ಮಾತಾಡಿಕೊಳ್ಳುತ್ತಿದ್ದಾರೆ. ಅದೆಂದರೆ, ತಾನು ಬಿಜೆಪಿಗೆ ಬರಬೇಕೆಂದಿದ್ದರೆ ಪ್ರಕಾಶ್ ಹೆಗ್ಡೆಗೆ ಜಿಲ್ಲೆಯ ಯಾವ ಕ್ಷೇತ್ರದಲ್ಲೂ ಎಮ್ಮೆಲ್ಲೆ ಟಿಕೆಟ್ ಕೊಡಬಾರದೆಂಬುದು. ಪ್ರಕಾಶ್ ಹೆಗ್ಡೆಗೆ ಮುಂದಿನ ಬಾರಿ ಎಂಪಿ ಮಾಡೋಣ ಎಂದು ಹಾಲಾಡಿ ಹೇಳುತ್ತಿದ್ದಾರಂತೆ. ಬಿಜೆಪಿಯ ಒಳಸುಳಿಗೆ ಸಿಕ್ಕಿಕೊಂಡಿರುವ ಪ್ರಕಾಶ್ ಹೆಗ್ಡೆ ಯಾಕಾದರೂ ಅವಸರ ಪಟ್ಟೆನೆಂದು ತನ್ನನ್ನು ತಾನೇ ಹಳಿದುಕೊಳ್ಳುವಂತಾಗಿದೆ, ಪಾಪ! ಸೋಬಕ್ಕನು ಎಂಪಿಗಿರಿಯೇ ಪ್ರಕಾಶ್ ಹೆಗ್ಡೆಗೆ ಸೂಟ್ ಆಗುತ್ತದೆಂದು ಖಾಸಗಿಯಾಗಿ ಗೊಣಗುವುದು ಕೇಳಿದವರೂ ಇದ್ದಾರೆ. ಪ್ರಕಾಶ್ ಹೆಗ್ಡೆ ಪೀಕಲಾಟ ಮುಂದಿನ ಪಾರ್ಲಿಮೆಂಟ್ ಚುನಾವಣೆವರೆಗೂ ಮುಂದುವರಿಯುವ



ಲಕ್ಷಣ ಬಿಜೆಪಿಯೊಳಗಿನ ಬೆಳವಣಿಗೆ ಬತ್ತರಿಸುತ್ತಿದೆ!!

ಬಿ.ಎಂ. ಸುಕುಮಾರ ಶೆಟ್ಟಿಯೂ ಬೈಂದೂರಿನ ಮ... ದುರ್ಬಲ ಬಿಜೆಪಿಗನೇ. ಜ್ಯೋತಿಷ್ಯ ಮಂತ್ರವಾದ ನ... ಹೆಂಡತಿಯನ್ನೇ ಬಿಟ್ಟಿರುವ ಈ 'ಬ್ರಹ್ಮಚಾರಿ... ಬೇರೆಯವರಿಗೆ ಗೌರವ ಕೊಟ್ಟೇಗೊತ್ತಿಲ್ಲ. ಒಣ ಅಹಮಿಕೆ... ಸುಕುಮಾರ ಶೆಟ್ಟಿ ಕೊಲ್ಲೂರು ಮೂಕಾಂಬಿಕಾ ದೇಗು... ಟ್ರಸ್ಟಿಯಾಗಿದ್ದಾಗ ನಡೆದ ಕರ್ಮಕಾಂಡಗಳ ಕತೆಯೇ ಪ್ರ... ಕಾಂಗ್ರೆಸ್‌ಲ್ಲಿ ಮೆಂದು ಮೇವು ಕಮ್ಮಿ ಅನ್ನಿಸಿದಾಗ ಬಿಜೆಪಿ... ಹೋಗಿರುವ ಸುಕುಮಾರ ಶೆಟ್ಟಿಗೆ ಶಾಸಕ ಗೋಪಾ... ಪೂಜಾರಿ ಮೇಲೆ ಸೇಡಿದೆಯೇ ಹೊರತು ಕ್ಷೇ... ಅಭಿವೃದ್ಧಿಯ ರಾಜಕಾರಣದ ಗಂಧವೇ ಗೊತ್ತಿ...


ಬಿಜೆಪಿಯೊಳಗಿನ ತಲ್ಲಣಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿ... ಬೆಂಗಳೂರಿನ ಬಿಲ್ಡರ್ ಸುಖಾನಂದ ಶೆಟ್ಟಿ, ಬ್ಲಾಕ್ ಬಿ... ಅಧ್ಯಕ್ಷ ತೆಗ್ಗರ್ಸೆ ಬಾಬು ಹೆಗ್ಡೆ ತಾವೇಕೆ ಒಂದು ... ಟಿಕೆಟ್ ಫೈಟಿಂಗಲ್ಲಿ ನೋಡಬಾರದು ಎಂದು ಮುಂ... ಇಟ್ಟಿದ್ದಾರೆ. ಯಥೇಚ್ಛ ಕಾಸಿರುವ ಸುಖಾನಂದ ಶೆಟ್ಟಿಯ... ಚೆಡ್ಡಿ ಡಾನ್ ಕಲ್ಲಡ್ಕ ಭಟ್ಟರಿಗೆ ಪ್ರೀತಿ ಜಾಸ್ತಿ. ಬಿ... ಟಿಕೆಟ್ ಚೆಡ್ಡಿ ಅಡ್ಡೆಯಲ್ಲೇ ಖರೀದಿಸುವ ಸ್ಕೆಚ್ ಸುಖಾ... ಶೆಟ್ಟರದು.


ಮತ್ತೊಬ್ಬ ಟಿಕೆಟ್ ಆಕಾಂಕ್ಷಿ ತೆಗ್ಗರ್ಸೆ ಹೆಗ್ಡೆ ತ... ಚಾನ್ಸ್ ಸಿಗದಿದ್ದರೂ ಪರವಾಗಿಲ್ಲ; ಪ್ರಕಾಶ್ ಹೆಗ್ಡೆ ಮ... ಅಭ್ಯರ್ಥಿಯಾಗಲೇ ಬಾರದೆಂಬ ಪೈಕಿ. ಕುಂದಾಪುರ ಶಾ... ಹಾಲಾಡಿ ದಾಯಾದಿ ಪ್ರಕಾಶ್ ಹೆಗ್ಡೆಯನ್ನು ಹೆಡೆಮ... ಕಟ್ಟಿ ಕೂಡ್ರಿಸಲು ಸಿಗುವ ಯಾವ ಸಂದರ್ಭವನ್ನೂ... ವ್ಯರ್ಥಮಾಡಿಕೊಳ್ಳುತ್ತಿಲ್ಲ. ಆತ ಇತರ ಉಮೇದುವಾರ... ಗಾಳಿ ಹಾಕುತ್ತಲೇ ಇದ್ದಾರೆ. ಪಕ್ಷಾಂತರ ಪರ್ವದ ... ಪರಿಣಾಮ ಉಡುಪಿ ಬಿಜೆಪಿಯಲ್ಲಿ ಭರ್ಜರಿಯಾ... ಆಗುತ್ತಿದೆ.


ಈಗ ಪ್ರಕಾಶ್ ಹೆಗ್ಡೆ ಪಡಿಪಾಟಲಿನ ... ಲೊಚಗುಟ್ಟುವವರೇ ಜಾಸ್ತಿ. ಆತ ತಾಳ್ಮೆಯಿಂದ ಕಾಂಗ್ರೆಸ್... ಕಾಯಬೇಕಿತ್ತು; ಹೈಕಮಾಂಡ್ ಮಾಂಡಲೀಕ ಆಸ್... ಫರ್ನಾಂಡಿಸ್ ಜತೆ ಒಂಚೂರು ಹೊಂದಾಣಿಕೆ ಮಾಡಿಕೊ... ಬೇಕಿತ್ತು. ಔಟ್ ಡೇಟೆಡ್ ಎಮ್ಮೆಲ್ಸಿ ಪ್ರತಾಪ್‌ಚಂದ್ರ ಶೆ... ಅಟ್ಟಿಸಿಕೊಂಡು ಹೋಗಬಾರದಿತ್ತು ಎಂಬ ಮಾತುಗ... ಜಿಲ್ಲೆಯ ರಾಜಕೀಯ ಪಡಸಾಲೆಯಲ್ಲಿ ನಡೆದಿದೆ. ಬಿಜೆ... ರಸಭರಿತ ಕಬ್ಬಾಗಿ ಹೋದ ಹಿರಿಯ ಜನನಾಯಕ... ಜಲ್ಲೆಯಾಗಿ ಬಂದ ದೊಡ್ಡ ಪಟ್ಟಿಯೇ ಇದೆ. ... ಪ್ರಕಾಶ್ ಹೆಗ್ಡೆಯಂಥ ಕ್ರಿಯಾಶೀಲ ರಾಜಕಾರ... ಪಾಠವಾಗದ್ದು ಕರಾವಳಿಯ ಸೆಕ್ಯುಲರ್ ಮತ್ತು ಕಮ್ಯುನ... ರಾಜಕಾರಣಗಳೆರಡಕ್ಕೂ ದೊಡ್ಡ ದುರಂತ!


■ ನಹು...


ಮಂಡ್ಯ
ಕೃಷ್ಣಾಗಮನದಿಂದ ಬಿಜೆಪಿಗೆ ಸೀಟೂ ಇಲ್ಲ, ಸುಖವೂ ಇಲ್ಲ!

















'ಅಗಸನ್ನ ಹಳಸಿತ್ತು ನಾಯಿ ಹಸಿದಿತ್ತು' ಎಂಬ ಗಾದೆಗೂ ಎಸ್.ಎಂ.ಕೃಷ್ಣರ ಬಿಜೆಪಿ ಸೇರ್ಪಡೆ ಪ್ರಸಂಗಕ್ಕೂ ಬಹಳವೇ ಸಾಮ್ಯತೆ ಇದೆ. 85ರ ಇಳಿ ವಯಸ್ಸಿನ ವಯೋವೃದ್ಧ ಪಿಳ್ಳಂಗೋವಿ ಕೃಷ್ಣರ ಮೂಲಕ ಹಳೇ ಮೈಸೂರು ಭಾಗದ ಒಕ್ಕಲಿಗ ಮತಬ್ಯಾಂಕ್ ಸೆಳೆಯುತ್ತೇವೆಂಬ ಬಿಜೆಪಿಯ ಭ್ರಮೆ ಬಹುಶಃ ಈ ಶತಮಾನದ ಬಹುದೊಡ್ಡ ಪ್ರಹಸನವಾಗ ಬಹುದೇನೊ. ಡಿ.ಕೆ.ಶಿವಕುಮಾರ್‌ನಂತಹ ದರ್ಪದ ರಾಜಕಾರಣಿಯಿಂದಲೇ ಒಕ್ಕಲಿಗರ ನಿಷ್ಠೆಯನ್ನು ದೇವೇಗೌಡರ ಕುಟುಂಬದಿಂದ ಹೈಜಾಕ್ ಮಾಡಲು ಸಾಧ್ಯವಾಗಲಿಲ್ಲ. ಹೀಗಿರುವಾಗ ಅಂತದ್ದರಲ್ಲಿ ಮಣ್ಣಿನ ಸೊಗಡೇ ಇಲ್ಲದ ಹೈ-ಫೈ ಕೃಷ್ಣಗೆ ಒಕ್ಕಲುಮತಗಳು ಒಲಿದುಬರೋದು ದುರ್ಲಭ.

ಇನ್ನು ಕೃಷ್ಣ ಸಿಎಂ ಆಗಿದ್ದ ವಿಚಾರಕ್ಕೆ ಬರುವುದಾದರೆ, 1999ರಲ್ಲಿ ಅವರು ಕೆಪಿಸಿಸಿ ಅಧ್ಯಕ್ಷರಾದ ಸಂದರ್ಭದಲ್ಲಿ ಜನತಾದಳದ ಒಡಕಿನ ಲಾಭ ಪಡೆದ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಕೆಪಿಸಿಸಿ ಅಧ್ಯಕ್ಷರಾಗಿದ್ದ ಕಾರಣಕ್ಕೆ ಕೃಷ್ಣರನ್ನೇ ಸೋನಿಯಾಗಾಂಧಿ ಸಿಎಂ ಮಾಡಿದರು. ಆದರೆ 5 ವರ್ಷ ಕಾಲ ಸಿಎಂ ಆಗಿ ಕೃಷ್ಣ ರಾಜ್ಯಕ್ಕೆ ಒಳ್ಳೆಯ ಆಡಳಿತ ನೀಡಲಿಲ್ಲ. ಈ ಕಾರಣಕ್ಕೆ ಜನ ಕೃಷ್ಣರ ಮೇಲೆ ವಿಶ್ವಾಸ ಕಳೆದುಕೊಂಡಿದ್ದರು. ಮದ್ದೂರಿನಲ್ಲಿ ನಿಂತರೆ ಸೋಲುವ ಸಾಧ್ಯತೆ ಇತ್ತು ಎಂದರಿತ ಕೃಷ್ಣ ಬೆಂಗಳೂರಿಗೆ ಗುಳೆ ಹೋಗಿ ಮಾನ ಉಳಿಸಿಕೊಂಡರು. ಆದರೆ ಕೃಷ್ಣರ ಮಂತ್ರಿಮಂಡಲದಲ್ಲಿದ್ದ ಎರಡೂವರೆ ಡಜನ್ ಮಂತ್ರಿಗಳು - ಅಂದರೆ 3.0ಕ್ಕೂ ಹೆಚ್ಚು ಮಂತ್ರಿಗಳು - ಹೀನಾಯವಾಗಿ ಸೋತು ಹೋದದ್ದು ಆ ಸರ್ಕಾರದ ಆಡಳಿತಕ್ಕೆ ಜನ ನೀಡಿದ ತೀರ್ಪಾಗಿತ್ತು. ಸೋತಾದ ಮೇಲೆ ಕೃಷ್ಣರನ್ನು ಮನೆಗೆ ಕಳುಹಿಸದ ಕಾಂಗ್ರೆಸ್ ಹೈಕಮಾಂಡ್ ರಾಜ್ಯಸಭೆ ಮೆಂಬರ್ ಮಾಡಿ ಯುಪಿಎ ಸರ್ಕಾರದಲ್ಲಿ ವಿದೇಶಾಂಗ ಸಚಿವರನ್ನಾಗಿ ಮಾಡಿತು.

ಸುಮಾರು ನಾಲ್ಕು ದಶಕಗಳ ಕಾಲ ಕೃಷ್ಣರಿಗೆ ಕಾಂಗ್ರೆಸ್ ಹತ್ತಾರು ಅಧಿಕಾರಿಗಳನ್ನು ನೀಡಿತು. ಶಾಸಕ, ಕೇಂದ್ರ ಮಂತ್ರಿ, ರಾಜ್ಯ ಮಂತ್ರಿ, ಸ್ಪೀಕರ್, ಉಪ ಮುಖ್ಯಮಂತ್ರಿ, ಮುಖ್ಯಮಂತ್ರಿ, ರಾಜ್ಯಪಾಲ, ವಿದೇಶಾಂಗ ಮಂತ್ರಿ ಪಟ್ಟ ಗಳನ್ನು ನೀಡಿತು. ಆದರೆ ಇದಕ್ಕಾಗಿ ಕಾಂಗ್ರೆಸ್ ಪಕ್ಷಕ್ಕೆ ಋಣಿಯುತ್ತಾಗಿರಬೇಕಾದ ಕೃಷ್ಣ ಉಂಡ ಮನೆಗೆ ದ್ರೋಹ ಬಗೆದು ತಾನೇ ಕೋಮುವಾದಿಗಳೆಂದು ಬೈಯುತ್ತಿದ್ದ ಬಿಜೆಪಿ ಪಕ್ಷವನ್ನು ಸೇರಿದ್ದು ನಾಚಿಕೆಗೇಡಿನ ಕೆಲಸ.

85ರ ಇಳಿವಯಸ್ಸಿನಲ್ಲಿ ಬಿಜೆಪಿ ಸೇರಿದ ಕೃಷ್ಣರಿಗೆ ಅಂತಹ ಅಧಿಕಾರದ ವ್ಯಾಮೋಹ ತಲೆಗೇರಿದೆಯೋ ಗೊತ್ತಿಲ್ಲ. ತನ್ನ ಅಳಿಯ ಸಿದ್ಧಾರ್ಥನ ಸಾವಿರಾರು ಕೋಟಿ ರೂ ಸಾಮ್ರಾಜ್ಯದ ರಕ್ಷಣೆಗಾಗಿ ಕೃಷ್ಣ ಬಿಜೆಪಿ ಸೇರಿದ್ದಾರೆಂಬ ಮಾತಿಗೂ ತೂಕವಿದೆ. ಇನ್ನು ಕೃಷ್ಣರನ್ನು ವಾಚಾಮಗೋಚರ ಬೈಯುತ್ತಿದ್ದ ಬಿಜೆಪಿ ನಾಯಕರು ಕೃಷ್ಣರಿಗೆ ರೆಡ್ ಕಾರ್ಪೆಟ್ ಹಾಸಿ ತಮ್ಮ ಪಕ್ಷಕ್ಕೆ ಸೇರಿಸಿಕೊಂಡಿದ್ದಾರೆ. ವಿದೇಶಾಂಗ ಮಂತ್ರಿಯಾಗಿದ್ದಾಗ ಕೃಷ್ಣ ವಿಶ್ವಸಂಸ್ಥೆ ಸಭೆಯಲ್ಲಿ ಭಾರತ ದೇಶದ ಭಾಷಣ ಓದುವ ಬದಲು ಬೇರೊಂದು ದೇಶದ ಭಾಷಣ ಓದಿದರೆಂಬ ಕಾರಣಕ್ಕೆ ಇದೇ ಬಿಜೆಪಿ ಹಿಗ್ಗಾಮುಗ್ಗಾ ಜಾಡಿಸಿತ್ತು. ಅದರಲ್ಲೂ ನರೇಂದ್ರ ಮೋದಿಯೇ ಕೃಷ್ಣ ಭಾರತಕ್ಕೆ ಅವಮಾನ ಮಾಡಿದ್ದಾರೆ, ಕಾಂಗ್ರೆಸ್ ಇಂತಹವರಿಗೆ ವಿದೇಶಾಂಗ ಮಂತ್ರಿ ಸ್ಥಾನ ಕೊಟ್ಟದೆ ಎಂದು ವಾಚಾಮ ಗೋಚರವಾಗಿ ತೆಗಳಿ ರಾಜೀನಾಮೆಗೆ ಒತ್ತಾಯಿಸಿದ್ದರು. ದೇಶಕ್ಕೆ ಅಪಮಾನ ಮಾಡಿದ್ದ ಅದೇ ಕೃಷ್ಣರನ್ನು ಈಗ ಬಿಜೆಪಿ ಅದ್ಯಾವ ಮುಖ ಹೊತ್ತುಕೊಂಡು ಸೇರಿಸಿಕೊಂಡಿದೆ ಎನ್ನುವುದನ್ನು ಮೋದಿಯೇ ಉತ್ತರಿಸಬೇಕು.

ಮಂಡ್ಯದಲ್ಲೇ ಕೃಷ್ಣಗಾರುದಿ ಇಲ್ಲ!

ಕೃಷ್ಣರ ತವರು ಜಿಲ್ಲೆ ಮಂಡ್ಯದಲ್ಲೇ ಬಿಜೆಪಿ ಗರಿಗೆದರೋದು ಕಷ್ಟ. ಇಲ್ಲಿನ 7 ವಿಧಾನಸಭಾ ಕ್ಷೇತ್ರಗಳ ಪೈಕಿ ಒಂದೇ ಒಂದು ಕ್ಷೇತ್ರವೂ ಕೃಷ್ಣರ ವರ್ಚಸ್ಸಿಗೆ ಒಳಪಟ್ಟಿಲ್ಲ. ಜಿಲ್ಲೆಯಲ್ಲಿ ಬಿಜೆಪಿಗೆ ನೆಲೆ-ಬೆಲೆ ಎರಡೂ ಇಲ್ಲ. ಇಲ್ಲಿ ಜೆಡಿಎಸ್‌ನ ಪ್ರಾಬಲ್ಯ, ಹೀಗಿದೆಯೆಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಗೆದ್ದು ಅಧಿಕಾರ ಹಿಡಿದ ಕಾಂಗ್ರೆಸ್ ಪಕ್ಷಕ್ಕೆ ಮಂಡ್ಯದಲ್ಲಿ ದಕ್ಕಿದ್ದು ಕೇವಲ ಎರಡು ಸ್ಥಾನಗಳು ಮಾತ್ರ. ಕೃಷ್ಣ ಕಾಂಗ್ರೆಸ್‌ನಲ್ಲೇ ಇದ್ದರೂ ಆ ಎರಡು ಗೆಲುವುಗಳಲ್ಲಿ ಕೃಷ್ಣರ ವರ್ಚಸ್ಸು ಹುಡುಕಿದರೂ ಕಾಣುತ್ತಿರಲಿಲ್ಲ. ಅಂಬರೀಶ್ ಅವರ ಸ್ಟಾರ್‌ಗಿರಿ ವರ್ಚಸ್ಸು ಮಂಡ್ಯದಲ್ಲಿ ಗೆದ್ದರೆ, ಮಳವಳ್ಳಿಯಲ್ಲಿ ಪಿ.ಎಂ.ನರೇಂದ್ರಸ್ವಾಮಿಯ ವೈಯಕ್ತಿಕ ಸಾಮರ್ಥ್ಯ ಗೆದ್ದಿತ್ತು. ತನ್ನ ಹುಟ್ಟೂರಾದ ಮದ್ದೂರಿನಲ್ಲಿಯೇ ಕಾಂಗ್ರೆಸ್ ಅಭ್ಯರ್ಥಿ ಮಧು ಮಾದೇಗೌಡನನ್ನು ಗೆಲ್ಲಿಸಿಕೊಳ್ಳಲು ಕೃಷ್ಣರಿಂದ ಆಗಲಿಲ್ಲ.

ಸ್ವತಃ ಅವರು ಪ್ರತಿನಿಧಿಸುತ್ತಿದ್ದ ಮದ್ದೂರಿನಲ್ಲೇ ಕಮಲ ಅರಳುವುದು ಸಾಧ್ಯವಿಲ್ಲ. ತನ್ನ ವಂಶದ ಕುಡಿಯನ್ನೇ ಕೃಷ್ಣ ಕಣಕ್ಕಿಳಿಸಿದರೂ ಸೋಲು ಖಚಿತ. ತನ್ನ ಸಹೋದರ ಎಸ್.ಎಂ.ಶಂಕರನ ಪುತ್ರ ಗುರುಚರಣ್‌ನನ್ನೇ 2008ರ ವಿಧಾನಸಭಾ ಉಪ ಚುನಾವಣೆಯಲ್ಲಿ ಮದ್ದೂರಿನಲ್ಲಿ ನಿಲ್ಲಿಸಿ ಠೇವಣಿ ಕಳೆದುಕೊಂಡಿದ್ದ ಕೃಷ್ಣರಿಗೆ ಜಿಲ್ಲೆಯಲ್ಲಿ ಯಾವುದೇ ಬೇಸ್ ಹೊಂದಿರದ ಬಿಜೆಪಿಯ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವುದು ಸಾಧ್ಯವೇ?

ಹಿಂಬಾಲಕರೇ ಇಲ್ಲದ ಕೃಷ್ಣ

ಕೃಷ್ಣರ ಬಿಜೆಪಿ ಸೇರ್ಪಡೆಯಿಂದ ಮಂಡ್ಯದಲ್ಲಿ ಇದುವರೆಗೂ ಹೇಳಿಕೊಳ್ಳುವಂತಹ ಯಾವ ಬದಲಾವಣೆಯೂ ಘಟಿಸಿಲ್ಲ. ಮದ್ದೂರಿನಲ್ಲಿ ಒಂದಿಬ್ಬರು ಹಿಂಬಾಲಕರನ್ನು ಬಿಟ್ಟರೆ ಉಳಿದವರ್‍ಯಾರು ಕಾಂಗ್ರೆಸ್ ಪಕ್ಷ ಬಿಟ್ಟು ಹೊರಡಲಿಲ್ಲ. ಕೃಷ್ಣರ ಹಿಂದೆ ನಿಂತು ಗುತ್ತಿಗೆದಾರನಾಗಿ ಕೋಟ್ಯಾಂತರ ಆಸ್ತಿ ಮಾಡಿಕೊಂಡಿರುವ ಹಾಲಿ ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣ, ಕೃಷ್ಣರ ಸಹೋದರ ಶಂಕರನ ಪುತ್ರ ಗುರುಚರಣ್, ಪಾಂಡವಪುರದ ಮಂಜುನಾಥ್, ಶ್ರೀರಂಗಪಟ್ಟಣದ ರವೀಂದ್ರ ಶ್ರೀಕಂಠಯ್ಯ ಬಿಟ್ಟರೆ ಉಳಿದವರ್‍ಯಾರು ಕೃಷ್ಣರ ಹಿಂದೆ ಹೋಗಲಿಲ್ಲ. ಈ ಹಿಂದೆ ಠೇವಣಿ ಕಳೆದುಕೊಂಡಿದ್ದ ಗುರುಚರಣ್ ಮತ್ತು ಕದಲೂರು ರಾಮಕೃಷ್ಣಗಳ ಹಿಂದೆ ನಯಾಪೈಸೆ ಜನಬೆಂಬಲವಿಲ್ಲ. ಕಳೆದ ಜಿ.ಪಂ. ಚುನಾವಣೆಯಲ್ಲಿ ಕದಲೂರು ರಾಮಕೃಷ್ಣ ಕೋಟಿ ರೊಕ್ಕ ಹರಿಸಿದರೂ ತನ್ನ ಸೊಸೆಯನ್ನು ಕೆಸ್ತೂರು ಕ್ಷೇತ್ರದಲ್ಲಿ ಗೆಲ್ಲಿಸಿಕೊಳ್ಳಲಾಗಲಿಲ್ಲ.

ಮಾಜಿ ಶಾಸಕರಾದ ಮಧು ಮಾದೇಗೌಡ ಹಾಗೂ ಕಲ್ಪನಾ ಸಿದ್ದರಾಜು ಕಾಂಗ್ರೆಸ್ ಪಕ್ಷ ತೊರೆಯುವುದಿಲ್ಲ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಇನ್ನು ಮದ್ದೂರಿನಲ್ಲಿ ಕೃಷ್ಣರ ಮತಬ್ಯಾಂಕ್ ಪಾತಾಳ ಸೇರಿ ದಶಕವೇ ಉರುಳಿದೆ. ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಅವರ ವರ್ಚಸ್ಸು ಪಾತಾಳಕ್ಕಿಳಿದಿತ್ತು.

ಮುಖ್ಯಮಂತ್ರಿಯಾದ ಅವಧಿಯಲ್ಲಿ ಕೃಷ್ಣ ಮಂಡ್ಯ ಜಿಲ್ಲೆಗೆ ತಮ್ಮನ್ನು ಸವೆಸಿಕೊಂಡದ್ದು ತುಂಬಾ ಕಮ್ಮಿ. ಅಸಲಿಗೆ ಬೆಂಗಳೂರಿನ ಆಚೆಗೆ ಒಂದು ಕರ್ನಾಟಕ ಇದೆ ಅನ್ನೋದೇ ಕೃಷ್ಣಗೆ ಗೊತ್ತಾಗಲಿಲ್ಲ. ಐಟಿ-ಬಿಟಿ ಜನ ಓಡಾಡಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ಬೆಂಗಳೂರು-ಮೈಸೂರು ಚತುಷ್ಪಥ ರಸ್ತೆ ಮಾಡಿದ್ದು ಬಿಟ್ಟರೆ ಮಂಡ್ಯ ಜಿಲ್ಲೆಯ ಅಭಿವೃದ್ಧಿಯಲ್ಲಿ ಕೃಷ್ಣರ ಕೊಡುಗೆ ಶೂನ್ಯ. ಕಬ್ಬು ಬೆಳೆಯುವ ರೈತರ ಹಿತ ಕಾಪಾಡುತ್ತೇನೆಂದು ಮದ್ದೂರಿನ ಕೊಪ್ಪದಲ್ಲಿ ತಂದೆ ಎಸ್.ಸಿ.ಮಲ್ಲಯ್ಯರ ನೆನಪಿನಲ್ಲಿ ಎಸ್.ಎಂ. ಶುಗರ್ಸ್ ಕಾರ್ಖಾನೆ ತೆಗೆದಿದ್ದೇನೋ ನಿಜವಾದರೂ ಕೆಲವೇ ವರ್ಷಗಳಿಗೆ ಅದನ್ನು ಮಾರಿ ರೈತರನ್ನು ಸಂಪೂರ್ಣ ಮರೆತರು. ಇಷ್ಟಾದರೂ ಕಾಂಗ್ರೆಸ್ ಪಕ್ಷ ಕೃಷ್ಣರನ್ನು ನಿರುದ್ಯೋಗಿಯಾಗಲು ಬಿಡದೆ ಮಹಾರಾಷ್ಟ್ರದ ರಾಜ್ಯಪಾಲರನ್ನಾಗಿ ಮಾಡಿತು. ನಂತರ ರಾಜ್ಯಸಭೆ ಸದಸ್ಯನನ್ನಾಗಿ ಮಾಡಿಕೊಂಡು ವಿದೇಶಾಂಗ ಖಾತೆಯ ಮಂತ್ರಿಗಿರಿ ಕೊಟ್ಟಿತು. ಆದರೆ ಕಾಂಗ್ರೆಸ್ ಪಕ್ಷಕ್ಕೆ ಕೈಕೊಟ್ಟ ಕೃಷ್ಣ ಬಿಜೆಪಿಗೆ ಹಾರಿ ತನ್ನ ಅವಕಾಶವಾದಿತವನ್ನು ಜಾಹೀರು ಮಾಡಿಕೊಂಡಿದ್ದಾರೆ. ಕಾಂಗ್ರೆಸ್‌ನಲ್ಲಿ ವಯಸ್ಸಿಗೆ ತಕ್ಕ ಮರ್ಯಾದೆ ಕೊಡಲಿಲ್ಲ ಅಂತ ಗೊಣಗುತ್ತಿರುವ ಕೃಷ್ಣರಿಗೆ ಬಿಜೆಪಿಯೊಳಗೆ ಅಡ್ವಾಣಿ, ಮುರುಳಿ ಮನೋಹರ್ ಜೋಷಿಗಳ ನಿರಾಶ್ರಿತ ಶಿಬಿರ ಕಾಣದಿದ್ದುದು ಬಹುಶಃ ಅವರ ವಯೋಸಹಜ ಮಂದದೃಷ್ಟಿಯ ಪ್ರಭಾವದಿಂದ ಇರಬಹುದು.

ಇನ್ನು ಮೋದಿಯ ನೋಟು ರದ್ದತಿಯಂತಹ ಐತಿಹಾಸಿಕ ಕ್ರಮ, ಸರ್ಜಿಕಲ್ ದಾಳಿ, ಭ್ರಷ್ಟಾಚಾರ ವಿರೋಧಿ ಮನಸ್ಥಿತಿಗೆ ಸೋತು ಬಿಜೆಪಿ ಸೇರಿದ್ದೇನೆ ಅನ್ನೋ ಪಿಳ್ಳಂಗೋವಿಯನ್ನು ಏದುಸಿರು ಬಿಟ್ಟು ಊದುತ್ತಿರುವ ಕೃಷ್ಣ ಬಗ್ಗೆ ಜನ ನಗಬೇಕೊ, ಮರುಗಬೇಕೊ ತಿಳಿಯದೆ ಅಯ್ಯೋ ಪಾಪ ಅನ್ನುತ್ತಿದ್ದಾರೆ.

ಕೃಷ್ಣ ಹಿಂದೆ ಯಾರ್‍ಯಾರು?

ಕೃಷ್ಣರ ಪ್ರಬಲ ಹಿಂಬಾಲಕ ಶ್ರೀರಂಗಪಟ್ಟಣದ ರವೀಂದ್ರ ಶ್ರೀಕಂಠಯ್ಯ ಕೃಷ್ಣರನ್ನೇ ಅನುಸರಿಸಿ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ಆದರೆ ಯಾವ ಪಕ್ಷಕ್ಕೆ ಸೇರುತ್ತೇನೆನ್ನುವುದನ್ನು ಅವರು ಇನ್ನೂ ಬಹಿರಂಗ ಪಡಿಸಿಲ್ಲ. 2008 ಮತ್ತು 2013 ಎಲೆಕ್ಷನ್‌ಗಳಲ್ಲಿ ಈ ರವೀಂದ್ರನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸುವುದಕ್ಕೇ ಕೃಷ್ಣರಿಂದ ಸಾಧ್ಯವಾಗಲಿಲ್ಲ. ಅಸಲಿಗೆ ರವೀಂದ್ರರ ಪರ ಕ್ಷೇತ್ರದಲ್ಲಿ ಒಳ್ಳೆಯ ಹೆಸರಿತ್ತು. ಅದನ್ನು ಎನ್‌ಕ್ಯಾಶ್ ಮಾಡಿಕೊಂಡು ಆತನಿಗೆ ಟಿಕೆಟ್ ಕೊಡಿಸಲು ಕೃಷ್ಣ ಹೆಣಗಾಡಿದ್ದರೆ ಆತ ಗೆದ್ದು ಶಾಸಕನಾಗಿರುತ್ತಿದ್ದ. ಆದರೆ ಅಂಬರೀಷ್ ಮುಂದೆ ಬಾಲ ಮುದುರಿಕೊಂಡ ಕೃಷ್ಣ ರವೀಂದ್ರನಿಗೆ ಮತ್ತು ಕಾಂಗ್ರೆಸ್‌ಗೆ ಭಾರೀ ಲುಕ್ಸಾನನ್ನೇ ಮಾಡಿದ್ದರು.

ಶ್ರೀರಂಗಪಟ್ಟಣದಲ್ಲಿ ಜೆಡಿಎಸ್ ಪ್ರಾಬಲ್ಯವಿದ್ದು, ಕಾಂಗ್ರೆಸ್ ಸೇರುವ ತವಕದಲ್ಲಿರುವ ಹಾಲಿ ಜೆಡಿಎಸ್ ಶಾಸಕ ರಮೇಶ್‌ಬಾಬು ಈ ಸಲ ಸೋಲುವುದು ಗ್ಯಾರಂಟಿ ಎನ್ನುವ ವಾತಾವರಣವಿದೆ. ಇಂತಹ ಪರಿಸ್ಥಿತಿಯಲ್ಲಿ ರವೀಂದ್ರ ಶ್ರೀಕಂಠಯ್ಯ ಜೆಡಿಎಸ್ ಪಕ್ಷ ಸೇರಿದರೆ ಗೆಲ್ಲುವುದು ಖಚಿತ. ಈಗಾಗಲೇ ರವೀಂದ್ರ ಶ್ರೀಕಂಠಯ್ಯ ಜೆಡಿಎಸ್ ಪಕ್ಷ ಸೇರುವ ಸಾಧ್ಯತೆಯಿದೆ ಎಂಬ ಪುಕಾರುಗಳಿವೆ. ಇಂಥಾ ಸಮಯದಲ್ಲಿ ರವೀಂದ್ರ ಶ್ರೀಕಂಠಯ್ಯ ಕುರುಡು ಅಭಿಮಾನಕ್ಕೆ ಬಿದ್ದು ಕೃಷ್ಣರನ್ನು ಹಿಂಬಾಲಿಸಿದರೆ ರಾಜಕೀಯ ವನವಾಸ ಅನುಭವಿಸುವುದು ಖಂಡಿತ.

ಇನ್ನು ಪಾಂಡವಪುರದಲ್ಲಿ ಮಾಜಿ ಶಾಸಕ ಹಲಗೇಗೌಡ ಪುತ್ರ ಹೆಚ್.ಮಂಜುನಾಥ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಕೃಷ್ಣರ ಜೊತೆ ನಿಂತಿದ್ದಾರೆ. ಪಾಂಡವಪುರ (ಮೇಲುಕೋಟೆ ವಿಧಾನಸಭಾ ಕ್ಷೇತ್ರ) ತಾಲ್ಲೂಕಿನಲ್ಲಿ ಮಂಜುನಾಥ್‌ಗೆ ಹೇಳಿಕೊಳ್ಳುವಂತಹ ಬೇಸ್ ಇಲ್ಲ. ಜಕ್ಕನಹಳ್ಳಿ ಜಿ.ಪಂ. ವ್ಯಾಪ್ತಿಯಲ್ಲಿಷ್ಟೇ ಸ್ವಲ್ಪ ಜನ ಬೆಂಬಲವಿರುವ ಕಾರಣಕ್ಕೆ ಈತನ ತಮ್ಮ ತ್ಯಾಗರಾಜು ಜಿ.ಪಂ. ಸದಸ್ಯನಾಗಿದ್ದಾನೆ. ಇಲ್ಲೇನಿದ್ದರೂ ಜೆಡಿಎಸ್ ಸಂಸದ ಪುಟ್ಟರಾಜು-ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಇಬ್ಬರದೇ ಪ್ರಭಾವ. ಮೇಲುಕೋಟೆ ಕ್ಷೇತ್ರದ ಮಂಜುನಾಥ್‌ಗೆ ಬಿಜೆಪಿ ಟಿಕೆಟ್ ಕೊಟ್ಟರೆ ಕೃಷ್ಣರ ಕಾರಣಕ್ಕೆ ಕಮಲ ಅರಳುವುದು ಹಗಲುಗನಸು.

ಕೆ.ಆರ್.ಪೇಟೆಯಲ್ಲಿ ಕೃಷ್ಣರನ್ನು ಹಿಂಬಾಲಿಸಿಕೊಂಡು ಹೋಗಲು ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸುತರಾಂ ಒಪ್ಪುತ್ತಿಲ್ಲ. ಕೃಷ್ಣರ ಹಿಂಬಾಲಕನಾಗಿದ್ದರೂ ಬಿಜೆಪಿ ಸೇರಲು ಚಂದ್ರಶೇಖರ್ ಹಿಂದೇಟು ಹಾಕಿದ್ದಾರೆ. "ನಾನು ಯಾವ ಕಾರಣಕ್ಕೂ ಕೃಷ್ಣರ ಹಿಂದೆ ಹೋಗುವುದಿಲ್ಲ, ಕಾಂಗ್ರೆಸ್‌ನಲ್ಲೇ ಇರುತ್ತೇನೆ" ಎಂದು ಸ್ಪಷ್ಟಪಡಿಸಿದ್ದಾರೆ. ಅಲ್ಲಿಗೆ ಕಮಲ ಪಕ್ಷಕ್ಕೆ ಅಂತಹ ದೊಡ್ಡ ನಾಯಕರ್‍ಯಾರು ಕೆ.ಆರ್.ಪೇಟೆಯಲ್ಲಿ ಸೇರುತ್ತಿಲ್ಲ. ಕೃಷ್ಣರ ಪುಡಿಪುಕ್ಕ ಬೆಂಬಲಿಗರೂ ಕೂಡ ಚಂದ್ರಶೇಖರ್ ಕಾರಣಕ್ಕೆ ಕಾಂಗ್ರೆಸ್‌ನಲ್ಲೇ ಉಳಿದಿದ್ದಾರೆ.


ನಾಗಮಂಗಲದಲ್ಲಿ ಕೃಷ್ಣರೇ 2008ರ ಚುನಾವಣೆಯಲ್ಲಿ ಎಲ್.ಆರ್.ಶಿವರಾಮೇಗೌಡರನ್ನು ಬದಿಗೆ ಸರಿಸಿ ಕೆ.ಸುರೇಶ್ ಗೌಡರಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದರು. 2008ರಲ್ಲಿ ಗೆದ್ದು ಶಾಸಕನಾದ ಸುರೇಶ್ ಗೌಡ ಕೃಷ್ಣರನ್ನು ಹಿಂಬಾಲಿಸಿ ಬಿಜೆಪಿ ಸೇರುತ್ತಿಲ್ಲ. ಕಾಂಗ್ರೆಸ್ ಟಿಕೆಟ್ ಚಲುವರಾಯಸ್ವಾಮಿಗೆ ಸಿಗುವ ಸಾಧ್ಯತೆಯಿರುವುದರಿಂದ ಕಾಂಗ್ರೆಸ್ ಬಿಟ್ಟು ಜೆಡಿಎಸ್ ಪಕ್ಷಕ್ಕೆ ಹಾರುವಾಸೆ ಸುರೇಶ್ ಗೌಡರದ್ದು. ಈಗಾಗಲೇ ದೇವೇಗೌಡ ಹಾಗೂ ಕುಮಾರಸ್ವಾಮಿ ಜೊತೆ ಮಾತುಕತೆ ನಡೆಸಿರುವ ಸುರೇಶ್ ಗೌಡ ಯುಗಾದಿ ಹಬ್ಬ ಮುಗಿದ ನಂತರ ತೀರ್ಮಾನ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಜೆಡಿಎಸ್ ಟಿಕೆಟ್ ಮೇಲೆ ಮತ್ತೊಬ್ಬ ಮಾಜಿ ಶಾಸಕ ಶಿವರಾಮೇಗೌಡ ಕೂಡ ಕಣ್ಣಿಟ್ಟಿದ್ದರು. ಆದರೆ ಸುರೇಶ್ ಗೌಡ ಹೆಸರು ಸ್ಟ್ರಾಂಗ್ ಆಗಿ ಕೇಳುತ್ತಿದೆ. ಅಲ್ಲಿಗೆ ಕೃಷ್ಣರನ್ನು ಹಿಂಬಾಲಿಸುವ ಕರ್ಮ ಸುರೇಶ್ ಗೌಡನಿಗಿಲ್ಲ.

ಹಾಗೆಯೇ ಮಳವಳ್ಳಿ ಕ್ಷೇತ್ರದಲ್ಲಿ ಕೃಷ್ಣರನ್ನು ಬೆಂಬಲಿಸುವ ಮುಖಂಡರೇ ಇಲ್ಲ. ಹಾಲಿಶಾಸಕ ಪಿ.ಎಂ.ನರೇಂದ್ರಸ್ವಾಮಿಗೂ ಕೃಷ್ಣರಿಗೂ ಆಗಿ ಬರುವುದಿಲ್ಲ. ಎರಡನೇ ಬಾರಿ ಈ ಕ್ಷೇತ್ರದಿಂದ ಗೆದ್ದಿರುವ ನರೇಂದ್ರಸ್ವಾಮಿ ತನ್ನ ಸ್ವಂತ ಸಾಮರ್ಥ್ಯದ ಮೇಲೆ ಗೆದ್ದಿದ್ದಾರೆಯೇ ಹೊರತು ಅವರ ಹಿಂದೆ ಕೃಷ್ಣರ ಸಹಕಾರ ಸ್ವಲ್ಪವೂ ಇಲ್ಲ. ಈ ಕ್ಷೇತ್ರದಲ್ಲಿರುವ ಒಕ್ಕಲಿಗರು ಜೆಡಿಎಸ್‌ನ ಕುಮಾರಸ್ವಾಮಿ ಹಿಂದೆ ನಿಂತಿರುವ ಕಾರಣದಿಂದ ಹೈಟೆಕ್ ಕೃಷ್ಣ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ನಡೆಸಿದರೂ ಕಮಲ ಅರಳಿಸುವುದು ದುಸ್ಸಾಧ್ಯದ ಮಾತು. ಮಂಡ್ಯದ ಹಾಲಿ ಶಾಸಕ ಅಂಬರೀಶ್‌ಗೂ ಕೃಷ್ಣಗೂ ಎಣ್ಣೆ ಸೀಗೆಕಾಯಿ ಸಂಬಂಧ. ತನ್ನ ಶಿಷ್ಯ ರವೀಂದ್ರ ಶ್ರೀಕಂಠಯ್ಯನಿಗೆ ಎರಡು ಬಾರಿ ಟಿಕೆಟ್ ಕೈತಪ್ಪಲು ಅಂಬಿಯೇ ಕಾರಣ ಎಂಬ ಸಿಟ್ಟು ಕೃಷ್ಣರಿಗಿದೆ. ತನ್ನ ಸೋಮಾರಿತನದಿಂದಲೇ ಸಚಿವ ಸ್ಥಾನ ಕಳೆದುಕೊಂಡಿರುವ ಅಂಬಿಯನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿದೆ. ಅಂಬಿ ಬಿಜೆಪಿ ಬಾವುಟ ಹಿಡಿದು ಬಂದರೂ ಮಂಡ್ಯದ ಜನ ರೋಸಿಹೋಗಿದ್ದು, ಅಂಬಿಗೆ ಪಾಠ ಕಲಿಸುವುದು ನಿಶ್ಚಿತ. ಹಾಗಾಗಿ ಮಂಡ್ಯದಲ್ಲೂ ಬಿಜೆಪಿ ಪಕ್ಷಕ್ಕೆ ನೆಲೆ ಸಿಕ್ಕುವುದಂತೂ ದೂರದ ಮಾತು. ಇನ್ನು ಕೃಷ್ಣ ಸಿಎಂ ಆಗಿದ್ದಾಗ ಡಿಫ್ಯಾಕ್ಟೋ ಸಿಎಂ ರೀತಿ ವರ್ತಿಸಿದ ಪರಮಾಪ್ತ ಶಿಷ್ಯ ಶಿವಕುಮಾರ್ ಕೂಡ ಕೃಷ್ಣರನ್ನು ಹಿಂಬಾಲಿಸುವುದು ಮೂರ್ಖತನದ ನಿರ್ಧಾರ ಎಂದು ಭಾವಿಸಿದ್ದಾರೆ. ಅಲ್ಲದೆ ಈಗಾಗಲೇ ಶಿವಕುಮಾರ್ ಮತ್ತು ಅವರ ಸಹೋದರ ಹಾಗೂ ಡಿ.ಕೆ.ಸುರೇಶ್ ಕೃಷ್ಣರ ಅವಕಾಶವಾದಿತನದ ಬಗ್ಗೆ ಟೀಕಿಸಿದ್ದಾರೆ. ಶಿವಕುಮಾರ್‌ಗೆ ಮುಂದೊಂದು ದಿನ ಸಿಎಂ ಆಗುವ ಛಾನ್ಸ್ ಸಿಗುವುದಾದರೆ ಅದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಎಂದು ಗೊತ್ತಿದೆ. ಪ್ರಬಲ ಒಕ್ಕಲಿಗ ಕೋಮಿನ ಪ್ರಮುಖ ಮುಖಂಡನಾಗಿರುವ ಶಿವಕುಮಾರ್ ಯಾವ ಕಾರಣಕ್ಕೂ ಬಿಜೆಪಿ ಸೇರುವಂತಹ ಆತ್ಮಹತ್ಯೆ ನಿರ್ಧಾರಕ್ಕೆ ಕೈಹಾಕುವುದಿಲ್ಲ.

75 ವರ್ಷ ವಯಸ್ಸಿನ ರಾಜಕಾರಣಿಗಳಿಗೆ ಮಣೆ ಹಾಕುವುದಿಲ್ಲವೆಂದಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅದ್ಯಾವ ಉದ್ದೇಶವಿಟ್ಟುಕೊಂಡು 85ರ ಹರೆಯದ ವೃದ್ಧ ಕೃಷ್ಣರಿಗೆ ಮಣೆ ಹಾಕಿದರೋ ತಿಳಿಯದಾಗಿದೆ. ಐಟಿ-ಬಿಟಿ ಕ್ಷೇತ್ರಕ್ಕೆ ಪ್ರಾಮುಖ್ಯತೆ ಕೊಟ್ಟ ಕಾರಣಕ್ಕೆ ಬೆಂಗಳೂರಿನಲ್ಲಿ ಅವರ ಪ್ರಭಾವ ಕೆಲಸ ಮಾಡುತ್ತದೆ ಎನ್ನುವುದು ಕೂಡ ಶುದ್ಧ ಸುಳ್ಳು. ಬಿಜೆಪಿಗೆ ಬೆಂಗಳೂರಿನಲ್ಲಿ ಪ್ರಬಲ ಹಿಡಿತವಿದೆ. ಆ ಕಾರಣಕ್ಕೆ ಅತಿಹೆಚ್ಚು ಎಂಎಲ್‌ಎಗಳು ಬಿಜೆಪಿ ಪಕ್ಷದವರಾಗಿದ್ದಾರೆ. ಒಂದುವೇಳೆ ಐಟಿ-ಬಿಟಿ ಕ್ಷೇತ್ರದಲ್ಲಿರುವವರು ಕೃಷ್ಣರನ್ನು ಬೆಂಬಲಿಸುವುದೇ ಆಗಿದ್ದರೆ ಬೆಂಗಳೂರಿನಲ್ಲಿ ಬಿಜೆಪಿಗಿಂತ ಕಾಂಗ್ರೆಸ್ ಎಂಎಲ್‌ಎಗಳೇ ಹೆಚ್ಚಿರಬೇಕಿತ್ತು. ಆದರೆ ಅದ್ಯಾವುದೂ 2013ರ ಚುನಾವಣೆಯಲ್ಲಿ ವರ್ಕೌಟ್ ಆಗಿಲ್ಲ. ಇದೆಲ್ಲಾ ಗೊತ್ತಿದ್ದರೂ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡು ದೊಡ್ಡಮಟ್ಟದಲ್ಲಿ ಹೈಪ್ ಕ್ರಿಯೇಟ್ ಮಾಡುವುದು ಬಿಜೆಪಿ ಉದ್ದೇಶ. ಅದಕ್ಕಾಗೇ ಯಡಿಯೂರಪ್ಪ ಕೈಲಾಗದ ಕೃಷ್ಣ ಅಂಬರೀಶ್ ಸೇರಿದಂತೆ ಹಲವರ ಬೆನ್ನುಬಿದ್ದಿದ್ದಾರೆ.


■ ವರದಿಗಾರ

ಹೊಳಲ್ಕೆರೆ: ಮಂತ್ರಿ ಆಂಜನೇಯರಿಗೆ ಉಮಾಪತಿಯ 'ಜಾಗೃತಿ' ಗುನ್ನ!



ಆಂಜನೇಯ

ವಿಧಾನಸಭಾ ಚುನಾವಣೆಗೆ ಇನ್ನೇನು ಒಂದು ವರ್ಷ ಇರುವಾಗ ಹೊಳಲ್ಕೆರೆಯ ಕಾಂಗ್ರೆಸ್ ಪಾಳಯ ಅಡಾಲೆದ್ದುಹೋಗಿದೆ. ಕುತಂತ್ರ ರಾಜಕಾರಣ, ಪ್ರತಿಷ್ಠೆಯ ಪರಾಕ್ರಮಗಳು ಸಚಿವ ಆಂಜನೇಯರ ಭವಿಷ್ಯಕ್ಕೆ ಗೆದ್ದಲು ಹಿಡಿಸಲು ಸಕಲ ಸನ್ನದ್ಧವಾಗಿ ಕೂತಿವೆ. ದುರಂತವೆಂದರೆ ಇಂತಹದ್ದೊಂದು ಸ್ವಪಕ್ಷಘಾತುಕ ಕಾಯಕದ ಮುಂದಾಳತ್ವ ವಹಿಸಿರೋದು ಅದೇ ಪಾರ್ಟಿಯ ಮಾಜಿ ಶಾಸಕ ಉಮಾಪತಿ ಮತ್ತು ಪರಾಜಿತ ಸಂಸತ್ ಕ್ಯಾಂಡಿಡೇಟ್ ತಿಪ್ಪೇಸ್ವಾಮಿ. ಇವರಿಬ್ಬರೂ ಮಂತ್ರಿ ಆಂಜನೇಯರಿಗೆ ಪಾಠ ಕಲಿಸಲು ತಾವು ಕುಳಿತ ಕೊಂಬೆಗೇ ಕೊಡಲಿ ಏಟು ಬೀಸುತ್ತಿರೋದು ಕಾಂಗ್ರೆಸ್ ಪಾಲಿನ ಬಹುದೊಡ್ಡ ದುರಂತ!



ತಿಪ್ಪೇಸ್ವಾಮಿ

ಆಂಜನೇಯ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದರೂ ಅಭಿವೃದ್ಧಿ ಅಷ್ಟಕ್ಕಷ್ಟೆ ಎನ್ನುವುದು ವಾಸ್ತವ. ಜೊತೆಗೆ ಮಂತ್ರಿಯಾಗಿ ಜಿಲ್ಲಾ ಕೈ ಪಾಳೆಯದ ಕಾರ್ಯಕರ್ತರು ಮತ್ತು ಮುಖಂಡರ ನಡುವೆಯೂ ಅವರ ಸಮನ್ವಯತೆ ಅಷ್ಟಕ್ಕಷ್ಟೇ. ಕೆಲವೇ ಕೆಲವು ಸೆಲೆಕ್ಟೆಡ್ ನಾಯಕರ ಪರಾಕುಗಳಲ್ಲಿ ಕಳೆದುಹೋಗಿರುವ ಆಂಜನೇಯರ ವಿರುದ್ಧ ಕೈ ಕಾರ್ಯಕರ್ತರು ಮುನಿಸಿಕೊಂಡಿರೋದು ಸಕಾರಣವಾಗೇ ಇದೆ. ಜಿ.ಪಂ.-ತಾ.ಪಂ. ಚುನಾವಣೆಗಳಲ್ಲಿ ಕಾಂಗ್ರೆಸ್ ಪಾರ್ಟಿ ನಿರೀಕ್ಷಿತ ಫಲ ದಕ್ಕಿಸಿಕೊಳ್ಳದೇ ಹೋದುದು ಇದೇ ಕಾರಣಕ್ಕೆ. ಆದರೆ ಆಂಜನೇಯ ಮೇಲಿನ ಇಂತಹ ಸಕಾರಣ ಮುನಿಸನ್ನು ತಮ್ಮ ಸ್ವಾರ್ಥಕ್ಕಾಗಿ ಎನ್‌ಕ್ಯಾಶ್ ಮಾಡಿಕೊಳ್ಳಲು ಮಾಜಿ ಶಾಸಕ ಉಮಾಪತಿ ಮತ್ತು 2009ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಚಿತ್ರದುರ್ಗದಿಂದ ಸೋತ ಡಾ.ತಿಪ್ಪೇಸ್ವಾಮಿ ಮುಂದಾಗಿದ್ದಾರೆ.


ಉಮಾಪತಿಯ 'ಪಕ್ಷಾಂತರಿ' ಯಾತ್ರೆ

ಜನರ ಮನಸ್ಸಿನಿಂದ ಹೆಚ್ಚೂಕಮ್ಮಿ ಮಾಸಿಹೋಗಿರುವ ಉಮಾಪತಿ ಎಂಬ ಓಟ್‌ಡೇಟೆಡ್ ಮುಖ 1989ರಲ್ಲಿ ಹೊಳಲ್ಕೆರೆಯಿಂದ ಗೆದ್ದು ಶಾಸಕನಾದದ್ದು ಬಿಟ್ಟರೆ ಆಮೇಲೆ ರಾಜಕೀಯ ನಿರುದ್ಯೋಗ ಅನುಭವಿಸಿದ್ದೇ ಹೆಚ್ಚು. 2008ರ ವೇಳೆಗೆ ಹೊಳಲ್ಕೆರೆ ಕ್ಷೇತ್ರ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾದ್ದರಿಂದ ಉಮಾಪತಿಯ ಜಾಗಕ್ಕೆ ದಾವಣಗೆರೆಯ ಆಂಜನೇಯ ಬಂದು ಠಳಾಯಿಸಿದ್ದರು. ಹಾಗೆ ನೋಡಿದರೆ ಚಿತ್ರದುರ್ಗ ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳ ಪೈಕಿ ಹಿರಿಯೂರು, ಚಿತ್ರದುರ್ಗ ಮತ್ತು ಹೊಸದುರ್ಗ ಕ್ಷೇತ್ರಗಳನ್ನು ಬಿಟ್ಟರೆ ಉಳಿದ ಮೂರು ಕ್ಷೇತ್ರಗಳು ಮೀಸಲು ಕ್ಷೇತ್ರಗಳಾಗಿವೆ. ಹಾಗಾಗಿ ಉಮಾಪತಿ ಅಕ್ಕಪಕ್ಕದ ಕ್ಷೇತ್ರಗಳಿಗೆ ವಲಸೆ ಹೋಗಿ ಬರಕತ್ತಾಗುವುದೂ ಕಷ್ಟದ ಮಾತಾಗಿತ್ತು. ಅಷ್ಟೊತ್ತಿಗಾಗಲೇ ಚಳ್ಳಕೆರೆಯ ಸುಧಾಕರ ಕೂಡಾ ಇದೇ ಮೀಸಲು ಕಾರಣಕ್ಕೆ ಪಕ್ಕದ ಹಿರಿಯೂರಿನಲ್ಲಿ ನೆಲೆ ಭದ್ರಮಾಡಿಕೊಂಡಿದ್ದ. ಇನ್ನು ಹೊಸದುರ್ಗದಲ್ಲಿ ಗೋವಿಂದಪ್ಪ ಚಿತ್ರದುರ್ಗದಿಂದ ಭೀಮಸಮುದ್ರ ಮಂಜಣ್ಣ ಗಟ್ಟಿಯಾಗಿ ಕೈ ಪಾರ್ಟಿಯೊಳಗೆ ಬೇರೂರಿದ್ದರಿಂದ ಅಲ್ಲಿಂದಲೂ ಉಮಾಪತಿಗೆ ಕಾಂಗ್ರೆಸ್ ಟಿಕೆಟ್ ಸಿಗುವಂತಿರಲಿಲ್ಲ, ಎಲ್ಲಾ ಕಡೆ 'ನೋ ವೇಕೆನ್ಸಿ' ಬೋರ್ಡುಗಳೇ ಆತನನ್ನು ಸ್ವಾಗತಿಸಿದ್ದವು. ಆಗ ಉಮಾಪತಿ ವಿಧಿಯಿಲ್ಲದೆ ಪಕ್ಷೇತರನಾಗಿ ಹಿರಿಯೂರಿನಿಂದ ಕಣಕ್ಕಿಳಿದಿದ್ದ ಅಲ್ಲಿ ಗೊಲ್ಲರ ಮತಗಳು ಹೆಚ್ಚಿದ್ದರೂ ಅವು ಸುಧಾಕರನ ಬೆನ್ನಿಗೆ ನಿಂತಿದ್ದವು. ಜೆಡಿಎಸ್‌ನಿಂದ ಕಣಕ್ಕಿಳಿದಿದ್ದ ಗೊಲ್ಲ ಸಮುದಾಯದ ಕೃಷ್ಣಪ್ಪನಿಗೇ ಗೆಲುವು ದಕ್ಕಿಸಿಕೊಳ್ಳಲು ಆಗಲಿಲ್ಲ ಅಂದಮೇಲೆ ವಲಸಿಗ ಉಮಾಪತಿ ಗೆಲ್ಲುವುದುಂಟಾ?

ಪಕ್ಷೇತರನಾಗಿ ಸೋತು, ಆಮೇಲೆ ಜೆಡಿಎಸ್ ಸೇರಿ, ಅಲ್ಲಿಂದಲೂ ಹೊರಬಂದು ಶ್ರೀರಾಮುಲುನ ಬಿಎಸ್ಸಾರ್, ಯಡ್ಡಿಯ ತೆಂಗಿನಕಾಯಿ ಅಂತೆಲ್ಲ ಚೌಕಾಸಿ ಮಾಡಿದನಾದರು ಉಮಾಪತಿ ಎಲ್ಲೂ ಗತಿಮುಟ್ಟಲಿಲ್ಲ, ಆತನ ಸರ್ವಪಕ್ಷ ಸದಸ್ಯತ್ವದ ಅಭಿಯಾನ ಮಕಾಡೆ ಮಲಗಿದ ನಂತರ ಹಳೇ ಗಂಡನ ಪಾದವೇ ಗತಿ ಅನ್ನುವಂತೆ ಉಮಾಪತಿ ದಬಾಕಿಕೊಂಡಿದ್ದು ಕಾಂಗ್ರೆಸ್ ಪಡಸಾಲೆಯಲ್ಲಿ. ಅಷ್ಟೊತ್ತಿಗಾಗಲೇ ಆತ ಸವಕಲು ನಾಣ್ಯದಂತಾಗಿದ್ದ. ಆದರೆ ಅಧಿಕಾರದ ರುಚಿ ಕಂಡಿದ್ದ ಗತ್ತು ಎಲ್ಲಿ ಹೋಗಬೇಕು. 2008ರಲ್ಲಿ ದಾವಣಗೆರೆಯಿಂದ ಆಂಜನೇಯರನ್ನು ಹೊಳಲ್ಕೆರೆಗೆ ಕರೆತಂದು, ಚುನಾವಣೆಗೆ ಹಣ ಹೊಂದಿಸಿಕೊಟ್ಟದ್ದು ತಾನೇ ಎನ್ನುವ 'ಋಣ'ಭಾರದ ಭ್ರಮೆಯಲ್ಲಿದ್ದ ಉಮಾಪತಿಯ ಫ್ಯೂಡಲ್ ಮನಸ್ಸು ಈಗಲೂ ಆಂಜನೇಯ ತನಗೆ ಡೊಗ್ಗು ಸಲಾಮು ಹೊಡೆಯಬೇಕು ಅಂತಲೇ ಬಯಸುತ್ತಿತ್ತು, ಆದರೆ ಮಂತ್ರಿಯಾದ ನಂತರ ಆಂಜನೇಯ ಉಮಾಪತಿಯನ್ನು ಲೆಕ್ಕಕ್ಕೂ ತೆಗೆದುಕೊಳ್ಳಲಿಲ್ಲ.


ಮಗನಿಗೂ ಸಿಗಲಿಲ್ಲ...

ತನ್ನ ರಾಜಕೀಯವಂತೂ ತುಕ್ಕು ಹಿಡಿದಿದ್ದಾಯ್ತು ಕಡೇಪಕ್ಷ ತನ್ನ ಮಗ ಕಾರ್ತಿಕ್‌ಗಾದರು ಒಂದು ದಾರಿ ಮಾಡಿಕೊಡಬೇಕೆನ್ನುವ ಪಿತೃ ಸಹಜ ಹಪಾಹಪಿ ಉಮಾಪತಿಯನ್ನು ಕಾಡುತ್ತಲೇ ಇತ್ತು. ಅದಕ್ಕೆಂದೇ 2011ರಲ್ಲೇ ಕಾರ್ತೀಕ್ ಯಾದವನನ್ನು ತಾಳ್ಯ ಜಿಲ್ಲಾ ಪಂಚಾಯತ್ ಕ್ಷೇತ್ರದಿಂದ ಕೈ ಪಾರ್ಟಿಯ ಅಭ್ಯರ್ಥಿಯಾಗಿಸಿದ್ದ. ಆಗಿನ್ನು ಹೊಳಲ್ಕೆರೆ ಕಾಂಗ್ರೆಸ್‌ನಲ್ಲಿ ಆಂಜನೇಯರ ಯಜಮಾನಿಕೆ ಅಷ್ಟಾಗಿ ನಡೆಯುತ್ತಿರಲಿಲ್ಲವಾದ್ದರಿಂದ ಉಮಾಪತಿ ಮಗನಿಗೆ ಕೈ ಟಿಕೆಟು ಸಲೀಸಾಗಿ ಸಿಕ್ಕಿತ್ತು, ಆದರೆ ಅದೇ ಕ್ಷೇತ್ರದಿಂದ ಬಿಜೆಪಿಯಿಂದ ಕಣಕ್ಕಿಳಿದಿದ್ದ ಮಾಜಿ ಶಾಸಕ ಶಿವಪುರದ ರಮೇಶನ ಮಗ ಶಿವಕುಮಾರನ ಎದುರು ಕಾರ್ತಿಕ್ ಗೆಲುವಿನ ಗಡಿ ಮುಟ್ಟಲಾಗಲಿಲ್ಲ, ಈ ಸರಿಯಾದರೂ ಮಗನನ್ನು ಗೆಲ್ಲಿಸಿ ಝೆಡ್‌ಪಿ ಮಂಬರ್ ಮಾಡಬೇಕೆನ್ನುವ ಕಸರತ್ತು ಶುರು ಮಾಡಿದ್ದ ಉಮಾಪತಿ, ರಾಮಗಿರಿ ಕ್ಷೇತ್ರದಿಂದ ಕೈ ಟಿಕೆಟು ಕೊಡಿಸಲು ಪ್ರಯತ್ನಿಸಿದ್ದ. ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಜೊತೆಗೂ ಮಾತಾಡಿ ಸಮ್ಮತಿ ಪಡೆದುಕೊಂಡಿದ್ದ.



ಉಮಾಪತಿ

ಆದರೆ ಮಂತ್ರಿಯಾದ ನಂತರ ಜಿಲ್ಲಾ ಕಾಂಗ್ರೆಸ್‌ನ 'ದೊಣ್ಣೆ' ನಾಯಕರಾಗಿರುವ ಆಂಜನೇಯ ಅದಕ್ಕೆ ಅಡ್ಡಗಾಲು ಹಾಕಿದ್ದರು. ಉಮಾಪತಿಗೆ ಸೆಡ್ಡು ಹೊಡೆಯುವಂತೆ ರಾಮಗಿರಿ ಕ್ಷೇತ್ರದಿಂದ ಗಂಗಾಧರಪ್ಪನ ಕೈಗೆ ಬಿ ಫಾರಂ ಇತ್ತ ಆಂಜನೇಯ ಹಿಂದೊಮ್ಮೆ ಇದೇ ಹೊಳಲ್ಕೆರೆಯಲ್ಲಿ ತಾನು ಬೇರೂರಲು ನೆರವು ನೀಡಿದ್ದ ಉಮಾಪತಿಯ ವಿರುದ್ಧ ಬಹಿರಂಗ ಯುದ್ಧವನ್ನೇ ಸಾರಿದ್ದರು. ಸ್ವತಃ ಸಿದ್ದರಾಮಯ್ಯ, ಪರಮೇಶ್ವರ್ ಅಸ್ತು ಅಂದರೂ ಈ ಆಂಜನೇಯ ನಕ್ಕೋ ಅಂದನಲ್ಲ ಅಂತ ಉಮಾಪತಿಯ ಸಿಟ್ಟು ನೆತ್ತಿಗೇರಿತ್ತು, ಆಂಜನೇಯ ಮತ್ತು ಉಮಾಪತಿ ನಡುವಿನ ಪ್ರತಿಷ್ಠೆಯ ಕಾಳಗಕ್ಕೆ ಬಲಿಯಾದದ್ದು ಪಾಪ, ಕೈ ಪಾರ್ಟಿಯ ಅಭ್ಯರ್ಥಿ ಗಂಗಾಧರಪ್ಪ, ಮಗನಿಗೆ ಟಿಕೆಟು ತಪ್ಪಿದ್ದರಿಂದ ಕೃದ್ಧಗೊಂಡ ವೃದ್ಧ ತಂದೆ ಉಮಾಪತಿ ಬಿಜೆಪಿಯ ಮಹೇಶ್ವರಪ್ಪನ ಗೆಲುವಿಗೆ ಸಹಕರಿಸಿ, ಗಂಗಾಧರಪ್ಪನ ಮೂಲಕ ಆಂಜನೇಯರನ್ನೂ, ಕಾಂಗ್ರೆಸ್ಸನ್ನೂ ಸೋಲಿಸಿ ವಿಜೃಂಭಿಸಿದ್ದ ಲುಕ್ಸಾನು ಆದದ್ದು ಕಾಂಗ್ರೆಸ್ ಪಾರ್ಟಿಗೆ!



ಕಾರ್ತೀಕ್ ಯಾದವ್

ಬ್ಲ್ಯಾಕ್‌ಮೇಲ್ ಜಾಗೃತಿ

ಇದೀಗ ಆಂಜನೇಯ ವಿರುದ್ಧದ ತನ್ನ ಜಿದ್ದನ್ನು 2018ರ ಚುನಾವಣೆಗೂ ವಿಸ್ತರಿಸುವ ಮುನ್ಸೂಚನೆ ರವಾನಿಸಿರುವ ಉಮಾಪತಿ, ಡಾ.ತಿಪ್ಪೇಸ್ವಾಮಿಯೊಂದಿಗೆ ಕೈಜೋಡಿಸಿ ಕರಾಮತ್ತು ಶುರು ಮಾಡಿದ್ದಾನೆ. 'ಉಮಾಪತಿ ಅಭಿಮಾನಿಗಳ ಜನಜಾಗೃತಿ ಸಮಾವೇಶ'ದ ನೆಪದಲ್ಲಿ ಹೊಳಲ್ಕೆರೆ ತುಂಬಾ ಆಂಜನೇಯರ ಇಮೇಜಿಗೆ ಧಕ್ಕೆ ತರುವ ಕೆಲಸ ನಡೆಯುತ್ತಿದೆ. ಇದುವರೆಗೂ ಉಮಾಪತಿಯ ಅಭಿಮಾನಿಗಳ ಸೊಲ್ಲೇ ಇರದಿದ್ದ ಹೊಳಲ್ಕೆರೆಯಲ್ಲಿ ಇದ್ದಕ್ಕಿದ್ದಂಗೆ ಉಮಾಪತಿ ಅಭಿಮಾನಿಗಳು ಸಮಾವೇ[...] ಗೊಳ್ಳುವುದೆಂದರೆ ಏನರ್ಥ?

ಅಷ್ಟಕ್ಕೂ, ಅಂತ[...] ಸಮಾವೇಶಗಳಲ್ಲಿ ಕಾಣುತ್ತಿರುವ[...] ಮುಖಗಳ್ಯಾವುವೂ ಉಮಾಪ[...] ಅಭಿಮಾನಿಗಳಲ್ಲ, ಆಂಜನೇಯ[...] ಮಂತ್ರಿಗಿರಿ ವರ್ತನೆಯಿಂದ ಬೇಸ[...] ಹತಾಶ ಕಾರ್ಯಕರ್ತರಷ್ಟೇ. ಇವರ[...] ಆಂಜನೇಯರ ಮೇಲಿನ ಮುನಿಸ[...] ಹೊರಗೆಡವಲು ಉಮಾಪತಿ[...] ಬ್ಯಾನರ್ ಆದಿ ಸಂಘಟಿತರಾಗಿದ್ದಾ[...] ಹಿಂದಿನ ರಾತ್ರಿ ಚೆನ್ನಾಗಿ ಕಂಠಪಾಠ ಮಾಡಿಕೊಂ[...] ಬಂದವರಂತೆ 'ಉಮಾಪತಿಯನ್ನು ಕಡೆಗಣಿಸಿದವ[...] ಮುಂದಿನ ಚುನಾವಣೆಯಲ್ಲಿ ಗಂಟುಮೂಟೆ ಕಟ್ಟಿಕೊಂ[...] ರೆಡಿಯಾಗಿರಬೇಕು. ಉಮಾಪತಿಯ ಅಭಿಮಾನಿಗ[...] ಗಡಿಪಾರು ಮಾಡುತ್ತಾರೆ' ಎನ್ನುವ ಏಕಮಾತ್ರ ಸ್ಲೋಗನ[...] ವಿಭಿನ್ನ ಪದಪುಂಜಗಳ ಮೂಲಕ ಹರಿಬಂದದ್ದು ಬಿಟ್ಟ[...] ಉಮಾಪತಿಯ ಹೆಚ್ಚುಗಾರಿಕೆ ಬಗ್ಗೆ ಒಬ್ಬನೂ ಮಾತಾಡಲಿ[...]

'ನನ್ನ ಮಗನಿಗೆ ಆಂಜನೇಯ ಜಿ.ಪಂ. ಟಿಕೆ[...] ನೀಡಲಿಲ್ಲ, ಸಿದ್ದರಾಮಯ್ಯ, ಪರಮೇಶ್ವರರೇ ಟಿಕೆಟು ಗ್ಯಾರಂ[...] ಎಂದಿದ್ದರು. ಆದರೆ ಆಂಜನೇಯ ಕೊಕ್ಕೆ ಹಾಕಿದರು[...] ಅಂದ ಉಮಾಪತಿಯ ಮಾತು ಕೂಡಾ ಆಂಜನೇಯ[...] ಮೇಲಿನ ವೈಯಕ್ತಿಕ ಸ್ವಾರ್ಥ ದ್ವೇಷವನ್ನು ತೋರಿಸುತ್ತಿತ್ತು[...] ವಿನಾಃ ಕ್ಷೇತ್ರದ ಅಥವಾ ಅಭಿಮಾನಿಗಳ ಮೇಲಿ[...] ಕಾಳಜಿಯನ್ನಲ್ಲ.


ಹಾಗಂತ ಉಮಾಪತಿಯನ್ನು ಆಂಜನೇಯರಾಗಲಿ[...] ಕೈ ಪಾರ್ಟಿಯಾಗಲಿ ಹಗುರವಾಗಿ ಕಾಣುವಂತಿ[...] ಯಾಕೆಂದರೆ ಉಮಾಪತಿಗೆ ಹೊಳಲ್ಕೆರೆಯ ಮತದಾರ[...] ನಾಡಿಮಿಡಿತ ಚೆನ್ನಾಗಿ ಗೊತ್ತು, ಕ್ಷೇತ್ರದ ಗೊಲ್ಲರ[...] ನಾಯಕರು, ಕುರುಬರು, ಅಲ್ಪಸಂಖ್ಯಾತ ಮತದಾರ[...] ಮೇಲೆ ಉಮಾಪತಿಗೆ ಹಿಡಿತವಿದೆ. ಎಲ್ಲಕ್ಕಿಂತ ಹೆಚ್ಚಾ[...] ಉಮಾಪತಿ ಪಕ್ಕಾ ಕುತಂತ್ರಿ ರಾಜಕಾರಣಿ. ಈಗಾಗಲೇ[...] ಜಿ.ಪಂ, ತಾ.ಪಂ ಚುನಾವಣೆಗಳಲ್ಲಿ ಅದು ಸಾಬೀತಾಗಿ[...] ಇಂತಹ ಉಮಾಪತಿ ಜೊತೆಗೆ ಡಾ.ತಿಪ್ಪೇಸ್ವಾಮಿಯು[...] ಕೈಜೋಡಿಸಿರೋದು ಆಂಜನೇಯರ ಪಾಲಿಗೆ ಅಪಾಯಕಾ[...] ಫಾರ್ಮುಲಾ. ಅಭಿಮಾನಿಗಳ ಹೆಸರಿನ ಸಮಾವೇಶ[...] ಮೂಲಕ ಮುಂದಿನ ಚುನಾವಣೆಗೆ ಚಿತ್ರದುರ್ಗ ಕ್ಷೇತ್ರದಿಂ[...] ಉಮಾಪತಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕ[...] ತಿಪ್ಪೇಸ್ವಾಮಿಗೂ ಪಾರ್ಟಿಯಲ್ಲಿ ಸರಿಯಾದ ಜವಾಬ್ದಾ[...] ಜೊತೆಗೆ 2019ರ ಪಾರ್ಲಿಮೆಂಟ್ ಚುನಾವಣೆಗೆ ಟಿಕೆ[...] ನೀಡುವ ಭರವಸೆ ಕೊಡಬೇಕೆನ್ನುವ ಹಿಡನ್ ಅಜೆಂಡಾವ[...] ಬ್ಲ್ಯಾಕ್‌ಮೇಲ್ ತಂತ್ರಗಾರಿಕೆಯ ಮೂಲಕ ಹೊರಹಾಕಿದ್ದಾ[...] ಕಾರ್ಯಕರ್ತರನ್ನು ದೂರದಿಂದಲೇ ಸಾಗಹಾಕುವ ಮೂಲ[...] ದುರಹಂಕಾರಿ ಎನಿಸಿಕೊಂಡಿರುವ ಆಂಜನೇಯರ ವಿರು[...] ಜಿಲ್ಲೆ ಮತ್ತು ಹೊಳಲ್ಕೆರೆಯಲ್ಲಿರುವ ಅಸಮಾಧಾನ[...] ಈ ಘಾತುಕ ಜೋಡಿಯೊಂದಿಗೆ ಕೈಜೋಡಿಸಿಬಿಟ್ಟ[...] ಹಾಲಿ ಮಂತ್ರಿ ಸಾಹೇಬರು ಮುಂದಿನ ಎಲೆಕ್ಷ[...] ತರುವಾಯ ಮಾಜಿ ಶಾಸಕನ ಲೇಬಲ[...] ಅಂಟಿಸಿಕೊಳ್ಳೋದು ಗ್ಯಾರಂಟಿ. ಈಗಲಾದರ[...] ಆಂಜನೇಯರು ಎಚ್ಚೆತ್ತುಕೊಳ್ಳದಿದ್ದರೆ ಜನರ ತೀರ್ಪಿಗಿಂ[...] ಮೊದಲೇ ಇಂತವರ ಬಾಯಿಗೆ ಆಹಾರವಾಗೋದನ[...] ಯಾರೂ ತಪ್ಪಿಸಲು ಸಾಧ್ಯವಿಲ್ಲ.

■ ಟಿ.ಎನ್.ಎಸ್[...]




ಬಿಜೆಪಿಯಲ್ಲೂ ಉಂಟು ಬೇಗುದಿ!

ಹೊಳಲ್ಕೆರೆಯ ಮಟ್ಟಿಗೆ ಬಿಜೆಪಿಯ ಗ್ರಹಗತಿ ಯೂ ನೆಟ್ಟಗಿಲ್ಲ, ಯಾಕೆಂದರೆ ಯಡಿಯೂರಪ್ಪನ ಚೇಲಾ ಮಾಜಿ ಶಾಸಕ ಚಂದ್ರಪ್ಪ ಮತ್ತು ಆತನ ವಿರೋಧಿಗಳ ಕಚ್ಚಾಟ ತಾರಕಕ್ಕೇರಿದೆ. ಚಂದ್ರಪ್ಪನನ್ನು ಗಂಟುಮೂಟೆ ಸಮೇತ ಕ್ಷೇತ್ರದಿಂದಲೇ ಗಡಿಪಾರು ಮಾಡಲು ಅದೇ ಪಕ್ಷದ ಮಾಜಿ ಶಾಸಕ ಶಿವಪುರದ ರಮೇಶ್ ಪಣ ತೊಟ್ಟಿರುವಂತಿದೆ.




ಜನಾರ್ಧನ್ ಸ್ವಾಮಿ




ಚಂದ್ರಪ್ಪ

ಹೊಳಲ್ಕೆರೆ ಮೀಸಲು ಕ್ಷೇತ್ರವಾದ ತರುವಾಯ ಸಾಮಾನ್ಯ ವರ್ಗದ ಈ ರಮೇಶ್ ಕೂಡಾ ರಾಜಕೀಯ ನಿರ್ಗತಿಕ. ಆದರೂ ತಕ್ಕಮಟ್ಟಿಗೆ ಪ್ರಭಾವಿ ರಾಜಕಾರಣಿ. ಚಂದ್ರಪ್ಪನ ಧಿಮಾಕಿಗೆ ತಕ್ಕ ಶಾಸ್ತಿ ಮಾಡಲು ಮುಂಬರುವ 2018ರ ಚುನಾವಣೆಯಲ್ಲಿ ಬಿಜೆಪಿಯಿಂದ ಹನುಮಕ್ಕನನ್ನು ಕಣಕ್ಕಿಳಿಸಬೇಕೆಂದು ಮಠಾತ ಶುರು ಮಾಡಿಕೊಂಡಿದ್ದಾನೆ. ಈ ಹನುಮಕ್ಕನ ಗಂಡ ಆಂಜನೇಯ ಎಕ್ಸಿಕ್ಯೂಟಿವ್ ಆಫೀಸರ್‌ನಂತಹ ಸರ್ಕಾರಿ ಹುದ್ದೆಗಳಲ್ಲಿ ಗೆಬರಿದ ಕಾಸು ಕೋಟಿಗಟ್ಟಲೆ ಕೊಳೆಯುತ್ತಿದೆ. ಇನ್ನೇನು ನಿವೃತ್ತಿಯ ಅಂಚಿನಲ್ಲಿರುವ ಆತ ಅಷ್ಟರೊಳಗೆ ಹೆಂಡತಿಯನ್ನು ಪೊಲಿಟಿಕ್ಸ್‌ಗೆ ತಂದು ರಾಜಕೀಯ ಬೇರು ಗಟ್ಟಿ ಮಾಡಿಕೊಳ್ಳಬೇಕೆಂದು ಸಜ್ಜಾಗಿದ್ದಾನೆ. ಗಂಡನ ಹಡಬೆ ದುಡ್ಡನ್ನೇ ಚೆಲ್ಲಾಡುತ್ತಿರುವ ಹನುಮಕ್ಕ ಕ್ಷೇತ್ರದ ತುಂಬ ಅಂಡಲೆದು ಕಾರ್ಯಕರ್ತರಲ್ಲಿ ಗೊಂದಲ ಮೂಡಿಸುತ್ತಿದ್ದಾಳೆ. ಈ ಇಬ್ಬರ ನಡುವೆ ಟಿಕೆಟು ಯಾರಿಗೆ, ತಾವು ಯಾರ ಪರ ಪ್ರಚಾರ ಮಾಡಬೇಕೆನ್ನುವ ಗೊಂದಲದಲ್ಲೇ ಕಾರ್ಯಕರ್ತರು ಇರುವಾಗ ಈಗ ಹೊಸದೊಂದು ಟ್ವಿಸ್ಟ್ ಬಂದು ಸೇರಿಕೊಂಡಿದೆ. ಅದೇನೆಂದರೆ ಮಾಜಿ ಎಂಪಿ, ಐಟಿ ರುಸ್ತುಂ ಜನಾರ್ದನ ಸ್ವಾಮಿ ಹೊಳಲ್ಕೆರೆಯಿಂದ ಬಿಜೆಪಿ ಅಭ್ಯರ್ಥಿಯಾಗಲಿದ್ದಾರೆ ಎಂಬ ಸುದ್ದಿ. ಚಂದ್ರಪ್ಪ, ಹನುಮಕ್ಕ ಕಾಳಗದ ನಡುವೆ ಮೂರನೇ ವ್ಯಕ್ತಿಗೆ ಜೈ ಅಂದು ಇಬ್ಬರನ್ನೂ ಸಮಾನ ಸಂತ್ರಸ್ತರನ್ನಾಗಿಸುವ ಯೋಚನೆ ಯಡ್ಡಿಯ ಮನದಲ್ಲಿದೆ ಎನ್ನಲಾಗುತ್ತಿದೆ. ಚಂದ್ರಪ್ಪ ಸೈಲೆಂಟಾದರು ಹುಂಬರ ಬಹುಪರಾಕುಗಳಿಂದ ಬಲೂನಿನಂತೆ ಉಬ್ಬಿಹೋಗಿರುವ ಹನುಮಕ್ಕ ಪಕ್ಷೇತರಳಾಗಿ ಕಣಕ್ಕೆ ಧುಮುಕಿದರೂ ಅಚ್ಚರಿವಿಲ್ಲ!

ತುಮಕೂರು: ಪುಢಾರಿಗಿರಿ ಶುರು ಮಾಡಿದ ಸಂಘ ಪರಿವಾರ


ಗೃಹಮಂತ್ರಿ ಡಾ.ಜಿ.ಪರಮೇಶ್ವರ್


ಸುರೇಶ್ ಗೌಡ

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೇರಿದ ಮೇಲೆ ಕೇಸರಿ ಪಡೆಯ ಆರ್ಭಟ ಮಿತಿಮೀರಿದೆ. ದೇಶದ ಮೂಲೆಮೂಲೆಗಳಲ್ಲಿ ದಲಿತರು, ಅಲ್ಪಸಂಖ್ಯಾತರ ಮೇಲೆ ದಾಳಿಗಳ ಮೂಲಕ ತನ್ನ ಕಿರಾತಕ ಕೇಸರಿ ನೀತಿಗಳನ್ನು ಜಾರಿಗೆ ತರಲು ಸಂಘಪರಿವಾರ ಯತ್ನಿಸುತ್ತಿದೆ. ಉತ್ತರ ಪ್ರದೇಶ ಒಳಗೊಂಡ ಪಂಚರಾಜ್ಯ ಫಲಿತಾಂಶ ಹೊರಬಿದ್ದ ನಂತರವಂತೂ ಕೇಸರಿ ದೌರ್ಜನ್ಯಗಳು ಹೆಚ್ಚಾಗಿವೆ. ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಸಂಸ್ಕೃತಿ ರಕ್ಷಕರ ಭಾಷೆ ಅಸಹ್ಯ ಹುಟ್ಟಿಸುವಷ್ಟು ಉನ್ಮಾದವನ್ನು ನೆತ್ತಿಗೇರಿಸಿಕೊಂಡಿದೆ. ದಾವಣಗೆರೆಯಲ್ಲಿ ನಡೆದ ನಮ್ಮದೇ ಸಂಸ್ಥೆಯ 'ಲಂಕೇಶ್ 82' ಕಾರ್ಯಕ್ರಮದಲ್ಲಿ ಯೋಗಿಶ್ ಮಾಸ್ಟರ್ ಮೇಲೆ ಹಲ್ಲೆ ಮಾಡುವಷ್ಟು, ವಿಚಾರವಾದಿ ನರೇಂದ್ರ ನಾಯಕ್‌ರ ಹತ್ಯೆಗೆ ಯತ್ನಿಸುವಷ್ಟು ಸಂಘಿಗಳು ಕರ್ನಾಟಕದಲ್ಲಿ ದುಷ್ಟತನ ತೋರುತ್ತಿರೋದು ಆತಂಕದ ವಿಷಯವೇ ಆಗಿದೆ. ಇತ್ತ ತುಮಕೂರಿನಲ್ಲೂ ಸಂಘ ಪರಿವಾರ ತನ್ನ ಅಸ್ತಿತ್ವದ ಉಳಿವಿಗೆ ಕಸರತ್ತು ಶುರು ಹಚ್ಚಿಕೊಂಡಿದ್ದು ಪ್ರಜ್ಞಾವಂತರಲ್ಲಿ ಆತಂಕ ಮೂಡಿಸಿದೆ.

ಅಮಾಯಕರ ಮೇಲೆ ದೇಶದ್ರೋಹದ ಕೇಸ್

ಕಳೆದ ವರ್ಷ ಜೆ.ಎನ್.ಯು ನಾಯಕ ಕನ್ಹಯ್ಯ ಕುಮಾರ್‌ಗೆ ದೇಶದ್ರೋಹಿ ಪಟ್ಟಿ ಕಟ್ಟಲು ಹೋಗಿ ಛೀಮಾರಿ ಹಾಕಿಸಿಕೊಂಡಿದ್ದ ಕೇಸರಿವೀರರು ಅದೇ ಚಾಳಿಯನ್ನು ತುಮಕೂರಿನಲ್ಲೂ ಮುಂದುವರೆಸಿದ್ದಾರೆ. ಸಂಘ ಪರಿವಾರ ಹುಯಿಲೆಬ್ಬಿಸಿದ್ದ ಸಭೆಯಲ್ಲಿ ಕನ್ಹಯ್ಯ ನಿಜಕ್ಕೂ ಮಾತಾಡಿದ್ದೇನು ಅನ್ನೋದನ್ನು ಮುದ್ರಿಸಿದ್ದ ಕರಪತ್ರಗಳನ್ನು ವಿದ್ಯೋದಯ ಲಾ ಕಾಲೇಜಿನ ವಿದ್ಯಾರ್ಥಿನಿ ಜ್ಯೋತಿ ಮತ್ತು ಸಿಪಿಎಮ್ ಮುಖಂಡ ಚಿನ್ನಪ್ಪ ಜೂನಿಯರ್ ಕಾಲೇಜಿನ ಆವರಣದಲ್ಲಿ ಹಂಚುತ್ತಿದ್ದರು. ಸಂಘ ಪರಿವಾರದ ಎಬಿವಿಪಿ ಗೂಂಡಾಗಳು ಅವರನ್ನು ಥಳಿಸಿ ಎಳೆದಾಡಿ ಅವಮಾನ ಮಾಡಿದ್ದಲ್ಲದೆ ಜ್ಯೋತಿಯ ಹೊಟ್ಟೆಗೆ ಒದ್ದು ಹೊಡೆದಿದ್ದರು. ಈ ಇಬ್ಬರು ಬಹಳ ದಿನಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾಗಿ ಬಂದಿತ್ತು, ಇದೀಗ ಅವರ ಮೇಲೆ ದೇಶದ್ರೋಹದ ಕೇಸ್ ದಾಖಲಿಸಿದ್ದಾರೆ. ಎಬಿವಿಪಿಯ ಈ ಕೃತ್ಯಕ್ಕೆ ಬಿಜೆಪಿ ಮುಖಂಡರಾದ ಶಾಸಕ ಸುರೇಶ್ ಗೌಡ, ಮಾಜಿ ಸಂಸದ ಬಸವರಾಜು, ಸೊಗಡು ಶಿವಣ್ಣ ಬೆಂಗಾವಲಾಗಿ ನಿಂತಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ರಾಜ್ಯದ ಗೃಹಮಂತ್ರಿಗಳ ಒಡೆತನದ ಸಿದ್ಧಾರ್ಥ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೀಣ್ ಕುಮಾರ್ ಎಂಬ ಯುವಕನ ಮೇಲೆ ಸುಳ್ಳು ದೇಶದ್ರೋಹದ ಪ್ರಕರಣ ದಾಖಲಾಗುವಂತೆ ನೋಡಿಕೊಂಡಿದ್ದಾರೆ. ಅಸಲಿಗೆ ನಡೆದದ್ದೇನೆಂದರೆ, ಪ್ರವೀಣ್‌ನ ಗೆಳೆಯ ಮಂಜೇಶ್‌ನ ಹುಟ್ಟುಹಬ್ಬವಿದ್ದರಿಂದ ಎಲ್ಲರೂ ನೆರೆದು ಪಾರ್ಟಿ ಮಾಡುತ್ತಿದ್ದರು. ಆ ಹಾಸ್ಟೆಲ್‌ಗೆ ಭಗತ್ ಕ್ರಾಂತಿ ಸೇನೆ ಎಂಬ ಸಂಘಪರಿವಾರದ ಕಾರ್ಯಕರ್ತ ಸೆಕ್ಯೂರಿಟಿ ಗಾರ್ಡ್ ಆಗಿದ್ದ. ಆತ ಹೀಗೆ ಪಾರ್ಟಿ ಮಾಡುವಂತಿಲ್ಲ ಅನ್ನೋ ಪುಕ್ಕಟೆ ಸಂಸ್ಕೃತಿ ಭಾಷಣ ಬಿಗಿದು ಗದರಿದ್ದ. ಆತನ ಮಾತಿಗೆ ವಿದ್ಯಾರ್ಥಿಗಳು ಕಿಮ್ಮತ್ತು ಕೊಟ್ಟಿಲ್ಲ. ಕೆರಳಿದ ಆತ ತನ್ನ ಕ್ರಾಂತಿ ಸೇನೆಯ ಪುಂಡರನ್ನು ಕರೆಸಿಕೊಂಡು ವಿದ್ಯಾರ್ಥಿಗಳನ್ನು ಥಳಿಸಿದ್ದಲ್ಲದೆ, ಮಾರನೇ ದಿನ ಪ್ರವೀಣ್ ಕುಮಾರ್ ಎಂಬ ವಿದ್ಯಾರ್ಥಿಯ ಮೇಲೆಯೇ ಐಪಿಸಿ 153(ಬಿ) ಅಡಿ ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ಮತ್ತು 506 ಅಡಿ ಕೊಲೆ ಬೆದರಿಕೆ ಹಾಕಿದ ಸುಳ್ಳು ಕೇಸ್ ದಾಖಲಾಗುವಂತೆ ನೋಡಿಕೊಂಡಿದ್ದ. ವಿಪರ್ಯಾಸವೆಂದರೆ ಭಾರತೀಯ ಸೇನೆಯ ಹೆಸರಲ್ಲಿ ದೇಶಪ್ರೇಮದ ಗುತ್ತಿಗೆ ಹಿಡಿದವರಂತೆ ಆಡುವ ಸಂಘ ಪರಿವಾರದವರು ಯಾವ ಪ್ರವೀಣ್ ಕುಮಾರ್ ಮೇಲೆ ದೇಶದ್ರೋಹದ ಆರೋಪ ಹೊರಿಸಿದ್ದಾರೋ ಅದೇ ಪ್ರವೀಣ್ ಕುಮಾರ್‌ನ ತಂದೆ ಮತ್ತು ಅವರ ಕುಟುಂಬದ ನಾಲ್ಕು ಜನಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಘಿಗಳ ಅವಕಾಶವಾದ ಬಿಚ್ಚಿಡಲು ಇದಕ್ಕಿಂತ ಉದಾಹರಣೆ ಬೇಕೆ?

ನಮ್ಮ ರಾಜ್ಯದ ಕಾನೂನು ಸಚಿವರೆ ಈ ಜಿಲ್ಲೆಯ ಉಸ್ತುವಾರಿ ಸಚಿವ, ಅಲ್ಲದೇ ಗೃಹಮಂತ್ರಿ ಕೂಡಾ ಇದೇ ಜಿಲ್ಲೆಯವರು. ಆದರೆ ಅವರ್‍ಯಾರೂ ಅಮಾಯಕರ ನೆರವಿಗೆ ಬಾರದೆ ತಮ್ಮ ಬೆನ್ನಹಿಂದಿರುವ ಕೇಸರಿ ಮುಖವಾಡದ ಸಂಕೇತವಾಗಿ ವರ್ತಿಸುತ್ತಿದ್ದಾರೆ.


ಆತಂಕ ಸೃಷ್ಟಿಸುತ್ತಿರುವ ಪಥಸಂಚಲನಗಳು

ತುಮಕೂರಿನ ಗುಬ್ಬಿಯ ದಲಿತ ಯುವಕ ಅಭಿಷೇಕ್ ಮೇಲೆ ಮಾರಣಾಂತಿಕ ಹಲ್ಲೆ ನಡೆದಿದ್ದನ್ನು ಖಂಡಿಸಿ ಪ್ರಗತಿಪರರು 'ತುಮಕೂರು ಚಲೋ' ಕಾರ್ಯಕ್ರಮ ಆಯೋಜಿಸಿ ಸಂಘಿಗಳಿಗೆ ಎಚ್ಚರಿಕೆ ರವಾನಿಸಿದ್ದರು. ಇದೇ ವೇದಿಕೆಯಲ್ಲಿ ಉನಾ ಹೋರಾಟಗಾರ ದಲಿತ ಮುಖಂಡ ಜಿಗ್ನೇಶ್ ಮೇವಾನಿ 'ಹಿಂದೂತ್ವವನ್ನು ಧ್ವಂಸ ಮಾಡುವುದಾಗಿ' ಪ್ರಧಾನಿ ಮೋದಿಗೆ ಬಹಿರಂಗ ಸಂದೇಶ ರವಾನಿಸಿದ್ದರು. ಇದರಿಂದ ಕನಲಿಹೋಗಿರುವ ತುಮಕೂರು ಆರೆಸ್ಸೆಸಿಗರು ಜಿಲ್ಲೆಯಲ್ಲಿ ತಮ್ಮ ಪ್ರಾಬಲ್ಯ ಸಾಬೀತುಪಡಿಸುವಂತೆ ಕ್ಷುಲ್ಲಕ ಕ್ಯಾತೆಗಳನ್ನು ಸೃಷ್ಟಿಸುತ್ತಿದ್ದಾರೆ. ಶಿರಾದ ಅಲ್ಪಸಂಖ್ಯಾತ ಯುವಕನೊಬ್ಬ ಆರೆಸ್ಸೆಸ್ ವಿರುದ್ಧ ಮಾತಾಡಿದ್ದಾನೆ ಎನ್ನುವ ನೆಪ ಇಟ್ಟುಕೊಂಡು, ಇದಕ್ಕೆ ಪ್ರತೀಕಾರವಾಗಿ ಕೋಮುವಾದಿ ಪಥಸಂಚಲನ ನಡೆಸಲು ತಯಾರಿ ನಡೆಸಿದ್ದರು. ಆದರೆ ಇವರ ಪಥ ಸಂಚಲನದ ಕಿರಾತಕತನವನ್ನು ಅರ್ಥ ಮಾಡಿಕೊಂಡ ಎಸ್‌ಪಿ ಈಶಾ ಪಂತ್‌ರು ಕೊನೇ ಘಳಿಗೆಯಲ್ಲಿ ಅದಕ್ಕೆ ತಡೆಯೊಡ್ಡಿದ್ದರು. ಪೊಲೀಸರು ಮತ್ತು ಸಂಘಿಗಳ ನಡುವೆ ಸಾಕಷ್ಟು ಮಾತಿನ ಚಕಮಕಿಯೇ ನಡೆದು ಅವರನ್ನು ಪೊಲೀಸರು ಅರೆಸ್ಟ್ ಮಾಡಿದ್ದೂ ಆಯ್ತು.

ಮಾಜಿ ಸಚಿವ ಸೊಗಡು ಶಿವಣ್ಣ, ಶಾಸಕ ಸುರೇಶ್ ಗೌಡ, ಮಾಜಿ ಸಂಸದ ಜಿ.ಎಸ್.ಬಸವರಾಜುರಂತವರಿದ್ದರೂ ಸೊಪ್ಪುಹಾಕದ ಇಶಾ ಪಂಥ್‌ರ ದಿಟ್ಟತನವನ್ನು ಮೆಚ್ಚಿಕೊಳ್ಳಲೇಬೇಕು. ಅದಾದ ಕೆಲದಿನಗಳ ತರುವಾಯ ನಗರದ ಬೀದಿಬೀದಿಗಳಲ್ಲಿ ಪಥಸಂಚಲನ ಮಾಡಿ ಸಮಾಜದಲ್ಲಿ ಆತಂಕ ಹುಟ್ಟುಹಾಕುವ ಕೆಲಸವನ್ನು ಸಂಘಿಗಳು ಮಾಡುತ್ತಿದ್ದಾರೆ.

ತುಮಕೂರು ಶಾಸಕನ ರೌಡಿಸಮ್

ಸಂಘಪರಿವಾರದ ಹಿನ್ನೆಲೆಯ ಹಾಲಿ ತುಮಕೂರು ಜಿಲ್ಲೆಯ ಶಾಸಕ ಸುರೇಶ್ ಗೌಡ ಎಬಿವಿಪಿ ಕೆಲಸಗಳಿಗೆ ಬೆನ್ನೆಲುಬಾಗಿರುವ ವ್ಯಕ್ತಿ, ಪರಮ ದುರಹಂಕಾರಿ. ಇನ್ನು ಕೆಲವೇ ದಿನಗಳಲ್ಲಿ ತಮ್ಮ ಸರ್ಕಾರ ಅಧಿಕಾರಕ್ಕೆ ಬರಲಿದೆ ಹುಷಾರ್ ಎಂದು ಅಧಿಕಾರಿಗಳಿಗೆ ದಬಾಯಿಸುವಷ್ಟರ ಮಟ್ಟಿಗೆ ಇವನ ಉಪಟಳ ಮಿತಿಮೀರಿದೆ. ಈ ಹಿಂದೆ ಸ್ವತಃ ಬಿಜೆಪಿ ಪಕ್ಷದ ಮಾಜಿ ಶಾಸಕ ಸೊಗಡು ಶಿವಣ್ಣನೇ 'ಸುರೇಶ್ ಅಧಿಕಾರಿಗಳಿಂದ ಹಫ್ತಾ ವಸೂಲಿ ಮಾಡುತ್ತಾನೆ' ಎಂಬ ಗಂಭೀರ ಆರೋಪ ಮಾಡಿದ್ದರು. ಸುರೇಶ್ ಗೌಡನ


ಶಾಸಕ ಸುರೇಶ್ ಗೌಡ ಟೋಲ್ ಅಧಿಕಾರಿ ಮೇಲೆ ಹಲ್ಲೆ ಮಾಡುತ್ತಿರುವುದು

ವರ್ತನೆಯನ್ನು ಪುಷ್ಠೀಕರಿಸುವಂತೆ ಇತ್ತೀಚಿಗೆ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಆತ ತನಗೆ ವಿಐಪಿ ಗೇಟ್‌ನಲ್ಲಿ ಬಿಡಲಿಲ್ಲವೆಂದು ಬೆಂಬಲಿಗರೊಂದಿಗೆ ಟೋಲ್ ಆಫೀಸಿಗೆ ನುಗ್ಗಿ ಮ್ಯಾನೇಜರ್ ಮಲ್ಲಿಕಾರ್ಜುನ್ ಮೇಲೆ ಹಲ್ಲೆ ನಡೆಸಿದ್ದ. ಈ ಗೂಂಡಾಗಿರಿ ಸಿ.ಸಿ.ಟಿ.ವಿ ಕ್ಯಾಮರದಲ್ಲಿ ಸೆರೆಯಾಗಿ, ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ದಾರಾಶೀಕೋ ನಾಟಕಕ್ಕೆ ವಿರೋಧ

ಕೆಲವು ದಿನಗಳ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾಲೇಜು ರಂಗೋತ್ಸವ ಎಂಬ ಯೋಜನೆ ಜಾರಿಗೆ ತಂದಿದೆ. ಇದರ ಅಡಿಯಲ್ಲಿ ಸಾಕಷ್ಟು ಕಾಲೇಜುಗಳ ವಿದ್ಯಾರ್ಥಿಗಳು ರಂಗಭೂಮಿಗೆ ಪಾದಾರ್ಪಣೆ ಮಾಡಲು ಸಾಧ್ಯವಾಗುತ್ತಿದೆ. ಇದೇ ಯೋಜನೆಯಡಿ ನಗರದ ಸಿದ್ಧಾರ್ಥ ಪದವಿ ಕಾಲೇಜಿನ ವಿದ್ಯಾರ್ಥಿಗಳು ಚಿಂತಕ ರಾಜಪ್ಪ ದಳವಾಯಿಯವರು ಬರೆದಿರುವ 'ದಾರಾಶಿಕೋ' ಎಂಬ ನಾಟಕವನ್ನು ಕಾಲೇಜು ರಂಗೋತ್ಸವದಲ್ಲಿ ಪ್ರದರ್ಶಿಸಲು ನೀನಾಸಂ ಚೇತನ್ ನಿರ್ದೇಶನದಲ್ಲಿ ಮಾಡಿಕೊಂಡಿದ್ದರು. ಆದರೆ ಸಂಘ ಪರಿವಾರದವರು ಪ್ರಾಂಶುಪಾಲರಿಗೆ ಕರೆ ಮಾಡಿ 'ಈ ನಾಟಕ ಮಾಡಿಸಿದರೆ ನಿಮ್ಮ ಕಾಲೇಜಿಗೆ ಬಂದು ಗಲಾಟೆ ಮಾಡುತ್ತೇವೆ' ಎಂದು ಧಮಕಿ ಹಾಕಿದ್ದರು. ಇದು ಮುಸ್ಲಿಮ್ ಪರ ಇರುವ ನಾಟಕ ಎನ್ನುವುದು ಅವರ ಆರೋಪವಾಗಿತ್ತು, ಇದರಿಂದ ಭಯಭೀತಗೊಂಡ ಪ್ರಾಂಶುಪಾಲರು ಈ ನಾಟಕವನ್ನು ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಲಾಗುವುದಿಲ್ಲ ಎಂದು ಘೋಷಿಸಿದರು. ಇದರಿಂದ ನಾಟಕ ಪ್ರಾಕ್ಟೀಸ್ ಮಾಡಿದ್ದ ವಿದ್ಯಾರ್ಥಿಗಳು ತುಂಬಾ ನೊಂದುಕೊಂಡಿದ್ದರು. ತಾವು ಜೊತೆಗಿರುತ್ತೇವೆ ಅಂತ ಸಾಕಷ್ಟು ಪ್ರಗತಿಪರರು ಬೆಂಬಲ ನೀಡಿದರೂ ಪ್ರಾಂಶುಪಾಲ ಮತ್ತು ಆಡಳಿತ ಮಂಡಳಿ ಹೆದರಿಕೊಂಡು ನಾಟಕವನ್ನೇ ರದ್ದು ಮಾಡಿದೆ.

ಇತ್ತ ಈ ಎಬಿವಿಪಿ ಪುಂಡರು ಧರ್ಮದ ಅಮಲೇರಿಸಿ ಕೊಂಡು ಮೊನ್ನೆ ಎನ್.ಜಿ.ಒ ಸಂಘಟನೆಯೊಂದರ ಆಫೀಸಿಗೆ ನುಗ್ಗಿ ದಾಂಧಲೆ ನಡೆಸಿದ್ದಾರೆ. ತಮ್ಮ ಕಚೇರಿಯ ಹತ್ತಿರ ಈ ಎನ್‌ಜಿಒದವರು ಕರಪತ್ರ ಹಂಚಿದ್ದಾರೆ ಅನ್ನುವುದಷ್ಟೇ ದಾಂಧಲೆ ನಡೆಸಿದವರ ಆರೋಪ. ಗಲಾಟೆಯ ವೇಳೆ ಆಫೀಸಿನಲ್ಲಿದ್ದ ಹೆಣ್ಣು ಮಕ್ಕಳಿಗೆ "ನೀವೆಲ್ಲಾ ಜೀನ್ಸ್ ಪ್ಯಾಂಟ್ ಹಾಕುತ್ತೀರಿ. ನಿಮಗೆ ಸಂಸ್ಕೃತಿ ಇಲ್ಲಾ" ಎಂದು ಅವಾಚ್ಯವಾಗಿ ನಿಂದಿಸಿದ್ದಾರೆ. ಈ ವಿಚಾರ ಪೊಲೀಸ್ ಸ್ಟೇಷನ್ ಮೆಟ್ಟಿಲೇರಿ ಅಲ್ಲಿ ಎಬಿವಿಪಿ ಕಾರ್ಯಕರ್ತರಿಗೆ ಪೊಲೀಸರು ಛೀಮಾರಿ ಹಾಕಿ, ಕ್ಷಮಾಪಣೆ ಕೇಳಿಸಿ ಬಿಟ್ಟುಕಳಿಸಿದ್ದರು.

ತುಮಕೂರು ಜಿಲ್ಲೆಯಲ್ಲಿ ಇಷ್ಟೆಲ್ಲಾ ನಡೆಯುತ್ತಿದ್ದರೂ ಕಾಂಗ್ರೆಸ್‌ನ ಶಾಸಕರು, ಮಂತ್ರಿಗಳು ತಮ್ಮ ಗಡದ್ದು ನಿದ್ದೆಗೆ ಭಂಗ ತಂದುಕೊಂಡಿಲ್ಲ, ಈಗ ತುರ್ತಾಗಿ ಪ್ರಗತಿಪರರೇ ಒಂದುಗೂಡಿ ಇವರಿಗೆ ಪಾಠ ಕಲಿಸಬೇಕಿದೆ. ಇಲ್ಲವಾದರೆ ತುಮಕೂರು ಮತ್ತೊಂದು ಕರಾವಳಿ ಕೇಸರಿ ತೀರವಾಗುವ ಸಂಭವವಿದೆ. ■


ಆರ್.ಎಸ್.ಎಸ್ ನ ಕೌಮುದಿ ಪಥಸಂಚಲನದ ವೇಳೆ ಪೊಲೀಸರೊಂದಿಗೆ ಮಾತಿನ ಚಕಮಕಿ


ಪೊಲೀಸರೊಂದಿಗೆ ಮಾತುಕತೆ ನಡೆಸುತ್ತಿರುವ ಮಾಜಿ ಸಂಸದ ಬಸವರಾಜು,ಮಾಜಿ ಶಾಸಕ ಸೊಗಡು ಶಿವಣ್ಣ

'ಅವತಾರ ಪುರುಷ' ಮೋದಿ ಮೇನಿಯಾ ಮತ್ತು ಕುರಿ ಮಂದೆ!!

ಭಾರತ ಈಗ ಭಂಡಾಟದ ಉತ್ತುಂಗದಲ್ಲಿದೆ; ಸುಳ್ಳಿನ ಸಾಮ್ರಾಜ್ಯದ ಆಳ್ವಿಕೆ ನಿರುಕುಶವಾಗಿ ನಡೆದಿದೆ! ದೇಶದ ಯೋಚನಾ ಶಕ್ತಿ ಸರಿ-ತಪ್ಪುಗಳ ಗ್ರಹಿಸುವ ಬುದ್ಧಿಮತ್ತೆಗೆ ಮಂಕು ಕವಿದಿದೆ. ತುಸ-ತುಸ ಬೋಂಗು ಬಿದುತ್ತ ಜನರನ್ನು ದಿಕ್ಕು ತಪ್ಪಿಸುವ ತಂತ್ರಗಾರಿಕೆಯ ಸಂಘ ಪರಿವಾರವನ್ನೇ ಬೆಚ್ಚಿಬೀಳಿಸುವಷ್ಟು ಆರ್ಭಟದಲ್ಲಿ ಮೋದಿ ಮೇನಿಯಾದ ಬೊಬ್ಬೆ ಮೊಳಗುತ್ತಿದೆ! ಭಾರತವೆಂದರೆ ಏನೇನೂ ಪ್ರಗತಿ ಕಾಣುವ ನಿಕೃಷ್ಟ-ನತದೃಷ್ಟ ದೇಶವೆಂತಲೂ, ಸ್ವಾತಂತ್ರ್ಯಾನಂತರ ಆಡಳಿತ ನಡೆಸಿದವರು ದೇಶ ದಿವಾಳಿ ಮಾಡಿದ್ದಾರೆಂತಲೂ, ಇಂಥ ಅಧೋಗತಿಯ ದೇಶವನ್ನು ಉದ್ಧರಿಸಲೆಂದೇ ಮೋದಿ ಅವತಾರ ಎತ್ತಿದ್ದಾನೆಂದೂ ಬಿಂಬಿಸಲಾಗುತ್ತಿದೆ. ಧರ್ಮ-ದೇವರು ಹೆಸರಲ್ಲಿ ವಿದ್ವೇಷ-ಅಪನಂಬಿಕೆ-ದೊಂಬಿ ಹುಟ್ಟುಹಾಕಿ ಬೇಳೆ ಬೇಯಿಸಿಕೊಳ್ಳುತ್ತ ಬಂದ ಸಂಘಿಗಳು ಪ್ರಯೋಗಿಸಿದ ಮೋದಿ ಎಂಬ ಎರಡಲಗಿನ ಬಾಣವೇ ಈಗ ತಿರುಗುಬಾಣವಾಗಿ ಬಿಟ್ಟಿದೆ!

ಹಾರಾಟದ ಹುಂಬ ಮೋದಿಯನ್ನು ಅಸ್ತ್ರದಂತೆ ಬಳಸುತ್ತಿದ್ದವರೇ ಈಗಾತನ ಭಸ್ಮಾಸುರ ಕಾರ್ಯಾಚರಣೆಗೆ ಕಂಗೆಟ್ಟು ಕುಂತಿದ್ದಾರೆ. ಯಾವ ಆ್ಯಂಗಲ್‌ನಿಂದ ಕಂಡರೂ ಮೋದಿ ಇಡೀ ಸಂಘ ಪರಿವಾರ ಮತ್ತು ಬಿಜೆಪಿಯನ್ನು ಒಂದೇ ಏಟಿಗೆ ಆಪೋಶನ ಪಡೆದಿರುವುದು ಖಾತ್ರಿಯಾಗುತ್ತದೆ. ವ್ಯಕ್ತಿ ಪ್ರತಿಷ್ಠೆಯ ರಾಜಕಾರಣದ ಪರಾಕಾಷ್ಠೆ ತಲುಪಿರುವ ಮೋದಿ ಮುಖ ಇಂದಿರಾ ಗಾಂಧಿಯ ಕನ್ನಡಿಯಲ್ಲಿ ಕಳಾಯಿಸತೊಡಗಿದೆ. ಅಘೋಷಿತ ತುರ್ತು ಪರಿಸ್ಥಿತಿ ದೇಶದಲ್ಲಿ ನೆಲೆ ನಿಂತಿದೆ. ಮೋದಿ ಇಂಡಿಯಾಕ್ಕೆ ಅನಿವಾರ್ಯ ನಾಯಕಾಗ್ರೇಸ ಎಂದು ವ್ಯವಸ್ಥಿತವಾಗಿ ಬಿಂಬಿಸಲಾಗುತ್ತಿದೆ. ಈ ದೇಶ ಇಥಿಯೋಪಿಯಾ, ಸೋಮಾಲಿಯಾಕ್ಕಿಂತಲೂ ಕಡೆಯಾಗಿದೆ; ಅದನ್ನು ಕಾಪಾಡಲು ಮೋದಿ ಒಬ್ಬನಿಂದಷ್ಟೇ ಸಾಧ್ಯವೆಂಬಂಥ ಭ್ರಮೆ ಬಲಿಷ್ಠವಾಗಿದೆ.

ಕಳೆದ 70 ವರ್ಷದಲ್ಲಿ ಭಾರತ ಏನೇನೂ ಅಭಿವೃದ್ಧಿಯೇ ಕಂಡಿಲ್ಲ; ಮೋದಿಗಿಂತ ಮೊದಲು ದೇಶ ಆಳಿದವರು ಪ್ರಗತಿಯ ಪ್ರಯತ್ನ ಮಾಡದೆ ಕೊಳ್ಳೆ ಹೊಡೆದರೆಂಬ ಭಾವನಾತ್ಮಕ ದಾಳಿ ಮಾಡಲಾಗುತ್ತಿದೆ. ದುರಂತವೆಂದರೆ, ಯುವ ಜನಾಂಗ ಈ ಕಲಾತ್ಮಕ ಸುಳ್ಳನ್ನು ನಂಬಿಕೊಂಡಿದೆ. ನಿರ್ಣಾಯಕ ನಿರ್ಧಾರ ತಳೆಯುವ ಪ್ರೌಢಿಮೆ ಇರದ 18ರ ಹರೆಯದವರಿಗೆ ಮತ ಚಲಾವಣೆಯ ಹಕ್ಕು ಕೊಟ್ಟ ಮೊದ್ಮಣಿ ರಾಜೀವ್ ಗಾಂಧಿಯ ಪೊಕ್ಕು ನೀತಿಯ ಫಲಾನುಭವಿಯಾಗಿದ್ದಾರೆ ಮೋದಿ. ಬಾಯಿಬಡುಕ ಮೋದಿ ಮಾಮನ ಮಂಕುಬೂದಿ ರಾಜಕಾರಣ ಶುರುವಾಗುವುದಕ್ಕೆ ಎಷ್ಟೋ ಮೊದಲೇ ಭಾರತ ಪ್ರಗತಿಯ ಪಥದಲ್ಲಿ ದಾಪುಗಾಲು ಹಾಕಹತ್ತಿತ್ತು ಎಂಬ ವಾಸ್ತವ ಚಾಲಾಕಿತನದಿಂದ ಮರೆಮಾಚಲಾಗುತ್ತಿದೆ.

ಇವತ್ತು ಭಾರತ ಜಾಗತಿಕ ಪ್ರಾಮುಖ್ಯತೆಯ ರಾಷ್ಟ್ರವಾಗಿರುವುದು ಮೋದಿಗೂ ಮೊದಲು ದೇಶ ಕಟ್ಟಿದವರ ಕಾಣಿಕೆ. ಏಷಿಯಾ ಖಂಡದ ಎರಡನೇ ಬಲಾಢ್ಯ ದೇಶವಾಗಿದೆ ಭಾರತ. ಇದರಲ್ಲಿ ಮೋದಿ ಮಹಿಮೆ ಏನೇನೂ ಇಲ್ಲ, ಆತ ರಾಜಕೀಯ ಪಡಸಾಲೆಯಲ್ಲಿ ಕಣ್ಣು ಪಿಳುಕಿಸುವುದಕ್ಕೂ ಮೊದಲೇ ಆದ ಸಾಧನೆಯಿದು. ಆದರೂ ತಾನೊಬ್ಬ ಅಭಿವೃದ್ಧಿಯ ಹರಿಕಾರನಂತೆ ಪೋಜು ಕೊಡುತ್ತಿರುವ ಮೋದಿ ಮತ್ತು ಆತನ ಭಜನೆ ಮಾಡುತ್ತಿರುವ ಗುಲಾಮಿ ಸಂತತಿಯ ಟೊಳ್ಳುತನ ತೋರಿಸುವ ಹಿಂದಿ ಭಾಷೆಯ



ಬರಹವೊಂದು ವಾಟ್ಸ್‌ಪ್‌ನಲ್ಲಿ ದೇಶಾದ್ಯಂತ ಹರಿದಾಡುತ್ತಿದೆ. ಅದು ಕನ್ನಡಿಗ ಡಾ. ಜೆ.ಎಸ್. ಪಾಟೇಲ್ ಎಂಬುವರಿಗೂ ತಲುಪಿತ್ತು, ಅದನ್ನವರು ಅಕ್ಷರಶಃ ಕನ್ನಡೀಕರಿಸಿದ್ದಾರೆ. ಆ ಸಂದೇಶ ತಿರುಗಾಡುತ್ತ ಈ ವರದಿಗಾರನ ಮೊಬೈಲ್‌ಗೂ ಬಂದು ತಲುಪಿದೆ.

ಅದರ ಪೂರ್ಣ ಪಾಠ ಇಲ್ಲಿ ಅಚ್ಚಿಸಲಾಗಿದೆ. ಢೋಂಗಿ ಮೋದಿಯನ್ನು ಹೊತ್ತು ಕುಣಿಯುತ್ತಿರುವ ಪೆದ್ದುಗಳ-ಪಡ್ಡೆಗಳ ಕಣ್ಣು ಈ ಬರಹ ತೆರೆಸೀತು; ಈ ದೇಶ ಹಿಂದೂತ್ವದ ದಾಸ್ಯದ ಸಂಕೋಲೆ ಕಳಚಿಕೊಳ್ಳಲು ಒಂಚೂರು ನೆರವಾದೀತೆಂಬ ಆಶಯ 'ಪತ್ರಿಕೆ'ಯದು.

ವಾಟ್ಸ್‌ಪ್ ಸಂದೇಶ

ನಾನೊಬ್ಬ ಕಾಂಗ್ರೆಸಿಗನು ಅಲ್ಲ; ಮೋದಿ ಭಕ್ತನೂ ಅಲ್ಲ, ನಾನೊಬ್ಬ ಅಪ್ಪಟ ಭಾರತೀಯ.

ಕಳೆದ ಅರವತ್ತು ವರ್ಷಗಳಲ್ಲಿ ಭಾರತವು ಅಭೂತಪೂರ್ವವಾದದ್ದನ್ನು ಸಾಧಿಸಿದೆ. ಅದರಲ್ಲಿ ನಮ್ಮ ಎಲ್ಲ ಮಾಜಿ ಪ್ರಧಾನಿಗಳ ಕೊಡುಗೆ ಇದೆ. ಹಾಗೆಯೇ ಭಾರತವು ಇಂದು ಏಷಿಯಾ ಖಂಡದ ಎರಡನೇ ಅತ್ಯಂತ ಬಲಿಷ್ಠ ರಾಷ್ಟ್ರವಾಗಿ ಬೆಳೆದು ನಿಂತಿದೆ.

* ಮೋದಿ ಇನ್ನೂ ಹುಟ್ಟಿರಲಿಲ್ಲ, ಅಷ್ಟರಲ್ಲಿ ಭಾರತವು ಪಾಕಿಸ್ತಾನದೊಡನೆ ಒಂದು ಯುದ್ಧ ಗೆದ್ದುಕೊಂಡಿತ್ತು,
* ಮೋದಿ ಇನ್ನೂ ಮಾತಾಡುವುದು ಕಲಿತಿರಲಿಲ್ಲ, ಭಾರತ ದೇಶ ಜಗತ್ತಿನ ಸರ್ವಶ್ರೇಷ್ಠ ಸಂವಿಧಾನವೊಂದನ್ನು ರಚಿಸಿ ಅನುಷ್ಠಾನಗೊಳಿಸಿತ್ತು,
* ಮೋದಿ ತನ್ನ ಕಾಲಿಂದ ಪುಟ್ಟ ಹೆಜ್ಜೆ ಇಡುವಷ್ಟರಲ್ಲಿಯೇ ಭಾರತ ಏಷಿಯಾ ಕ್ರೀಡಾಕೂಟಗಳಲ್ಲಿ ತನ್ನ ಛಾಪು ಮೂಡಿಸಲಾರಂಭಿಸಿತ್ತು,
* ಮೋದಿ ಗಿಲ್ಲಿ-ದಾಂಡು ಆಡಲು ಆರಂಭಿಸುವ ಮುನ್ನವೇ ಭಾರತದಲ್ಲಿ ಬಾಕ್ರಾನಂಗಲ್ ಮತ್ತು ರಿಹಿಂದ ಅಣೆಕಟ್ಟುಗಳು ನಿರ್ಮಿಸಲ್ಪಟ್ಟಿದ್ದವು.
* ಮೋದಿ ಶಾಲೆಯಲ್ಲಿ ಪುಸ್ತಕದ ಪುಟ ತಿರುವುವಷ್ಟರಲ್ಲಿ ಭಾರತವು ಬಾಬಾ ಪರಮಾಣು ಸಂಶೋಧನಾ ಕೇಂದ್ರ ಆರಂಭಿಸಿತ್ತು,
* ಮೋದಿ ತನ್ನ ಮನೆಯಲ್ಲಿ ಲಾಟೀನು ಹಚ್ಚುವುದು ಕಲಿಯುವಷ್ಟರಲ್ಲೇ ದೇಶ ತಾರಾಪುರ ಪರಮಾಣು ವಿದ್ಯುಚ್ಛಕ್ತಿ ಕೇಂದ್ರವನ್ನು ಆರಂಭಿಸಿತ್ತು,
* ಮೋದಿಗೆ ಇನ್ನೂ ಬಟ್ಟೆ ಉಡಲು ಬರುತ್ತಿರಲಿಲ್ಲ ಆಗಲೇ, ದೇಶದಲ್ಲಿ ಸಾಕಷ್ಟು ಉನ್ನತ ಶಿಕ್ಷಣ ಸಂಸ್ಥೆಗಳು IIT, AIMS, IISc ಮತ್ತು ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳೂ ಆರಂಭವಾಗಿದ್ದವು.
* ಮೋದಿ ಇನ್ನೂ ತನ್ನ ಮೂಗು ಒರೆಸಿಕೊಳ್ಳುವುದು ಕಲಿತಿರಲಿಲ್ಲ, ನೆಹರೂಜೀ ಆಗಲೇ ನವರತ್ನ ಕಂಪನಿಗಳನ್ನು ಸ್ಥಾಪಿಸಿದ್ದರು.
* ಮೋದಿ ಶಾಲೆಯಲ್ಲಿ ಇತಿಹಾಸ ಪಾಠ ಓದುವಾಗಲೇ ನೆಹರೂಜೀ ಪೋರ್ಚುಗೀಸರಿಂದ ಗೋವಾ ವಿಮೋಚನೆಗೊಳಿಸಿದ್ದರು.
* ಮೋದಿಗೆ ತುಪ್ಪಳ ಮೀಸೆ ಮೂಡುವ ಮೊದಲೇ ನೆಹರೂಜೀ ISRO ಸ್ಥಾಪನೆ ಮಾಡಿ ಮುಗಿಸಿದ್ದರು.
* ಮೋದಿಗೆ ಸರಿಯಾಗಿ ಗಡ್ಡ ಮೀಸೆ ಬರುವ ಮುಂಚೆ ಭಾರತದಲ್ಲಿ ಸಂಪೂರ್ಣ ಶ್ವೇತಕ್ರಾಂತಿ ಆರಂಭವಾಗಿತ್ತು,
* ಮೋದಿ ಚೆಡ್ಡಿ ಹಾಕಲು ಆರಂಭಿಸುವ ಮೊದಲೇ ದೇಶದಲ್ಲಿ ಔದ್ಯೋಗಿಕ ಶಕೆ ಆರಂಭವಾಗಿತ್ತು,
* ಮೋದಿ ಸಂಘದ ಶಾಖೆಯಲ್ಲಿ ಕಸಗುಡಿಸಲು ಆರಂಭಿಸುವ ಮುನ್ನ ಇಂದಿರಾಜೀ ಪಾಕಿಸ್ತಾನವನ್ನು ಇಬ್ಭಾಗ ಮಾಡಿದ್ದರು. ಪಾಕಿಸ್ತಾನದ ಒಂದು ಲಕ್ಷ ಸೈನಿಕರು ಮತ್ತು ಕಮಾಂಡರ್‌ಗಳು ಭಾರತಕ್ಕೆ ಶರಣಾಗಿದ್ದರು.
* ಮೋದಿ ಅರ್ಥಶಾಸ್ತ್ರದ ಓನಾಮ ತಿಳಿಯಲಾರಂಭಿಸುವ ಮುಂಚೆಯೇ (ತಿಳಿದುಕೊಂಡರೋ ಅನುಮಾನ) ಬ್ಯಾಂಕುಗಳ ರಾಷ್ಟ್ರೀಕರಣ ಕಾರ್ಯ ಮುಗಿದುಹೋಗಿತ್ತು,
* ಮೋದಿ ಕಾನೂನಾತ್ಮಕವಾಗಿ ವಯಸ್ಕನಾಗುವ ಮುಂಚೆ ಇಂದಿರಾ ಸಿಕ್ಕಿಂ ಅನ್ನು ಭಾರತದೊಂದಿಗ ವಿಲೀನಗೊಳಿಸಿದ್ದರು.
* ಮೋದಿ ತನ್ನ ಹೆಂಡತಿಯನ್ನು ಬಿಟ್ಟು ಓಡಿಹೋಗುವ ಮುಂಚೆ ಇಂದಿರಾಜೀ ದೇಶದ ಪ್ರಥಮ ಪರಮಾಣು ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದ್ದರು.
* ಮೋದಿ ತನ್ನ ಹೆತ್ತ ತಾಯಿಯನ್ನು ಹೇಳದೆ ಮನೆಬಿಟ್ಟು ಓಡಿಹೋಗುವಷ್ಟರಲ್ಲಿ ಭಾರತವು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾಯತ್ತ ಸಾಧಿಸಿತ್ತು,
* ಮೋದಿ ಸೈಕಲ್ ತುಳಿಯುವುದು ಕಲಿಯುವಷ್ಟರ ಭಾರತ ವಿಮಾನ, ಹೆಲಿಕಾಪ್ಟರ್‌ಗಳ ಉತ್ಪಾದನ ಆರಂಭಿಸಿತ್ತು,
* ಮೋದಿಗೆ ಇನ್ನೂ ಚೆನ್ನಾಗಿ ಭಾಷಣ ಮಾಡಲು ಬರು ಮುಂಚೆ ರಾಜೀವ್ ಗಾಂಧಿ ದಿನಕ್ಕೊಂದು ಟಿ ಟವರ್‌ಗಳ ಉದ್ಘಾಟನೆ ಮಾಡಿ ಮನೆಮನೆಗಳ ಟಿವಿ ಪ್ರತಿಷ್ಠಾಪಿಸಿದ್ದರು.
* ಮೋದಿ ಸಂಘದ ಶಾಖೆಗಳಲ್ಲಿ ಲಾಠಿ ತಿರುಗಿಸು ಮುಂಚೆ ಭಾರತದಲ್ಲಿ ಸೂಪರ್ ಕಂಪ್ಯೂಟರ್, ಟಿ ಮತ್ತು ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿ ಆಗಿಹೋಗಿತ್ತು.
* ಮೋದಿ ಗುಜರಾತಿನಲ್ಲಿ ವಘೇಲಾ ಮತ್ತು ಕೇಶುಭಾಯಿ ನಡುವೆ ಷಡ್ಯಂತ್ರ ಹೆಣೆಯುವಷ್ಟರಲ್ಲಿ ಮನಮೋಹನ ಸಿಂಗ್ ಅವರು ದೇಶದಲ್ಲಿ ಆರ್ಥಿಕ ಉದಾರೀಕರಣ ಆರಂಭಿಸಿದ್ದರು.
* ಮೋದಿ ನಮ್ಮ ಒಬ್ಬ ಸೈನಿಕನ ತಲೆಗೆ ಬದಲಾ ಪಾಕಿಸ್ತಾನದ ಹತ್ತು ತಲೆ ತರಬೇಕು ಅನ್ನುತ್ತಲೇ ನವಾಜ ಷರೀಫ್‌ರ ಹುಟ್ಟುಹಬ್ಬ ಆಚರಿಸಿದ ಬಹುವರ್ಷಗ ಮೊದಲೇ ಭಾರತ ಸೈನಿಕರು ಪಾಕಿಸ್ತಾನದ ಲಾಹೋರ್‌ತನಕ ನುಗ್ಗಿ ಪಾಕಿಗಳನ್ನು ಸದೆಬಡಿದು ಲಾಹೋರನ್ನು ವಶಪಡಿಸಿಕೊಂಡಿದ್ದರು.
* ಮೋದಿ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸು ಮೊದಲೆ ದೇಶ ಗರಿಷ್ಠ ವಿದೇಶಿ ಮುದ್ರಾ ಕೋಶವು ಜಗತ್ತಿನ ಹತ್ತು ರಾಷ್ಟ್ರಗಳಲ್ಲಿ ಸ್ಥಾನ ಪಡೆದಿತ್ತು.
* ಇದರ ಹೊರತಾಗಿಯೂ ಚಂದ್ರಯಾನ, ಮಂಗಳಯಾ ಮೋನೋ, ಮೆಟ್ರೋ ರೈಲು, GSLV, ಸುಧಾರಿ ಯುದ್ಧ ನೌಕೆಗಳು, ಶಸ್ತ್ರಾಸ್ತ್ರಗಳು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು, ಮಿಸೈಲ್‌ಗಳು ಇನ್ನೂ ಅನೇ ರಂಗದಲ್ಲಿ ಪ್ರಗತಿ ಸಾಧಿಸಿತ್ತು.

ಇದೆಲ್ಲ ಮೋದಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸು ಮೊದಲೇ ದೇಶ ಸಾಧಿಸಿದ ಮೈಲಿಗಲ್ಲುಗಳು.

ನನ್ನ ಸ್ನೇಹಿತರೇ ಈಗಲಾದರೂ ಕಣ್ಣು ತೆರೆಯಿ ಸ್ವತಂತ್ರವಾಗಿ ಚಿಂತಿಸುವ ಪ್ರವೃತ್ತಿ ಬೆಳೆಸಿಕೊಳ್ಳಿರಿ ಮತ ಯಾವುದೇ ರಾಜಕೀಯ ನಾಯಕರನ್ನು ನಿಮ್ಮ ದೇವ ಅಂತ ಭಾವಿಸುವ ಗುಲಾಮಗಿರಿ ಮನಸ್ಥಿತಿಯಿ ಹೊರಬನ್ನಿರಿ...!

ಜೈ ಹಿಂದ್...!! ಜೈ ಭಾರತ....!!

■ ನಹು


ಹೋರಾಟದ ಚಿತ್ರಗಳು





ರಾಯಚೂರು: ನೀರಿಗಾಗಿ ರೈತರ ಗುಡುಗು

ಅಸಲಿಗೆ ಈ ಯೋಜನೆ ಜಾರಿಯಾಗದಿರಲು ಅಂತಹ ದೊಡ್ಡ ತಾಂತ್ರಿಕ ಕಾರಣಗಳೇನು ಇಲ್ಲ, ಬದಲಿಗೆ ಜನಪ್ರತಿನಿಧಿಗಳ ಹೊಣೆಗೇಡಿತನವೇ ಕಾರಣ. ಕಳೆದ ಒಂಭತ್ತು ವರ್ಷಗಳಿಂದ ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ರೈತರು ಶಾಂತಿಯುತ ಹೋರಾಟ ನಡೆಸುತ್ತಾ ಬಂದರೂ ಜಿಲ್ಲೆಯ ಆಯಾ ಕ್ಷೇತ್ರಗಳ ಶಾಸಕರು ಸದನದಲ್ಲಿ ರೈತರ ಹಕ್ಕೊತ್ತಾಯದ ಬಗ್ಗೆ ಸಮರ್ಪಕವಾಗಿ ಪ್ರಸ್ತಾಪಿಸಿಲ್ಲ, ಸರಕಾರದ ಮೇಲೆ ಒತ್ತಡ ತರುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಶಾಸಕರಾದಿಯಾಗಿ, ನಾನಾ ಇಲಾಖೆಯ ಅಧಿಕಾರಿಗಳು ಕುಂಭಕರ್ಣ ನಿದ್ರೆಗೆ ಜಾರಿರುವುದೇ ಯೋಜನೆ ಹಿಂದೆ ಬೀಳಲು ಕಾರಣ.



ಎಂ.ಬಿ. ಪಾಟೀಲ್

ಕಣ್ಮುಂದೆಯೇ ಬೆಳೆಗಳು ಒಣಗಿನಿಂತಿವೆ. ಕೈಗೆ ...ಸವಿಲ್ಲ. ಸಂಗ್ರಹಿಸಿಟ್ಟ ಕಾಳು-ಕಡ್ಡಿಯ ದಾಸ್ತಾನೂ ...ಗಿಹೋಗಿದೆ. ರೈತರಿಗೆ ಇಂತಹ ಪರಿಸ್ಥಿತಿ ಕಳೆದ ನಾಲ್ಕಾರು ...ರ್ಷಗಳಿಂದ ಮರುಕಳಿಸುತ್ತಲೇ ಇದೆ. ಭೂತಾಯಿ ನಂಬಿ ...ರತೆಯಿಂದ ಬದುಕುತ್ತಿದ್ದ ರೈತಾಪಿ ಜನ ಹೊಟ್ಟೆಪಾಡಿಗೆ ...ಗಳೂರು, ಮಂಗಳೂರು, ಪೂನಾದಂತಹ ನಗರಗಳಿಗೆ ...ಳೆ ಹೋಗುತ್ತಿದ್ದಾರೆ. ಹೈಕ ಭಾಗದ ಲಿಂಗಸುಗೂರು, ...ನ್ವಿ, ಮಸ್ಕಿ, ಸಿಂಧನೂರು, ದೇವದುರ್ಗ ಸೇರಿದಂತೆ ...ಯಚೂರಿನ ಮಳೆಯಾಶ್ರಿತ ಪ್ರದೇಶದ ಜನ ಬೇರೆ ...ರಿ ತೋಚದೆ ದಿಕ್ಕೆಟ್ಟು ಕೂತಿದ್ದಾರೆ. ರೈತರ ಮಕ್ಕಳು ...ಣದಿಂದ ವಂಚಿತರಾಗುತ್ತಿದ್ದಾರೆ. ದನಕರುಗಳು ಮಾರುಕಟ್ಟೆ ...ಪಾಗುತ್ತಿವೆ. ಹೀಗೆ ಈ ಭಾಗದ ಅನ್ನದಾತರು ನಿತ್ಯ ...ತನೆ ಅನುಭವಿಸುತ್ತಿದ್ದರೂ ಸರಕಾರಗಳು ಕಣ್ಮುಚ್ಚಿ ...ತಿರೋದು ಪ್ರಜಾಸತ್ತೆಯ ದುರಂತವಲ್ಲದೆ ಮತ್ತೇನು. ...ದ ಏಳೆಂಟು ವರ್ಷಗಳಿಂದ ಎನ್‌ಆರ್‌ಬಿಸಿ 5ಎ ಕಾಲುವೆ ...ರ್ಮಾಣಕ್ಕೆ ಒತ್ತಾಯಿಸಿ ಹೋರಾಟ ನಡೆಸುತ್ತಾ ಬಂದರೂ ...ಪ್ರತಿನಿಧಿಗಳಿಗೆ ಕಿಂಚಿತ್ತು ಕಾಳಜಿಯೂ ಇದ್ದಂತಿಲ್ಲ. ...ದುಕಡೆ ರೈತನನ್ನು ದೇಶದ ಬೆನ್ನೆಲುಬು ಅಂತ ಓಲೈಸಿ ...ತ ಕೇಳುವ ಸಮಯಸಾಧಕರು ಸರ್ಕಾರದ ಅಧಿಕಾರಕ್ಕೆ ...ಟಿಕೊಂಡ ನಂತರ ರೈತರನ್ನು ಸಂಪೂರ್ಣ ...ರಿತುಬಿಡುತ್ತಿದ್ದಾರೆ.

"ಇದು ರಾಯಚೂರು ಜಿಲ್ಲೆಯ ರೈತರ ತೀರದ ಬವಣೆ. ...ಕಾಗಿ ಅವರು ಸರ್ಕಾರದಿಂದ ಸಾವಿರಾರು ಕೋಟಿ ...ದಾನ, ಪರಿಹಾರವನ್ನೇನೂ ಕೇಳುತ್ತಿಲ್ಲ, ಬದಲಿಗೆ ನಾವು ...ಭಿಮಾನದಿಂದ ದುಡಿದು ಬೆಳೆದು ಬದುಕಲು ...ರಾಯಣಪುರ ಬಲದಂಡೆ ಕಾಲುವೆ 5ಎ ನಿರ್ಮಿಸಿಕೊಡಿ ...ದು ಕಳೆದ ನಾಲ್ಕು ದಶಕಗಳಿಂದಲೂ ಒತ್ತಾಯಿಸುತ್ತಾ ...ದಿದ್ದಾರೆ. ಆದರೆ ಇದಕ್ಕೆ ಮುಖ್ಯಮಂತ್ರಿಯಾದಿಯಾಗಿ ...ರು ಯಾವ ಜನಪ್ರತಿನಿಧಿಗಳು ಕೂಡ ಸೂಕ್ತವಾಗಿ ...ಸಿಲ್ಲ, ಬರೀ ಭರವಸೆಗಳಲ್ಲೆ ಮಾತು ಮುಗಿಸುತ್ತಿದ್ದಾರೆ. ...ರಿಂದ ಸಿಟ್ಟಿಗೆದ್ದಿರುವ ರೈತರು ಮುಂಬರುವ ...ಚುನಾವಣೆಗಳನ್ನು ಬಹಿಷ್ಕರಿಸುವ ಎಚ್ಚರಿಕೆ ನೀಡಿದ್ದಾರೆ.

ಎನ್‌ಆರ್‌ಬಿಸಿ 5ಎ ನಾಲೆ

...ರಾಯಚೂರು ಜಿಲ್ಲೆಯ ಉತ್ತರಕ್ಕೆ ಕೃಷ್ಣಾ ನದಿ, ದಕ್ಷಿಣಕ್ಕೆ ತುಂಗಭದ್ರಾ ನದಿ ಇವೆ. ಕೃಷ್ಣಾ ನದಿಯಿಂದ ಬಲಭಾಗಕ್ಕೆ ನಾರಾಯಣಪುರ ಬಲದಂಡೆ ಕಾಲುವೆ, ತುಂಗಭದ್ರಾ ನದಿಯ ಎಡಭಾಗಕ್ಕೆ ತುಂಗಭದ್ರಾ ಕಾಲುವೆ ಹರಿದು ಜಿಲ್ಲೆಯ ಶೇ.40ರಷ್ಟು ಜಮೀನಿಗೆ ನೀರಾವರಿ ಸೌಲಭ್ಯ ದೊರೆತಿದೆ. ನಾರಾಯಣಪುರ ಬಲದಂಡೆ ಕಾಲುವೆ ಕಾಮಗಾರಿಗಳು ಮುಕ್ತಾಯ ಹಂತದಲ್ಲಿವೆ. ಇದಕ್ಕೆ ಸ್ಕೀಮ್ 'ಎ'ನಲ್ಲಿ 22.40 ಟಿ.ಎಂ.ಸಿ., ಸ್ಕೀಮ್ 'ಬಿ'ನಲ್ಲಿ 18.94 ಟಿ.ಎಂ.ಸಿ. ನೀರು ಲಭ್ಯವಿದೆ. ಆದರೆ ಇಷ್ಟು ಪ್ರಮಾಣದ ನೀರು ಪೂರ್ಣ ಪ್ರಮಾಣದಲ್ಲಿ ಕೃಷಿ ಭೂಮಿಗೆ ಸಿಕ್ಕಿಲ್ಲ. ನಾರಾಯಣಪುರ ಜಲಾಶಯದಿಂದ ದೇವದುರ್ಗ ವ್ಯಾಪ್ತಿಯ ವರೆಗೆ ದಿನನಿತ್ಯ ಹಳ್ಳದಲ್ಲಿ ಅಂದಾಜು 350 ಕ್ಯೂಸೆಕ್ ಪ್ರಮಾಣದ ನೀರು ವ್ಯರ್ಥವಾಗಿ ಹರಿದು ಹೋಗುತ್ತಿದೆ.

ಜಿಲ್ಲೆಯ ನಂದವಾಡಗಿಯಿಂದ ಕವಿತಾಳದವರೆಗೆ ಹಾಗೂ ಮಸ್ಕಿಯಿಂದ ಗೌಡೂರು ಇವುಗಳ ಮಧ್ಯದಲ್ಲಿ ಸುಮಾರು 80-40 ಕಿ.ಮೀ. ಉದ್ದಗಲದಲ್ಲಿ ಯಾವುದೇ ನೀರಾವರಿ ಯೋಜನೆಗಳಿಲ್ಲ. ಹೀಗಾಗಿ ಈ ಭಾಗದ ಜನತೆ ಮಳೆ-ಆಶ್ರಿತ ಬೇಸಾಯ ಅವಲಂಬಿಸಿದ್ದಾರೆ. ಸಮಯಕ್ಕೆ ಸರಿಯಾಗಿ ಮಳೆ ಬರದೇ ಪ್ರತಿ ವರ್ಷವೂ ಬರಗಾಲದ ಕೂಪಕ್ಕೆ ಸಿಲುಕುತ್ತಿದ್ದಾರೆ. ಈ ಭಾಗದಲ್ಲಿ ನೀರಾವರಿ ಯೋಜನೆ ಅನುಷ್ಠಾನಗೊಳಿಸುವುದು ಅನಿವಾರ್ಯವಾಗಿದೆ. ಈ ಯೋಜನೆ ಕಾರ್ಯಾನುಷ್ಠಾನಗೊಂಡರೆ ಜಿಲ್ಲೆಯ ಐದು ತಾಲೂಕುಗಳ 110ಕ್ಕೂ ಹೆಚ್ಚು ಹಳ್ಳಿಗಳ 1,16,660 ಎಕರೆ ಜಮೀನು ನೀರಾವರಿಗೆ ಒಳಪಡಲಿದೆ. ಬರದಿಂದ ನಲುಗುತ್ತಿರುವ ಈ ಭಾಗದ ಜನರಿಗೆ ಯೋಜನೆ ವರವಾಗಲಿದೆ.

ಕೃಷ್ಣಾ ಮತ್ತು ತುಂಗಭದ್ರಾ ನದಿಯ ಮಧ್ಯ ಭಾಗದಲ್ಲಿನ ಈ ಪ್ರದೇಶ ಸತತ ಬರಗಾಲದಿಂದ ತತ್ತರಿಸುತ್ತಿರುವುದನ್ನು ಗಮನಿಸಿ 1970-71 ರಲ್ಲೇ ಅಂದಿನ ಸರಕಾರಗಳು ಸಮೀಕ್ಷೆ ನಡೆಸಿ, ಈ ಭಾಗದಲ್ಲಿ ನೀರಾವರಿ ಯೋಜನೆ ಅತ್ಯವಶ್ಯಕವಾಗಿದ್ದು, ಇಲ್ಲಿನ ಜನರ ಜೀವಮಟ್ಟ ಸುಧಾರಣೆಗೆ ಹೆಚ್ಚು ಗಮನಹರಿಸಬೇಕೆನ್ನುವ ತೀರ್ಮಾನಕ್ಕೂ ಬಂದಿದ್ದವು. ಆದರೆ ಕಾಲಾಂತರದಲ್ಲಿ ವರದಿ ಮೂಲೆಗುಂಪಾಗಿದ್ದು, ಕಳೆದ 45 ವರ್ಷಗಳಿಂದ ಈ ಮಳೆಯಾಶ್ರಿತ ಪ್ರದೇಶದ ಜನರು ಸಂಕಷ್ಟದ ಕುಲುಮೆಯಲ್ಲಿ ಬೇಯುತ್ತಿದ್ದಾರೆ.

ದಪ್ಪ ಚರ್ಮದ ಜನಪ್ರತಿನಿಧಿಗಳು

ಅಸಲಿಗೆ ಈ ಯೋಜನೆ ಜಾರಿಯಾಗದಿರಲು ಅಂತಹ ದೊಡ್ಡ ತಾಂತ್ರಿಕ ಕಾರಣಗಳೇನು ಇಲ್ಲ, ಬದಲಿಗೆ ಜನಪ್ರತಿನಿಧಿಗಳ ಹೊಣೆಗೇಡಿತನವೇ ಕಾರಣ. ಕಳೆದ ಒಂಭತ್ತು ವರ್ಷಗಳಿಂದ ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ರೈತರು ಶಾಂತಿಯುತ ಹೋರಾಟ ನಡೆಸುತ್ತಾ ಬಂದರೂ ಜಿಲ್ಲೆಯ ಆಯಾ ಕ್ಷೇತ್ರಗಳ ಶಾಸಕರು ಸದನದಲ್ಲಿ ರೈತರ ಹಕ್ಕೊತ್ತಾಯದ ಬಗ್ಗೆ ಸಮರ್ಪಕವಾಗಿ ಪ್ರಸ್ತಾಪಿಸಿಲ್ಲ, ಸರಕಾರದ ಮೇಲೆ ಒತ್ತಡ ತರುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಶಾಸಕರಾದಿಯಾಗಿ, ನಾನಾ ಇಲಾಖೆಯ ಅಧಿಕಾರಿಗಳು ಕುಂಭಕರ್ಣ ನಿದ್ರೆಗೆ ಜಾರಿರುವುದೇ ಯೋಜನೆ ಹಿಂದೆ ಬೀಳಲು ಕಾರಣ.

ಈ ಹಿಂದೆಯೇ ಮಸ್ಕಿ ಶಾಸಕ ಪ್ರತಾಪಗೌಡ ಪಾಟೀಲನ ನೇತೃತ್ವದಲ್ಲಿ ರೈತ ಮುಖಂಡರ ನಿಯೋಗ ಬೆಂಗಳೂರಿಗೆ ತೆರಳಿ, ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ನಾರಾಯಣಪುರ ಬಲದಂಡೆ ನಾಲೆ ಯೋಜನೆ ಜಾರಿಗೆ ಆಗ್ರಹಿಸಿ ಡಿಪಿಆರ್ ಮಾಡುವಂತೆ ಕೋರಿತ್ತು. ತಜ್ಞರ ತಂಡ ಕಳುಹಿಸಿ ವಸ್ತುಸ್ಥಿತಿ ತಿಳಿಯುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಇದುವರೆಗೂ ತಜ್ಞರ ತಂಡ ಇತ್ತ ಮುಖ ಮಾಡಿಲ್ಲ. ಸಿಎಂ ನೀಡಿದ್ದ ಭರವಸೆಯೇ ಹುಸಿಯಾಗಿದೆ. ಇನ್ನು ನೀರಾವರಿ ಸಚಿವರಂತೂ ಈ ವಿಚಾರವಾಗಿ ತಲೆ ಕೆಡಿಸಿಕೊಂಡಿದ್ದೇ ಇಲ್ಲ. ತಮ್ಮ ಸ್ವಂತ ಜಿಲ್ಲೆ ವಿಜಯಪುರವನ್ನು ಮಾದರಿ ಜಿಲ್ಲೆಯನ್ನಾಗಿ ಮಾಡುವುದಕ್ಕಷ್ಟೇ ಎಂ.ಬಿ.ಪಾಟೀಲರ ಮಂತ್ರಿಗಿರಿ ಸೀಮಿತವಾಗಿರೋದು ದುರಂತ. ಅವರು ವಿಜಯಪುರಕ್ಕೆ ಮಾತ್ರ ಸಚಿವರಲ್ಲ ಇಡೀ ರಾಜ್ಯಕ್ಕೆ ಸಚಿವರು ಎಂಬುದನ್ನು ನೆನಪು ಮಾಡಿಕೊಳ್ಳಬೇಕಿರುವುದು ಜರೂರಾಗಿದೆ.

ಜೋರಾದ ಹೋರಾಟ

ಆದರೆ ರೈತರು ಮಾತ್ರ ಭರವಸೆ ಕಳೆದುಕೊಂಡಿಲ್ಲ. 2008ರಿಂದ ಹೋರಾಟ ತೀವ್ರಗೊಳಿಸಿರುವ ಈ ಭಾಗದ ರೈತರು ಇದುವರೆಗೂ 42 ಬಾರಿ ಪ್ರತಿಭಟನೆ ಮೆರವಣಿಗೆಗಳನ್ನು ನಡೆಸಿ ಮನವಿ ಸಲ್ಲಿಸಿದ್ದಾರೆ. ಎನ್‌ಆರ್‌ಬಿಸಿ 5ಎ ನಾಲೆ ಯೋಜನೆ ವಿಸ್ತøತ ವರದಿ ತಯಾರಿಸಲು ಆದೇಶಿಸಬೇಕು, ಯೋಜನೆ ಕಾರ್ಯಗತಗೊಳಿಸಲು ತಾಂತ್ರಿಕ ಸಮಿತಿ ರಚಿಸಿ, ಸಮಗ್ರ ಸರ್ವೆ ನಡೆಸಬೇಕು, ರಾಯಚೂರು ಜಿಲ್ಲೆಯ ಐದು ತಾಲೂಕುಗಳ ಗುಳೆ ಸಮಸ್ಯೆ, ಬಡತನ, ಆರ್ಥಿಕ ಅಸಮಾನತೆ ನಿವಾರಣೆಗೆ ಎನ್‌ಆರ್‌ಬಿಸಿ 5ಎ ನಾಲೆ ಯೋಜನೆ ಶೀಘ್ರ ಕಾರ್ಯಾನುಷ್ಠಾನಗೊಳಿಸಬೇಕು, ಬರದ ಹಿನ್ನೆಲೆಯಲ್ಲಿ ಜಾನುವಾರುಗಳ ರಕ್ಷಣೆಗೆ ಗೋಶಾಲೆ, ಕುಡಿವ ನೀರಿನ ವ್ಯವಸ್ಥೆ ಕಲ್ಪಿಸಬೇಕು, ಎಂಬುದಷ್ಟೇ ಅವರ ಹಕ್ಕೊತ್ತಾಯಗಳು. ನಿಜ ಹೇಳಬೇಕೆಂದರೆ, ಇವೆಲ್ಲ ಚುನಾಯಿತ ಸರ್ಕಾರವೊಂದು ಮಾಡಲೇಬೇಕಾದ ಮೂಲಭೂತ ಕರ್ತವ್ಯಗಳು. ಅದನ್ನು ರೈತರು ಪ್ರತಿಭಟಿಸಿ ಹಕ್ಕು ಸಾಧಿಸಬೇಕಾಗಿ ಬಂದಿರೋದು ವಿಚಿತ್ರ.

ಈ ಹೋರಾಟದಲ್ಲಿ ರೈತ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಮೊನ್ನೆ ಮಾರ್ಚ್ 23ರಂದು ಭಗತ್‌ಸಿಂಗ್ ಹುತಾತ್ಮರಾದ ಸ್ಮರಣೆಯ ಹಿನ್ನೆಲೆಯಲ್ಲಿ ಎನ್‌ಆರ್‌ಬಿಸಿ 5ಎ ನಾಲೆ ಯೋಜನೆ ಹೋರಾಟ ಸಮಿತಿ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಮಸ್ಕಿಯಲ್ಲಿ ಬೃಹತ್ ಪಾದಯಾತ್ರೆ ನಡೆಸಿ ಬೃಹತ್ ಪ್ರತಿಭಟನೆಯು ನಡೆಸಲಾಗಿದೆ. "ನಮ್ಮ ಪಾಲಿನ ನೀರು ಕೊಡಿ ಇಲ್ಲದಿದ್ದರೆ ವಿಷ ಕೊಡಿ" ಅನ್ನೋದನ್ನೇ ಘೋಷವಾಕ್ಯ ಮಾಡಿಕೊಂಡಿದ್ದ ಆ ಪ್ರತಿಭಟನೆ ಚುನಾಯಿತ ಸರ್ಕಾರಗಳ ಮಾನವನ್ನು ನಡುರಸ್ತೆಯಲ್ಲೇ ಹರಾಜು ಹಾಕುವಂತಿತ್ತು. ಈ ಯೋಜನೆಗೆ ಕೇವಲ 12 ಟಿಎಂಸಿ ನೀರು ಮಾತ್ರ ಅಗತ್ಯವಿದೆ. ನೀರು ಕೊಡಬೇಕೆಂಬ ಮನಸ್ಸಿದ್ದರೆ ಯಾವುದೇ ಮಾರ್ಗವಾದರೂ ಸಿಗುತ್ತದೆ. ಆದರೆ ದಪ್ಪ ಚರ್ಮದ ಜನಪ್ರತಿನಿಧಿ ಹಾಗೂ ಅಧಿಕಾರಿಗಳಿಗೆ ರೈತರ ಸಂಕಷ್ಟ ತಿಳಿಯುತ್ತಿಲ್ಲ. ಯೋಜನೆ ಜಾರಿಗಾಗಿ ರೈತರು ಪ್ರಾಣತ್ಯಾಗಕ್ಕೂ ಸಿದ್ಧರಾಗುವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳುವುದು ಒಳಿತು.

ಮುಂದೇನು?

ಹಿಂದುಳಿದ ಪ್ರದೇಶಗಳ ಪಟ್ಟಿಯಲ್ಲಿರುವ ರಾಯಚೂರು, ಲಿಂಗಸಗೂರು, ಸಿಂಧನೂರು, ಮಸ್ಕಿ ಕ್ಷೇತ್ರಗಳಿಗೆ ಈ ಯೋಜನೆ ಜಾರಿಯೊಂದೇ ಆಶಾಕಿರಣವಾಗಿದೆ. ಬರ ಮತ್ತು ಬಡತನದಿಂದಾಗಿ ಈಗಾಗಲೇ ಸಾಕಷ್ಟು ಮಂದಿ ಬೆಂಗಳೂರಿಗೆ ಗುಳೆ ಹೋಗಿದ್ದು ಈಗಲೂ ಯೋಜನೆ ಜಾರಿಯಾಗದಿದ್ದರೆ ಮತ್ತಷ್ಟು ಜನ ಊರು ತೊರೆವ ಹಾದಿಗೆ ಇಳಿಯಬೇಕಾಗುತ್ತದೆ. ಇದು ಜಿಲ್ಲೆಯ ಪ್ರಜ್ಞಾವಂತರನ್ನು ಕಂಗೆಡಿಸಿದೆ. ಬೆಂಗಳೂರು ಅಥವಾ ಮತ್ತಾವುದೇ ಊರಿಗೆ ಗುಳೇ ಹೋಗುವುದೆಂದರೆ ಅಲ್ಲಿ ಬದುಕೇನು ಬಂಗಾರವಾಗುವುದಿಲ್ಲ, ಅಲ್ಲಿಯೂ ಈ ನತದೃಷ್ಟ ಮಂದಿ ಕಷ್ಟ ಅನುಭವಿಸಬೇಕಾಗುತ್ತದೆ. ಆದರೆ ಇದನ್ನೂ ಸಕಾರಾತ್ಮಕವಾಗಿ ಸ್ವೀಕರಿಸಿರುವ ಹೋರಾಟ ಸಮಿತಿ, ಬೆಂಗಳೂರಿಗೆ ತೆರಳಿ ಗುಳೇ ಹೋಗಿರುವವರನ್ನು ಸಂಘಟಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಮಾಡು ಇಲ್ಲವೇ ಮಡಿ ಎಂಬ ನಿರ್ಣಾಯಕ ಹೋರಾಟ ರೂಪಿಸಲು ಸಿದ್ಧತೆ ನಡೆಸಿದೆ. ಅಷ್ಟರಲ್ಲಿ ಸರ್ಕಾರ ಎಚ್ಚೆತ್ತುಕೊಳ್ಳುತ್ತದೆಯೋ ಅಥವಾ ರೈತರ ಹೋರಾಟ ಮತ್ತಷ್ಟು ತೀವ್ರಗೊಳ್ಳುತ್ತವೆಯೋ ಕಾದು ನೋಡಬೇಕು.



■ ಮುತ್ತುರಾಜು

ರಾಜ್‌ಕುಮಾರ್ ಸದ್ದು ಸಡಗರ



ಗಾಂಧಿನಗರದಲ್ಲಿ ಏನೋ ಸಿಡಿದ ಸದ್ದು. ಆದರ ಘಮಲಿಗೆ ಎಂಥದೋ ಸಡಗರ. ಕಂಪು ಕರ್ನಾಟಕದುದ್ದ. ತಂಪು ಅಭಿಮಾನಿ ದೇವರುಗಳ ಮನ ಮಂದಿರದಗಲ. ಅದರ ಹೆಸರೇ ರಾಜಕುಮಾರ!

ಸ್ಟಾರ್ ನಟನೊಬ್ಬನ ಚಿತ್ರವೊಂದು ಬಿಡುಗಡೆಯಾಯಿತೆಂದರೆ ಸರ್ಕಾರವೊಂದರ ಪಾಲಿಗದು ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯೆನಿಸುವುದು ಕರ್ನಾಟಕದ ಮಟ್ಟಿಗೆ ಅಪರೂಪವೆ. ಆಂಧ್ರದಲ್ಲಿ ಚಿರಂಜೀವಿ ಚಿತ್ರಗಳ ಬಿಡುಗಡೆಯ ಅಬ್ಬರ, ತಮಿಳುನಾಡಿನಲ್ಲಿ ರಜನಿಕಾಂತ್ ಚಿತ್ರವೊಂದು ಮಾಡುವ ಕಲ್ಲೋಲಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಅಂಥಾದ್ದೊಂದು ಸಮಸ್ಯೆ ಇದ್ದದ್ದು 80ರ ದಶಕದಲ್ಲಿ, ಹೆಗಡೆ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ರಾಜ್ ಚಿತ್ರಗಳಾದ ಕೆರಳಿದ ಸಿಂಹ, ಹೊಸಬೆಳಕು, ಹಾಲುಜೇನು, ಚಲಿಸುವ ಮೋಡಗಳು, ಕವಿರತ್ನ ಕಾಳಿದಾಸ, ಸಮಯದ ಗೊಂಬೆಯಂಥ ಸಾಲುಸಾಲು ಸೂಪರ್‌ಹಿಟ್ ಚಿತ್ರಗಳು ಬಿಡುಗಡೆಯಾಯಿತೆಂದರೆ ಮೆಜೆಸ್ಟಿಕ್ ಅಕ್ಷರಶಃ 'ಬಂದ್' ಆಗುತ್ತಿದ್ದ ಕಾಲವೊಂದಿತ್ತು.

ಬಿಡುಗಡೆಗೂ ವಾರದ ಮೊದಲೇ ನಡೆಯುತ್ತಿದ್ದ ಟಿಕೆಟ್ ಹಾಹಾಕಾರ, ಅಭಿಮಾನಿಗಳ ಅತಿರೇಕ, ಚಿತ್ರಮಂದಿರಗಳೆದುರು ನಡೆಯುತ್ತಿದ್ದ ಲಾಠಿ ಚಾರ್ಜ್‌ಗಳೂ, ಪೊಲೀಸರಿಗೂ ಅಭಿಮಾನಿಗಳಿಗೂ ನಡೆಯುತ್ತಿದ್ದ ನಡುರಸ್ತೆ ಮಾರಾಮಾರಿಗಳೆಲ್ಲವೂ ಯಾವುದೋ ಗತವೈಭವದಂತೆ ಇವತ್ತಿಗೆ ನೆನಪು ಮಾತ್ರ. ತೀರಾ ಇತ್ತೀಚೆಗೆ ಸುದೀಪ್ ಅಭಿನಯದ ಹೆಬ್ಬುಲಿ, ದರ್ಶನ್‌ನ ಅಂಬರೀಶ, ಯಶ್‌ನ ರಾಮಾಚಾರಿ ಮುಂತಾದ ಚಿತ್ರಗಳ ಅಬ್ಬರಕ್ಕೆ ಹೋಲಿಸಿದರೆ ಪುನೀತ್‌ನ ದೊಡ್ಮನೆ ಹುಡುಗ ತೀರ ಹೇಳಿಕೊಳ್ಳುವ ಮಟ್ಟಕ್ಕೇನೂ ಇರಲಿಲ್ಲ.

ಆದರೆ ಮೊನ್ನೆ ಬಿಡುಗಡೆಯಾದ 'ರಾಜಕುಮಾರ' ಪುನೀತ್‌ನ ಬೇರಾವುದೇ ಚಿತ್ರಗಳೂ ಮಾಡದ ಸಂಚಲನವೊಂದನ್ನು ಸೃಷ್ಟಿಸಿದ್ದು ಬಿಡುಗಡೆಯ ಹಿಂದಿನ ರಾತ್ರಿ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ ನಡೆದ ಹಿಂಸಾಚಾರದಿಂದ. ನಟನೊಬ್ಬನ ಚಿತ್ರದ ಬಿಡುಗಡೆ ಸಂಬಂಧಿ ಗಲಭೆಯ ಕುರಿತಂತೆ ದಿನಪತ್ರಿಕೆಗಳಲ್ಲಿ ವರದಿಯಾಗುತ್ತಿರುವುದು ಕಳೆದ 30 ವರ್ಷಗಳಿಂದೀಚೆಗೆ ಇದೇ ಮೊದಲಿರಬೇಕು. ರಾಜಕುಮಾರ ತೆರೆ ಕಾಣಬೇಕಿದ್ದದ್ದು ಮಾರ್ಚ್ 24 ಶುಕ್ರವಾರದ ಬೆಳಗ್ಗೆ ಯಾದರೂ ಅದರ ಹಿಂದಿನ ರಾತ್ರಿಯೇ ಅಭಿಮಾನಿಗಳು ತಾಳ್ಮೆಗೆಟ್ಟರು- ಹೊಸಪೇಟೆಯ ಬಾಲಾ ಮತ್ತು ಸರಸ್ವತಿ ಥೇಟರುಗಳೆದುರು ಗುರುವಾರ ರಾತ್ರಿ ಎಂಥಾ ನೂಕುನುಗ್ಗಲೆಂದರೆ ಎರಡೂ ಚಿತ್ರಮಂದಿರಗಳೆದುರೂ ಕಮ್ಮಿಯೆಂದರೂ ಸಾವಿರ ಮಂದಿ ಅಭಿಮಾನಿಗಳು ಹುಚ್ಚೆದ್ದು ಬೀದಿಗಿಳಿದಾಗಿತ್ತು, ಮರುದಿನದ ಬೆಳಗ್ಗಿನ ಪ್ರದರ್ಶನಕ್ಕೂ ಕಾಯದೆ ಗುರುವಾರ ರಾತ್ರಿಯೇ ವಿಶೇಷ ಪ್ರದರ್ಶನ ಏರ್ಪಡಿಸುವಂತೆ ಹಟಕ್ಕೆ ಬಿದ್ದ ಪುನೀತ್ ಭಕ್ತರನ್ನು ನಿಯಂತ್ರಿಸುವುದು ಪೊಲೀಸರಿಗೇ ದುಸ್ಸಾಧ್ಯವಾಗಿತ್ತು.

ಕಾಟಮ ರಾಯುಡು...!

ಬಾಲಾ ಥೇಟರಿನ ಗೇಟನ್ನೇ ಮುರಿದು ಒಳನುಗ್ಗಿದ ಅಭಿಮಾನಿಗಳು ಈಗಲೇ ಪ್ರದರ್ಶನ ಮಾಡಿ ಎಂದು ಪೊಲೀಸರ ವಿರುದ್ಧವೇ ಕಲ್ಲು ತೂರಲಾರಂಭಿಸಿದರು. ಚಿತ್ರಮಂದಿರದ ಷೋಕೇಸ್, ಕಿಟಕಿ ಗಾಜುಗಳೆಲ್ಲ ಪುಡಿಯಾದವು. ರಸ್ತೆಗಿಳಿದ ಭಕ್ತರ ಆಕ್ರೋಶಕ್ಕೆ ಹಂಪಿ ರಸ್ತೆಯ ವಿದ್ಯುತ್ ಕಂಬಗಳು, ದೀಪಗಳೂ, ರಸ್ತೆಯಲ್ಲಿ ಓಡಾಡುತ್ತಿದ್ದ ಸರ್ಕಾರಿ ಬಸ್ಸುಗಳೆಲ್ಲವೂ ಬಲಿಯಾದವು. ಎರಡು ತಾಸು ರಸ್ತೆ ತಡೆ ಮಾಡಿದ ಅಭಿಮಾನಿಗಳನ್ನು ಅಂತಿಮವಾಗಿ ಲಾಠಿಚಾರ್ಜ್ ಮಾಡಿ ಪೊಲೀಸರು ಚದುರಿಸಬೇಕಾಯಿತು. ಈ ಪೈಕಿ 34 ಮಂದಿಯನ್ನು ಬಂಧಿಸಿದ ಪೊಲೀಸರು ದೊಂಬಿ ಕೇಸು ಹಾಕಿ ಬಳ್ಳಾರಿ ಜೈಲಿಗೂ ಸಾಗಹಾಕಿದ್ದಾಯ್ತು!

ಇದು ಹೊಸಪೇಟೆಯ ಪರಿಸ್ಥಿತಿಯಾದರೆ ಬಳ್ಳಾರಿಯಲ್ಲಿ ಶಿವ ಚಿತ್ರಮಂದಿರದ ಮಾಲಿಕ ಲಕ್ಷ್ಮಿಕಾಂತರೆಡ್ಡಿಗೆ ಬಿಡುಗಡೆಯ ಹಿಂದಿನ ರಾತ್ರಿಯೇ ವಿಧಿಯಿಲ್ಲದೆ 'ರಾಜಕುಮಾರ' ಚಿತ್ರದ ನಡುರಾತ್ರಿ ಪ್ರದರ್ಶನ ನಡೆಸಲೇಬೇಕಾಯಿತು. ಇಲ್ಲದೆ ಹೋಗಿದ್ದರೆ ಇಡೀ ಚಿತ್ರಮಂದಿರವೇ ಚಿಂದಿಯಾಗುತ್ತಿತ್ತು, ಗೇಟನ್ನೇ ಮುರಿದು ಥೇಟರಿಗೆ ನುಗ್ಗಿದ ಏಳುನೂರಕ್ಕೂ ಅಧಿಕ ಮಂದಿ ರಾತ್ರಿ ಒಂದು ಗಂಟೆಯ ತನಕವೂ ಹಿಡಿದ ಪಟ್ಟು ಬಿಡಲೇ ಇಲ್ಲ. ಪಕ್ಕದಲ್ಲೇ ನಟರಾಜ ಥೇಟರ್. ಅಲ್ಲಿ ತೆಲುಗಿನ ಪವನ್‌ಕಲ್ಯಾಣ್‌ನ ಕಾಟಮ ರಾಯುಡು ಮರುದಿನ ಬೆಳಗ್ಗೆ ತೆರೆ ಕಾಣಬೇಕಿತ್ತು, ಅಪ್ಪು ಅಭಿಮಾನಿಗಳ ಹಠಕ್ಕೆ ಮಣಿದು ನಡುರಾತ್ರಿ ಪ್ರದರ್ಶನ ನಡೆಯುತ್ತಿದೆ ಎಂದು ಗೊತ್ತಾಗಿದ್ದೇ ನೂರಾರು ಮಂದಿ ತೆಲುಗರೂ 'ಕಾಟಮ ರಾಯುಡು' ಪ್ರದರ್ಶಿಸುವಂತೆ ದಾಂಧಲೆಗಿಳಿದರು. ಅವರಿಗೂ ರಾತ್ರಿ ವಿಶೇಷ ಪ್ರದರ್ಶನ ಏರ್ಪಡಿಸಬೇಕಾಯಿತು. ಗಂಗಾವತಿಯಲ್ಲೂ ಇದೇ ಪರಿಸ್ಥಿತಿ. ಶುಕ್ರವಾರ ಬೆಳಗ್ಗೆ ಟಿಕೆಟ್ ಸಿಗಲಿಲ್ಲ ಎಂದು ರೊಚ್ಚಿಗೆದ್ದವರ ಕಲ್ಲು ತೂರಾಟವನ್ನು ತಡೆಯಲು ಪೊಲೀಸರೇ ಬರಬೇಕಾಯಿತು. ಲಾಠಿ ಚಾರ್ಜ್ ನಡೆಯಿತು. ದಾವಣಗೆರೆಯಲ್ಲಿ ಗುರುವಾರ ರಾತ್ರಿಯೇ ಗೀತಾಂಜಲಿ ಚಿತ್ರಮಂದಿರದೆದುರು ಎರಡು ಸಾವಿರಕ್ಕೂ ಅಧಿಕ ಜನರ ಹಿಂಡಿತ್ತು, ವಿಧಿಯಿಲ್ಲದೆ ಬಿಡುಗಡೆಯ ಹಿಂದಿನ ರಾತ್ರಿ ವಿಶೇಷ ಪ್ರದರ್ಶನ ಏರ್ಪಡಿಸಿ ಗಲಾಟೆಯನ್ನು ನಿಯಂತ್ರಿಸಬೇಕಾಯಿತು.

ಪಕ್ಕಾ ಫ್ಯಾಮಿಲಿ

ಶಿವಮೊಗ್ಗ, ಭದ್ರಾವತಿ ಸೇರಿದಂತೆ ಕರ್ನಾಟಕದ ಇಪ್ಪತ್ತಕ್ಕೂ ಅಧಿಕ ನಗರಗಳಲ್ಲಿ ಬಿಡುಗಡೆಯ ಹಿಂದಿನ ರಾತ್ರಿಯೇ ಅನಿವಾರ್ಯ 'ಷೋ' ಏರ್ಪಡಿಸಬೇಕಾದ ಇಕ್ಕಟ್ಟಿಗೆ ಥೇಟರುಗಳ ಮಾಲಿಕರು ಸಿಕ್ಕಿಬಿದ್ದದ್ದು ಇದೇ ಮೊದಲು. ರಾಜ್‌ಕುಮಾರ ತೆರೆಕಂಡು ಇವತ್ತಿಗೆ ನಾಲ್ಕನೇ ದಿನ. ಮೊದಲನೇ ದಿನವೇ 9.4 ಕೋಟಿ ರೂಪಾಯಿಗಳ ಕಲೆಕ್ಷನ್ನಾಯಿತು. ಕೇವಲ ಮೂರು ದಿನದಲ್ಲಿ ರಾಜ್‌ಕುಮಾರ ಚಿತ್ರದ ಗಳಿಕೆ 23.3 ಕೋಟಿ. ಕರ್ನಾಟಕದ ಮುನ್ನೂರಕ್ಕೂ ಅಧಿಕ ಥೇಟರುಗಳ ಜೊತೆಗೆ ಮುಂಬಯಿ, ಪೂನಾ, ನೋಯಿಡಾ, ಹೈದರಾಬಾದ್, ಚೆನ್ನೈ ಸೇರಿದಂತೆ ಸರಿಸುಮಾರು 40 ಹೊರರಾಜ್ಯದ ನಗರಗಳಲ್ಲೂ ಏಕಕಾಲಕ್ಕೆ ತೆರೆಕಂಡ 'ರಾಜ್‌ಕುಮಾರ' ಈ ತನಕದ ಕನ್ನಡ ಚಿತ್ರರಂಗದ ಬಾಕ್ಸ್ ಆಫೀಸ್ ದಾಖಲೆಗಳೆಲ್ಲವನ್ನೂ ಚಿಂದಿಯೆಬ್ಬಿಸಿದೆ.

ಸದ್ಯದ ಕನ್ನಡ ಸ್ಟಾರ್‌ವಾರ್‌ನ ಜಿದ್ದಾಜಿದ್ದಿ ಪೈಪೋಟಿಗೆ ಹೋಲಿಸಿದರೆ ರಾಜಕುಮಾರ ಹೇಳಿಕೊಳ್ಳುವಂಥಾ ದೊಡ್ಡ ಬಜೆಟ್ಟಿನದೇನಲ್ಲ, ಸುದೀಪ್‌ನ ಹೆಬ್ಬುಲಿ, ದರ್ಶನ್‌ನ ಜಗ್ಗುದಾದ, ಯಶ್‌ನ ಮಾಸ್ಟರ್‌ಪೀಸ್ ಮುಂತಾದವುಗಳೆಲ್ಲ ಮೂರನೇ ದಿನದ ತನಕ ಹೌಸ್‌ಫುಲ್ಲಾಗಿ ನಾಲ್ಕನೇ ದಿನದ ಹೊತ್ತಿಗೆ ಸುಸ್ತು ಹೊಡೆದಿದ್ದವು. ಆದರೆ ಅಪ್ಪು ಮೂರು ದಿನಗಳ ಹೌಸ್‌ಫುಲ್ ಶಾಸ್ತ್ರ ಮುಗಿಸಿಯೂ ನಾಲ್ಕನೇ ದಿನಕ್ಕೆ ಬೇರೆಯದೇ ರೀತಿಯ ಹೌಸ್‌ಫುಲ್ ಸರಣಿಗೆ ಮುಂದಾಗುತ್ತಿದೆ. ಅದು ಪಕ್ಕಾ ಫ್ಯಾಮಿಲಿ ಆಡಿಯನ್ಸ್.



ಹಿಂದೆ ಮೊದಲ ವಾರಕ್ಕೆ ಅಭಿಮಾನಿಗಳಿಗೆ ಮೀಸಲಿರುತ್ತಿದ್ದ ರಾಜ್ ಚಿತ್ರಗಳು ಎರಡನೇ ವಾರಕ್ಕೆ ಕೌಟುಂಬಿಕ ಪ್ರೇಕ್ಷಕರಿಂದ ಹೇಗೆ ತುಂಬಿರುತ್ತಿದ್ದವೋ ಅದೇ ಪರಂಪರೆ ಮತ್ತೆ ಪುನೀತ್‌ರ ರಾಜಕುಮಾರದ ಮೂಲಕ ಶುರುವಾಗಿರುವಂತಿದೆ. ಮಿಲನದ ನಂತರ ಪುನೀತ್ ಮಾಡಿದ ಬಹುತೇಕ ಚಿತ್ರಗಳೆಲ್ಲವೂ ಆಕ್ಷನ್ ಆಧಾರಿತ ಚಿತ್ರಗಳೇ. ಅಣ್ಣಾ ಬಾಂಡ್, ನಿನ್ನಿಂದಲೇ, ಪರಮಾತ್ಮ, ರಣವಿಕ್ರಮ, ದೊಡ್ಮನೆ ಹುಡುಗ ಇತ್ಯಾದಿ ಸಾಲುಸಾಲಾಗಿ ಸುಸ್ತು ಹೊಡೆದವು. ಇದೇವೇಳೆ ಯಶ್ ಚಿತ್ರಗಳು ಒಂದರ ಮೇಲೊಂದರಂತೆ ಅಬ್ಬರಿಸಲಾರಂಭಿಸಿದವು. ದರ್ಶನ್ ಕೂಡ ಅಪ್ಪು ರೀತಿಯಲ್ಲೇ ಹಿಟ್ ದಾರಿದ್ರ್ಯಕ್ಕೀಡಾಗಿದ್ದರೆ ಸುದೀಪ್ ಕಾಲಕ್ರಮೇಣ ಚಿಗಿತು ನಿಂತಿದ್ದ.

ಹಾಗೆ ನೋಡಿದರೆ 2015 ಮತ್ತು 2016 ಅಪ್ಪು ಪಾಲಿಗೆ ಕೆಟ್ಟ ದಿನಗಳೇ. ಏನೆಲ್ಲ ಸರ್ಕಸ್ ಮಾಡಿದರೂ ಮಿಲನದ ನಂತರ ಹೇಳಿಕೊಳ್ಳುವಂತ ದೊಡ್ಡಮಟ್ಟದ ಹಿಟ್‌ಗಳಾಗಲೇ ಇಲ್ಲ. ಕನ್ನಡದ ಸ್ಟಾರ್‌ವಾರ್ ಮಟ್ಟಿಗೆ ಇದು ಅಪ್ಪುವಿನಂತ ಓಟದ ಕುದುರೆಯ ಇಮೇಜಿಗೇ ಆಪತ್ತು, ಇಂಥ ಹತಾಶೆಯ ನಡುವೆಯೇ ಗಾಂಧಿನಗರದ ದೊಡ್ಡಮನೆಗೆ ಅನಿವಾರ್ಯ ಆಯ್ಕೆಯೆಂಬಂತೆ ಸಿಕ್ಕಿದ್ದು ಸಂತೋಷ್ ಆನಂದರಾಮ್!



ರಾಮಾಚಾರಿಯ ಸಂತೋಷ್

ರಾಮಾಚಾರಿಯಂಥ ತೀರ ಮಸಾಲೆಯೂ ಅಲ್ಲದ ಫ್ಯಾಮಿಲಿಯೂ ಹೊರತಾಗದ ಸಮ್ಮಿಶ್ರ ಪಾಕವನ್ನು ಸಿದ್ಧಪಡಿಸಿ ಯಶ್‌ನಂಥ ಆ್ಯವರೇಜ್ ಹೀರೋನನ್ನು ರಾತ್ರೋರಾತ್ರಿ ಸೂಪರ್‌ಸ್ಟಾರ್ ಪಟ್ಟಕ್ಕೇರಿಸಿದ ಸಂತೋಷ್ ಅದಕ್ಕೆ ಬಳಸಿಕೊಂಡಿದ್ದು ನಾಗರಹಾವು ಚಿತ್ರದ ವಿಷ್ಣುವನ್ನು. ವಿಷ್ಣುವರ್ಧನ್ ಇಮೇಜಿನ ಮೇಲೆ ಇಡೀ ರಾಮಾಚಾರಿಯ ಅಸ್ತಿತ್ವವನ್ನು ಕಟ್ಟಿಕೊಟ್ಟ ಸಂತೋಷ್ ಈ ಬಾರಿ ಅದೇ ಸೂತ್ರವನ್ನು ಪುನೀತ್ ಮೇಲೆ ಪ್ರಯೋಗಿಸುವ ದುಸ್ಸಾಹಸಕ್ಕೆ ಕೈಯಿಟ್ಟಿದ್ದ. ಅಂದರೆ ಪುನೀತ್ ವ್ಯಕ್ತಿತ್ವಕ್ಕೆ ತಂದೆ ರಾಜ್‌ರ ಎರಕ ಹುಯ್ಯುವುದು. ಹೇಗೆ ರಾಮಾಚಾರಿಗೆ ವಿಷ್ಣುವಿನ ಆತ್ಮದ ಆವಾಹನೆ ಮಾಡುವುದೋ ಅದೇ ರೀತಿ ಪುನೀತ್‌ಗೆ ಕಸ್ತೂರಿ ನಿವಾಸದ ರಾಜ್ ತ್ಯಾಗಮಯಿ ಇಮೇಜ್ ಲೇಪಿಸುವುದು. ಅದಕ್ಕೆ ಹೆಸರಾಗಿ ದಕ್ಕಿದ್ದು ರಾಜಕುಮಾರ. ಅದೇ ಆಡಿಸಿ ನೋಡು ಬೀಳಿಸಿ ನೋಡು ಹಾಡು, ಅದೇ ಗೊಂಬೆ, ಅದೇ ಫ್ಯಾಮಿಲಿ ಮೆಲೋಡ್ರಾಮಾ ಮತ್ತು ಕಸ್ತೂರಿ ನಿವಾಸದ್ದೇ ವಿಷಾದ ಪರ್ವ.

ಇಂಥಾದ್ದೊಂದು ವಸ್ತು ಇಟ್ಟುಕೊಂಡು ಅದಕ್ಕೆ ರಾಜಕುಮಾರ ಎಂದು ಹೆಸರಿಟ್ಟು ಅತ್ತ ಪುನೀತ್ ಇಮೇಜಿಗೆ ಬೇಕಾದ ಮಸಾಲೆ, ಫೈಟಿಂಗ್, ಡ್ಯಾನ್ಸು ಎಲ್ಲವನ್ನೂ ತುಂಬಿ ಜೊತೆಗೆ ಫ್ಯಾಮಿಲಿ ಸೆಂಟಿಮೆಂಟಿನ ಕತೆ ಹೆಣೆದರೆ ಮತ್ತೊಂದು ರಾಮಾಚಾರಿ ಸೃಷ್ಟಿಸಬಹುದೆಂಬ ಸಂತೋಷ್ ಲೆಕ್ಕಾಚಾರವನ್ನು ಗಾಂಧಿನಗರದ ಬಹುತೇಕರೆಲ್ಲ ಆಡಿಕೊಂಡಿದ್ದೇ ಹೆಚ್ಚು. ಏಕೆಂದರೆ ಹಿಟ್‌ಗಳನ್ನು ಕೊಟ್ಟಾದ ಮೇಲೆ ದೊಡ್ಡಮನೆಯ ಆಫರ್ ಒಪ್ಪಿ ಪುನೀತ್ ಚಿತ್ರಗಳನ್ನು ಸೃಷ್ಟಿಸಿದ ಯೋಗರಾಜ ಭಟ್, ಸೂರಿ, ಪ್ರೇಮ್, ಪವನ್ ಒಡೆಯರ್ ಮುಂತಾದವರ್‍ಯಾರೂ ನಿರೀಕ್ಷಿತ ಮಟ್ಟದಲ್ಲಿ ಚಿತ್ರವನ್ನು ನಿಲ್ಲಿಸಲಾಗಿರಲಿಲ್ಲ, ಇಂಥಾದ್ದರಲ್ಲಿ ಸಂತೋಷ್ ತಾನೆ ಏನು ಕಡಿದು ಕಟ್ಟೆ ಹಾಕಬಲ್ಲ? ಎಂದೇ ಗಾಂಧಿನಗರದ ಕುಹಕಿಗಳು ಹುಯಿಲೆಬ್ಬಿಸುತ್ತಲೇ ಬಂದಿದ್ದರು. ರಾಜಕುಮಾರ ತನ್ನ ತಂದೆಯ ಸಾಧನೆಗಳ ಮೇಲೆ ಅಪ್ಪು ಆಡುತ್ತಿರುವ ವಿಚಿತ್ರ ಜೂಜು ಮಾತ್ರವೇ ಹೊರತು ಅದು ರಾಮಾಚಾರಿಯ ಮಟ್ಟಕ್ಕೆ ನಿಲ್ಲುವುದು ಸಾಧ್ಯವೇ ಇಲ್ಲವೆಂಬುದು ಗಾಂಧಿನಗರದ ಲೆಕ್ಕಾಚಾರವಾಗಿತ್ತು.

ಆದರೆ ಮಾರ್ಚ್ 10ಕ್ಕೆ ಟ್ರೇಲರ್ ರಿಲೀಜಾಯಿತಲ್ಲ, ಅದರಲ್ಲಿದ್ದದ್ದು ಕಸ್ತೂರಿ ನಿವಾಸದ ಅದೇ ಆಡಿಸಿನೋಡು-ಬೊಂಬೆ ಮತ್ತು ಬೊಂಬೆ ಹೇಳುತೈತೆ ಹಾಡು. ಕೇವಲ ಇಪ್ಪತ್ತೇ ದಿನದಲ್ಲಿ 18 ಲಕ್ಷ ಮಂದಿ ಯೂಟ್ಯೂಬ್‌ನಲ್ಲಿ ರಾಜಕುಮಾರದ ಟ್ರೈಲರ್ ನೋಡುವ ಮೂಲಕ ಕನ್ನಡ ಚಿತ್ರರಂಗದಲ್ಲಿ ಕಲ್ಲೋಲವನ್ನೇ ಸೃಷ್ಟಿಸಿಬಿಟ್ಟರು. ಬೆನ್ನಲ್ಲೇ ಬೊಂಬೆ ಹೇಳುತೈತೆ... ಹಾಡಿನ ಮೇಕಿಂಗ್ ಕುರಿತ ಮತ್ತೊಂದು ಟೀಸರ್ ಬಿಡುಗಡೆಯಾಯಿತು. ಕೇವಲ 20 ದಿನದೊಳಗೆ 10 ಲಕ್ಷ ಮಂದಿ ನೋಡುವ ಮೂಲಕ ಹಾಡೊಂದರ ಮೇಲಿದ್ದ ಸಕಲ ದಾಖಲೆಗಳೆಲ್ಲವೂ ಮುರಿದು ಬಿದ್ದವು. ಜ್ಯೂಕ್ ಬಾಕ್ಸ್‌ನಲ್ಲೂ ಒಂದು ಮಿಲಿಯನ್ ವೀಕ್ಷಕರು ಬೊಂಬೆ ಹಾಡುತೈತೆ ನೋಡಿದ್ದು ಮತ್ತೊಂದು ದಾಖಲೆ ಬರೆದಿತ್ತು, ಇದಾಗಿ ವಾರಕ್ಕೆ ರಾಜಕುಮಾರದ ಅಪ್ಪು ಡ್ಯಾನ್ಸ್ ಯೂಟ್ಯೂಬಿಗಪ್ಪಳಿಸಿದರೆ ಕೇವಲ ಎಂಟೇ ದಿನದಲ್ಲಿ 20 ಲಕ್ಷ ಮಂದಿ ಅದನ್ನು ಕಣ್ತುಂಬಿಕೊಂಡಾಗಿತ್ತು!


ಇತ್ತೀಚಿನ ಕನ್ನಡ ಚಿತ್ರಗಳಿಗೆ ಹೋಲಿಸಿದರೆ ಇವೆಲ್ಲವೂ ಸಾರ್ವಕಾಲಿಕ ದಾಖಲೆಯಾಗಿದ್ದವು. ಅದು ಕೇವಲ ಮಾಮೂಲಿಯ ಅಪ್ಪು ಚಿತ್ರಗಳಿಗೆ ದಕ್ಕುತ್ತಿದ್ದ ಹೆಗ್ಗಳಿಕೆಯಾಗಿರಲಿಲ್ಲ, ಈ ಬಾರಿ ಅದಕ್ಕೆ ತಂದೆ ರಾಜ್‌ರ ವಿಶಿಷ್ಟ ಶಕ್ತಿಯೂ ಸೇರಿಕೊಂಡಿತ್ತು. ರಾಮಾಚಾರಿ ಫಾರ್ಮುಲಾ ಈ ಬಾರಿ ವರನಟ ರಾಜ್ ಇಮೇಜನ್ನು ಆಧರಿಸಿದ್ದರ ಪರಿಣಾಮದ ಬಗ್ಗೆ ಏನೆಲ್ಲಾ ಅನುಮಾನ ಕುತೂಹಲಗಳಿದ್ದವೋ ಅದೆಲ್ಲವನ್ನೂ ಬೊಂಬೆ ಹೇಳುತೈತೆ ಎಂಬ ವಿಜಯಪ್ರಸಾದ್‌ರ ಹಾಡೊಂದೇ ನಿವಾಳಿಸಿ ಹಾಕಿತ್ತು.

ಮಿಕ್ಕಂತೆ ಬೇರೆಲ್ಲವನ್ನೂ ಈಗ ರಾಜಕುಮಾರ ಚಿತ್ರವೇ ಹೇಳುತ್ತಿದೆ. ಪುನೀತ್ ತಪಸ್ಸು ತಂದೆಯ ಮೂಲಕ ಸಿದ್ಧಿಸಿದೆ. ಸಂತೋಷ್ ಆನಂದರಾಮ್ ಎಂಬ ಛಲವಂತ ನಿರ್ದೇಶಕ ತನ್ನ ಬಗೆಗಿದ್ದ ಗಾಂಧಿನಗರದ ಕುಹಕ, ಕುಚೋದ್ಯಗಳೆಲ್ಲವನ್ನೂ ಮೆಟ್ಟಿ ನಿಂತಿದ್ದಾನೆ. ಕರ್ನಾಟಕದ ಎಷ್ಟೆಲ್ಲ ಮಲ್ಟಿಪ್ಲೆಕ್ಸ್‌ಗಳಲ್ಲಿ ರಾಜಕುಮಾರ ತೆರೆಕಂಡಿದೆಯೋ ಅದರ ಶೇಕಡಾ 98ರಷ್ಟು ಷೋಗಳು ಇವತ್ತಿಗೂ ಹೌಸ್‌ಫುಲ್. ಬುಕ್ ಮೈ ಷೋ ಎಂಬ ಸಿನಿಮಾ ಥೇಟರುಗಳ ಕುರಿತ ಆ್ಯಪ್ ನಡೆಸಿದ ಸಮೀಕ್ಷೆ ಪ್ರಕಾರ ಸದ್ಯ ರಾಜಕುಮಾರನೇ ನಂಬರ್ ಒನ್. ತೆಲುಗಿನ ದೈತ್ಯ ಪವನ್ ಕಲ್ಯಾಣ್‌ನ ಕಾಟಮ ರಾಯುಡು ರಾಜಕುಮಾರನೆದುರು ಬಾಲ ಮುದುರಿಕೊಂಡಿದೆ.

ಮತ್ತೊಂದು ರಾಮಾಚಾರಿಯಲ್ಲ ಅದನ್ನು ಮೀರಿಸಿ ಹೊಸ ದಾಖಲೆ ಬರೆಯುವ ಎಲ್ಲಾ ಲಕ್ಷಣಗಳೂ ನಿಚ್ಚಳವಾಗಿವೆ. ರಾಜಕುಮಾರ ಪುನೀತ್ ಪಾಲಿಗೆ ನಿಜಕ್ಕೂ ಅಪ್ಪನ ಆತ್ಮದ ವರ....

■ ರಾ. ಸೋಮನಾಥ್

ಉತ್ತರ ಪ್ರದೇಶದ ಫಲಿತಾಂಶದ ಪಾಠ ಮೋದಿ ಹುಲಿ ವೇಷದ ಗುಳ್ಳೆ ನರಿ!!



ಶುದ್ಧ ಮೋಸಗಾರ ನರಿಯಣ್ಣನ ಮೈಗೆಲ್ಲ ಹುಲಿ ... ಸುತ್ತಿಟ್ಟರೆ ಹೇಗಿರುತ್ತದೆ?! ತಾನೊಬ್ಬ ಅಜೇಯ ...ಕನೆಂದು ಹುಸಿ ಪೋಜು ಕೊಡುತ್ತಿರುವ ...ಬುಡಿಕೆ ಮೋದಿ ಮಾಮನದೂ ಇದೇ ಕತೆ! ಇದು ...ಗಾಗದವರ ಕುಹಕದ ಟೀಕೆಯಲ್ಲ; ತೀರಾ ಮೊನ್ನೆ-... ಮುಗಿದ ಉತ್ತರ ಪ್ರದೇಶದ ವಿಧಾನಸಭೆ ...ವಣೆಯ ಫಲಿತಾಂಶದ ಅಂಕಿ-ಅಂಶ ಸಮೇತ ...ಶಯವಾಗಿ ಸಾಬೀತು ಮಾಡಿದ ಘನ ಸತ್ಯ!

...ಹಾರ ಮಾದರಿಯ ಮಹಾಮೈತ್ರಿ ಕೂಟವೇನಾದರೂ ... ಪ್ರದೇಶದಲ್ಲಿ ಘಟಿಸಿದ್ದರೆ ಮೋದಿ ಪಟಾಲಮ್ ... ಆಗುತ್ತಿತ್ತು. ಪೊಳ್ಳು ಮಾಧ್ಯಮಗಳಿಂದ, ವಾಸ್ತವ ... ಹಚ್ಚಿ ನೋಡಲಾಗದ ಪೆದ್ದುಗಳಿಂದ ಚುನಾವಣಾ ...ಗಾರಿಕಾ ನಿಪುಣರೆಂದು ವಾಚಾಮಗೋಚರವಾಗಿ ...ಳಿಸಿಕೊಳ್ಳುತ್ತಿರುವ ಮೋದಿ-ಶಾಗೆ ಎದುರಾಳಿಗಳ ಒಣ ...ಯ ಕಚ್ಚಾಟ ವರವಾಗಿದೆಯೇ ಹೊರತು ಬಹುಜನರ ...ಲ ಗಳಿಸುವ ಯೋಗ್ಯತೆ ಈ ಜೋಡಿಗಿಲ್ಲ ಎಂಬುದು ... ಪ್ರದೇಶದ ಫಲಿತಾಂಶ ಸಾರಿಸಾರಿ ಹೇಳಿದೆ!

...ದು 1970-1980ರ ದಶಕದ ಕಾಲಘಟ್ಟ. ...ರಾ-ರಾಜೀವ್ ಕಾಂಗ್ರೆಸ್ ಜನರಲ್ಲಿ ರೇಜಿಗೆ ಹುಟ್ಟಿಸಿತ್ತು. ...ಗಳೆಲ್ಲವೂ ಕಾಂಗ್ರೆಸ್‌ನ್ನೇ ಗುರಿಯಾಗಿಸಿ ರಾಜಕೀಯ ... ಸಾರಿದ್ದವು. ಆದರೆ ಒಗ್ಗಟ್ಟೆಂಬುದು ವಿರೋಧಿಗಳಲ್ಲಿ ... ಇಲ್ಲ. ಕಾಂಗ್ರೆಸ್ ವಿರೋಧಿ ಮತಗಳು ಒಡೆದು ... ಹೋಗಿ ಆ ಬಹುಜನರಿಗೆ ಬೇಡದ ಪಕ್ಷವೇ ...ಜಾಲವಾಗಿ ಅಧಿಕಾರಕ್ಕೆ ಏರುತ್ತಿತ್ತು.


...ಈಗಿನ ಮೋದಿ ಮಹಾತ್ಮನ ಪರ್ವವೂ ಅಂಥದ್ದೇ ತಿರಸ್ಕಾರದ್ದು. ಇಂದಿರಾಜಿಯ ಕನ್ನಡಿಯಲ್ಲಿ ಮೋದಿ ಬಿಂಬ ಇಣುಕುತ್ತಿದೆ. ಇಂದಿರೆಯನ್ನು ಮೀರಿಸುವ ಸರ್ವಾಧಿಕಾರಿ, ಅಸಹ್ಯ ಆತ್ಮರತಿಯ ಅಪಾಯಕಾರಿಯಾಗಿ ಮೋದಿ ಅವತರಿಸಿದ್ದಾರೆ. ಆದರೆ ಇಂದಿರಾ ಎಂದಿಗೂ ಧರ್ಮಕಾರಣದ ದುರ್ಲಾಭ ಈ ಮಟ್ಟದಲ್ಲಿ ಎತ್ತಿರಲಿಲ್ಲ, ಮೋದಿಯಷ್ಟು ಧರ್ಮಾಂಧ ಕಾರ್ಯಾಚರಣೆಯೂ ಆಕೆಯದಾಗಿರಲಿಲ್ಲ.

ಯಾರೇನೇ ಹೇಳಲಿ; ಮೋದಿ ಧನಾತ್ಮಕ ನಾಯಕ ಅಲ್ಲವೇ ಅಲ್ಲ. ಆತನದು ಋಣಾತ್ಮಕ ಭಾವೋದ್ವೇಗ ಎಬ್ಬಿಸುವ ಟೊಳ್ಳು ಮಾತುಗಾರಿಕೆ. ಕೋಮು ಕುತಂತ್ರ ಇಲ್ಲದೆ ಆತನಿಂದ ರಾಜಕಾರಣ ಮಾಡಲು ಸಾಧ್ಯವೇ ಇಲ್ಲ. ಪ್ರಗತಿ, ದೇಶಾಭಿವೃದ್ಧಿ ಪಣತೊಟ್ಟು ಆತನಿಂದ ಚುನಾವಣೆಗಳ ಗೆಲ್ಲಲು ಸಾಧ್ಯವೇ ಇಲ್ಲ. ಆತನದು ಹುಸಿ ಅಭಿವೃದ್ಧಿಯ ಮೇಲುಹೊದಿಕೆ ಸುತ್ತಿದ ಮತಾಂಧ ಮಸಲತ್ತು. ಆತ ಬಹುಜನ ಮೆಚ್ಚಿನ ನಾಯಕನೇ ಆಗಿದ್ದಿದ್ದರೆ ಉತ್ತರ ಪ್ರದೇಶದಲ್ಲಿ ಬಿಜೆಪಿ ಬರೀ 39.7 ಪ್ರತಿಶತ ಮತಕ್ಕೇ ನಿಂತು ಏದುಸಿರು ಬಿಡುತ್ತಿತ್ತಾ?

ಉತ್ತರ ಪ್ರದೇಶದಲ್ಲಿ ಎಸ್‌ಪಿಯ ಅಖಿಲೇಶ್ ಯಾದವ್, ಬಿಎಸ್‌ಪಿಯ ಮಾಯಾವತಿ ಮತ್ತು ಕಾಂಗ್ರೆಸ್‌ನ ರಾಹುಲ್ ಗಾಂಧಿ ತಮ್ಮೆಲ್ಲ ಒಣ ಪ್ರತಿಷ್ಠೆ ಹಮ್ಮುಬಿಮ್ಮು ಬಿಟ್ಟು ಕೋಮು ಕ್ರೌರ್ಯದ ರಾಜಕಾರಣದ ವಿರುದ್ಧ ಒಂದಾಗಿ ನಿಂತಿದ್ದರೆ ಇವತ್ತು ರಾಷ್ಟ್ರ ರಾಜಕಾರಣದ ದಿಕ್ಕುದೆಸೆಯೇ ಬದಲಾಗುತ್ತಿತ್ತು. ಮಹಾ ಮೈತ್ರಿ ಘಟಿಸಿದ್ದರೆ ಉ.ಪ್ರದೇಶದಲ್ಲಿ ಮೋದಿ-ಶಾ ಮೋಡಿ ನಡೆಯುವುದಿರಲಿ, ಮಕಾಡೆ ಮಲಗುವುದು ಖಂಡಿತವಾಗಿತ್ತು. ಒಟ್ಟೂ 403 ಕ್ಷೇತ್ರಗಳಲ್ಲಿ ಬಿಜೆಪಿ ಪಡೆದಿರುವುದು 324 ಸೀಟು. ಇದು ತಾಂತ್ರಿಕವಾಗಿ ಬಿಜೆಪಿಯ ಘನ ವಿಜಯ; ನೈತಿಕವಾಗಿ ಘೋರ ಅಧಃಪತನ. ಎಸ್‌ಪಿ-ಕಾಂಗ್ರೆಸ್ ಕೂಟ 54 ಕಡೆ ಗೆದ್ದರೆ, ಬಿಎಸ್‌ಪಿ 19ಕ್ಕೆ ಸೀಮಿತವಾಗಿದೆ. ಈ ಮೂರೂ ಪಕ್ಷಗಳು ಒಂದಾಗಿ ಅಖಾಡಕ್ಕೆ ಇಳಿದಿದ್ದರೆ 271 ಕ್ಷೇತ್ರ ಬಾಚುವ ದೊಡ್ಡ ದಿಗ್ವಿಜಯವನ್ನೇ ಮಾಡುತ್ತಿದ್ದವೆಂಬುದನ್ನು ಫಲಿತಾಂಶ ವಿಶ್ಲೇಷಿಸಿದರೆ ಎಂಥ ದಡ್ಡನಿಗೂ ಅರ್ಥವಾಗುತ್ತದೆ.

ಎಸ್‌ಪಿ-ಕಾಂಗ್ರೆಸ್ ಕೂಟ 203 ಕ್ಷೇತ್ರದಲ್ಲಿ ಎರಡನೇ ಸ್ಥಾನದಲ್ಲಿದ್ದರೆ, 116 ಕಡೆ ಮಾಯಾವತಿ ಬಳಗ ದ್ವಿತೀಯ ಸ್ಥಾನ ಪಡೆದಿದೆ! 198 ಅಸೆಂಬ್ಲಿ ಕ್ಷೇತ್ರದಲ್ಲಿ ಎಸ್‌ಪಿ-ಕಾಂಗ್ರೆಸ್ ಮತ್ತು ಬಿಎಸ್‌ಪಿ ಅಭ್ಯರ್ಥಿಗಳು ಪಡೆದ ಮತ ಒಟ್ಟುಗೂಡಿಸಿದರೆ ಅದು ಬಿಜೆಪಿಯ ವಿಜಯಗಳಿಗಿಂತ ಜಾಸ್ತಿ. ಈ 198ಕ್ಕೆ ಎಸ್‌ಪಿ ಕೂಟದ 54, ಬಿಎಸ್‌ಪಿಯ 19 ಸೇರಿದರೆ 271 ಆಗುತ್ತದೆ. ಅಂದರೆ ಬಿಜೆಪಿ ತಿಪ್ಪರಲಾಗ ಹೊಡೆದರೂ 125 ಸೀಟು ದಾಟುತ್ತಿರಲೇ ಇಲ್ಲ. ಇದೇ ಮೋದಿ ಅಸಲೀ ಮುಖ. ವಿರೋಧಿ ಕೂಟಕ್ಕೆ ಅಜಿತ್ ಸಿಂಗ್‌ರ ಲೋಕದಳದ 10 ಸೇರಿಸಿದರೆ ಮಹಾಮೈತ್ರಿಗೆ ಪ್ರಚಂಡ ವಿಜಯವಾಗುತ್ತಿತ್ತು!

ಶೇಕಡಾವಾರು ಮತಗಳ ಲೆಕ್ಕಾಚಾರ ಹಾಕಿದರೂ ಮೋದಿ-ಶಾ ಬಿಜೆಪಿಯದು ಕಳಪೆ ಸಾಧನೆಯೇ. ಮೋದಿ ಮಂಕುಬೂದಿ ಆಟಕ್ಕೆ ದಕ್ಕಿರುವುದು ಕೇವಲ ಶೇ.39.7 ಮತ ಮಾತ್ರ. ಎಸ್‌ಪಿ ಕೂಟ ಮತ್ತು ಬಿಎಸ್‌ಪಿಗೆ ಬಿದ್ದಿರುವ ಮತಗಳು ಶೇ.50.2! ಅಂದರೆ ಮೋದಿ



ಬೇಡವೆನ್ನುವವರು ಉತ್ತರ ಪ್ರದೇಶದ ಮತದಾರರಲ್ಲಿ ಅರ್ಧಕ್ಕಿಂತ ಹೆಚ್ಚಿದ್ದಾರೆಂದಾಯ್ತು. ಇದರರ್ಥ ಇಷ್ಟೇ; ಬಿಜೆಪಿ (ಎಂ) (ಸಂಘಿಗಳ ಕಣ್ಣು ಕೆಂಪಾಗಿಸಿರುವ ಮೋದಿ ಬಣ) ಸಹಿಸದ ಜನರೇ ಹೆಚ್ಚಿದ್ದಾರೆ ದೇಶಾದ್ಯಂತ!!

ಈಗ ಹೇಳಿ; ಮೋದಿ ಅಜೇಯ ಮೋಡಿಗಾರನಾ? ಬೋಗಸ್ ಜಾದೂಗಾರನಾ? ವಿರೋಧಿಗಳ ಅನೈತಿಕತೆಯ ದೌರ್ಬಲ್ಯದಿಂದಾಗಿ ಧೀರೋದಾತ್ತ ಮುಂದಾಳಿನ ಭ್ರಮೆ ಮೂಡಿಸುತ್ತಿರುವ ಪೊಳ್ಳು ಪುಢಾರಿಯಾ? ಇದು ಈ ದೇಶದ ದುರಂತ ವಾಸ್ತವ!!

■ ಶುದ್ಧೋಧನ







◀◀ ದೆಹಲಿಯಲ್ಲಿ

... ರಾಜಕೀಯ, ಹೋರಾಟ, ಇತ್ಯಾದಿಗಳ ಬಗ್ಗೆ ...ಡಿದ ಮೇಲೆ ವಿಶ್ವಾಸ್ "ಕಳೆದ ವರ್ಷದ ವಿವಾದದ ... ನಿನ್ನ ಬದುಕು ಬದಲಾಗಿದೆಯೇ?" ಎಂದು ...ನನ್ನು ಕೇಳಿದ. "ಬದಲಾಗಿದೆ ಮತ್ತು ಬದಲಾಗಿಲ್ಲ. ...ಗಡೆ ನನ್ನ ಚಲನವಲನದ ಮೇಲೆ ನಿಗಾ ...ವರಿದ್ದಾರೆ. ಆದ್ದರಿಂದ ಅಲ್ಲಿ ನನ್ನ ಬದುಕು ...ಗಿದೆ. ಆದರೆ ಇಲ್ಲಿ ವಿವಿಯ ಆವರಣದಲ್ಲಿ ಯಾವ ...ವೂ ಆಗಿಲ್ಲ. ಇಲ್ಲಿ ನಾನು ಹಿಂದಿನಂತೆಯೇ ಇದ್ದೇನೆ. ... ಚರ್ಚೆ, ಸಮಯ ಸಿಕ್ಕಾಗ ಕೇರಂ ಆಟ, ಇದೆಲ್ಲವೂ ..." ಎಂದ. "ಆದರೆ ಇತರೆ ವಿದ್ಯಾರ್ಥಿಗಳು ನಿನಗೆ ...ಮರ್ಯಾದೆ ಕೊಡುತ್ತಾರೆ" ಎಂದ ವಿಶ್ವಾಸ್. "ಅದಕ್ಕೆ ... ನಾನು ಸಂಘದ ಅಧ್ಯಕ್ಷ ಆಗಿದ್ದರಿಂದ ಮತ್ತು ... ವಿದ್ಯಾರ್ಥಿ ಆಗಿರುವುದರಿಂದ, ಅಷ್ಟೇ" ಎಂದ. ... ಹೊತ್ತಿಗೆ ಬಿಳಿಮಲೆ ಅವರ ಫೋನ್ ಬಂತು. ...ಂದಿಗೆ ಜೆಎನ್‌ಯುನಲ್ಲಿ ಓದುತ್ತಿರುವ ಕರ್ನಾಟಕದ ... ವಿದ್ಯಾರ್ಥಿಗಳು ನನಗಾಗಿ ಕಾಫಿ ಬೋರ್ಡ್ ನಡೆಸುವ ...ಟೆಲ್‌ನಲ್ಲಿ ಕಾಯುತ್ತಿದ್ದರು. ಆಗ ಉಮರ್‌ನ ...ಸಪಾಯಿತು. "ಆರು ಗಂಟೆಗೆ ಬರುತ್ತೇನೆ ಎಂದು ...ಶ್ರೀ ಅವರಿಗೆ ಹೇಳಿದ್ದೆ. ಅಲ್ಲಿಗೆ ಹೋಗಿ ಒಂದು ...ಟುಲ್ಲಿ ಬರುತ್ತೇನೆ. ನನಗೆ ಕಾಯುತ್ತೀಯಾ?" ಅಂತ ...ನನ್ನು ಕೇಳಿದೆ. "ನಾನು ನಿಮ್ಮನ್ನು ಇಷ್ಟು ಹೊತ್ತು ...ದ್ದೇನೆ. ನೀವು ಹೋಗಿ ಬನ್ನಿ, ನಾನು ನಿಮಗೆ ...ತ್ತೇನೆ" ಎಂದ.

...ರ್ ಅವರ ಸಾಕ್ಷ್ಯಚಿತ್ರವನ್ನು ಕಾಪಿ ಮಾಡಲು ...ಗೆ ಪೆನ್ ಡ್ರೈವ್ ಕೊಟ್ಟು ಬಿಳಿಮಲೆ ಇದ್ದಲ್ಲಿಗೆ ... ಅಲ್ಲಿ ಕರ್ನಾಟಕದ ಹಲವು ವಿದ್ಯಾರ್ಥಿಗಳೊಂದಿಗೆ ...ಲ್ಲ ಸಂಘಪರಿವಾರ ಮಾಡುತ್ತಿರುವ ಹೊಲಸು ... ಮತ್ತು ಅದನ್ನು ನಿಯಂತ್ರಿಸುವಲ್ಲಿ ...ತ್ತಿರುವ ಕಾಂಗ್ರೆಸ್ ಸರ್ಕಾರದ ಬಗ್ಗೆ ಒಂದು ಗಂಟೆ ಚರ್ಚೆ ನಡೆಯಿತು. ಅದು ಮುಗಿಯುವ ಮುನ್ನವೇ ಅಲ್ಲಿಗೆ ಕನ್ಹಯ್ಯ ಮತ್ತು ಉಮರ್ ಬಂದರು. ಅಷ್ಟು ಹೊತ್ತಿಗೆ ಹೋಟೆಲ್ ಬಂದ್ ಆಗಿದ್ದರಿಂದ ನಾವೆಲ್ಲ ಹೊರಗಡೆ ನೆಲದ ಮೇಲೆ ಕೂತು ನಮ್ಮ ಮಾತುಕತೆ ಮುಂದುವರಿಸಿದೆವು. ಈ ಹಿಂದೆ ಉಮರ್ ಡೆಲ್ಲಿ ಸ್ಟೂಡೆಂಟ್ಸ್ ಆರ್ಗನೈಸೇಶನ್ (ಡಿಎಸ್‌ಒ) ಸದಸ್ಯನಾಗಿದ್ದ. ಆದರೆ ಭಿನ್ನಾಭಿಪ್ರಾಯಗಳಿಂದಾಗಿ ಅದರಿಂದ ಹೊರಬಂದು ಈಗ ಭಗತ್ ಸಿಂಗ್-ಅಂಬೇಡ್ಕರ್ ಸ್ಟೂಡೆಂಟ್ಸ್ ಆರ್ಗನೈಸೇಶನ್ (ಬಿಎಎಸ್‌ಒ) ಎಂಬ ಹೊಸ ತಂಡವನ್ನು ಪ್ರಾರಂಭಿಸಿದ್ದಾನೆ. ಆತನಿಗೆ ಇದ್ದ ಭಿನ್ನಾಭಿಪ್ರಾಯಗಳ ಬಗ್ಗೆ ಪ್ರಶ್ನಿಸಲಾರಂಭಿಸಿದೆ. ಆಗ ಕನ್ಹಯ್ಯ "ನೀನು ಬೇರೆ ಬೇರೆಯವರಿಗೆ ಬೇರೆ ಬೇರೆ ಪ್ರಶ್ನೆಗಳನ್ನು ಕೇಳುತ್ತಿದ್ದೀಯ. ಪ್ರಾಯಶಃ ನಾನೇ ನಿನಗೆ ತುಂಬಾ ನಿರಾಶೆ ಮಾಡಿರಬಹುದು" ಎಂದು ಗೊಣಗಿದ. ಅಲ್ಲೇ ಒಂದೆರೆಡು ಗಂಟೆ ಮಾತುಕತೆ ಮುಂದುವರೆಯಿತು. ಹಿಂದಿನ ದಿನ ಕನ್ಹಯ್ಯ ರಾತ್ರಿಯ ಊಟಕ್ಕೆ ಬೇರೆಯವನ್ನು ಭೇಟಿ ಆಗುತ್ತಿದ್ದೇನೆ ಎಂದಿದ್ದ. ಆದರೆ ಈಗ "ನಾನು ಇವತ್ತು ನಿಮಗೆ ಊಟ ಕೊಡಿಸಬೇಕು ಅಂದುಕೊಂಡಿದ್ದೆ" ಎಂದ. "ಅಲ್ಲಾ ಮಾರಾಯ, ನೆನ್ನೆ ಆಗಲ್ಲ ಎಂದಿದ್ದೆ" ಅಂದೆ. "ಅದನ್ನು ಕ್ಯಾನ್ಸಲ್ ಮಾಡಿದೆ" ಅಂದ. "ಮೊದಲೇ ನೀನು ಹೇಳಬೇಕಿತ್ತು, ಈಗ ನನ್ನ ಹೊಟ್ಟೆ ತುಂಬಿದೆ" ಅಂದೆ. "ಹೋಗಲಿ ವಿವಿಯಲ್ಲಿ ವಾಕ್ ಮಾಡೋಣ" ಅಂದ. ಕತ್ತಲೆಯಲ್ಲೇ ವಿವಿಯ ಅಡ್ಮಿನ್ ಬ್ಲಾಕ್ ಹತ್ತಿರ ಹೋದೆವು. ದಾರಿ ಮಧ್ಯೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದ ಇಬ್ಬರು ನಮ್ಮನ್ನು ನೋಡಿ ಬ್ರೇಕ್ ಹಾಕಿದರು. "ಅವರು ಎಬಿವಿಪಿಯವರು. ಕನ್ಹಯ್ಯ ಮತ್ತು ಉಮರ್ ಜೊತೆ ಯಾರಿವರು ಹೊಸಬರು ಎಂದು ಅವರಿಗೆ ಅಚ್ಚರಿ ಆಗಿರಬೇಕು" ಎಂದು ಉಮರ್ ನಕ್ಕ.

ಅಷ್ಟು ಹೊತ್ತಿಗೆ ರಾತ್ರಿ ಹತ್ತು ಗಂಟೆ ಹತ್ತಿರವಾಗುತ್ತಿತ್ತು. ನಾನು "ಅಯ್ಯೋ, ಪ್ರಖ್ಯಾತ ಗಂಗಾ ಡಾಬಾವನ್ನೇ ನೋಡಲಾಗಲಿಲ್ಲವಲ್ಲ" ಎಂದು ಉದ್ಗಾರವೆತ್ತಿದೆ. ಅಲ್ಲಿಗೇ ಹೋಗೋಣ ಎಂದು ನಿರ್ಧರಿಸಿದೆವು. "ನಿನಗೆ ಊಟ ಕೊಡಿಸಲಿಲ್ಲ, ಮಾವಿನ ಜ್ಯೂಸ್ ಆದರೂ ಕೊಡಿಸುತ್ತೇನೆ" ಎಂದ ಕನ್ಹಯ್ಯ. "ಈಗ ನಿಮ್ಮಿಬ್ಬರಿಗೂ ಎಷ್ಟು ಹಣ ಫೆಲೋಶಿಪ್ ಮೂಲಕ ಸಿಗುವುದು?" ಎಂದು ಕೇಳಿದೆ. "ಅದು ನಾಲ್ಕು ವರ್ಷಗಳಿಗೆ ಮಾತ್ರ. ನಾವಿಬ್ಬರೂ ಈಗ ಐದನೆ ವರ್ಷ ಮಾಡುತ್ತಿರುವುದರಿಂದ ಫೆಲೋಶಿಪ್ ಸಿಗುತ್ತಿಲ್ಲ" ಎಂದ ಉಮರ್. "ಹಾಗಾದರೆ ಹೇಗೆ ಖರ್ಚು ವೆಚ್ಚಗಳನ್ನು ನಿಭಾಯಿಸುತ್ತಿದ್ದೀರಿ?" ಎಂದೆ. "ಅಷ್ಟ ಮಿತ್ರರು, ಸಹೃದಯಿಗಳ ನೆರವು ಇದೆ. ಜೆಎನ್‌ಯುನಲ್ಲಿ ಖರ್ಚು ತುಂಬಾ ಕಡಿಮೆ" ಎಂದ ಉಮರ್. "ನನ್ನ ಪುಸ್ತಕದ ಗೌರವ ಧನವನ್ನು ಆಧರಿಸಿದ್ದೇನೆ" ಎಂದ ಕನ್ಹಯ್ಯ. ಜ್ಯೂಸ್ ಕುಡಿಯುವ ಹೊತ್ತಿಗೆ ಟ್ಯಾಕ್ಸಿ ಬಂತು. ಇಬ್ಬರಿಗೂ ಒಂದಿಷ್ಟು ಹಣ ಕೊಟ್ಟೆ. ಅವರಿಬ್ಬರೂ "ಬೇಡ ಬೇಡ" ಅಂದರೂ "ನಾನು ನಿಮ್ಮ 'ದತ್ತು' ಅಮ್ಮ. ಸುಮ್ಮನೆ ತೆಗೆದುಕೊಳ್ಳಿ" ಎಂದೆ. ಉಮರನಿಗೆ ಖರೀದಿಸಿದ್ದ ಜೀನ್ಸ್ ಮತ್ತು ಶರ್ಟ್ ಕೊಟ್ಟೆ. "ಇದು ನನಗೆ ಇಷ್ಟ" ಎಂದ. "ನನಗೂ ಸಾಕಷ್ಟು ಬಟ್ಟೆ ಕೊಟ್ಟಿದ್ದಾರೆ. ಅವನ್ನೆಲ್ಲ ಯಾರಾದರು ನೋಡಿದರೆ ಇವನಿಗೆ ಅದೆಲ್ಲಿಂದ ಇಷ್ಟೊಂದು ಹೊಸ ಬಟ್ಟೆ ಬಂತು ಅಂತ ಹೊಟ್ಟೆಕಿಚ್ಚು ಪಡುತ್ತಾರೆ" ಎಂದು ಕನ್ಹಯ್ಯ ನಕ್ಕ.

ಅವರಿಬ್ಬರನ್ನು ಅಪ್ಪಿ, ಬೈ ಹೇಳಿ ಹೊರಟೆ. ಮಾರನೆ ದಿನ ಏರ್‌ಪೋರ್ಟಿನಿಂದ "ಜೆಎನ್‌ಯುವಿಗೆ ನನ್ನ ಮೊದಲ ಭೇಟಿಯನ್ನು ಸ್ಮರಣೀಯ ಮಾಡಿದ್ದಕ್ಕೆ ನಿಮಗೆಲ್ಲ ಧನ್ಯವಾದಗಳು. ಎಂದೆಂದಿಗೂ ನಿಮ್ಮ ಹೋರಾಟದೊಂದಿಗೆ ನಾನಿದ್ದೇನೆ" ಎಂದು ಎಲ್ಲರಿಗೂ ಎಸ್‌ಎಮ್‌ಎಸ್ ಕಳುಹಿಸಿದೆ. ಅದಕ್ಕೆ ಉಮರ್ "ಇಟ್ ವಾಸ್ ಅಮೇಜಿಂಗ್ ಮೀಟಿಂಗ್ ಯು. ಬೆಂಗಳೂರಿನಲ್ಲಿ ಮುಂದೊಂದು ದಿನ ಭೇಟಿ ಆಗುವ" ಎಂದು ಪ್ರತಿಕ್ರಿಯಿಸಿದ.

ಹೀಗೆ ಎರಡು ದಿನ ಹಿರಿಯ ಹೋರಾಟಗಾರರೊಂದಿಗೆ ಮತ್ತು ಇನ್ನೆರಡು ದಿನ ಹೊಸ ತಲೆಮಾರಿನ ಹೋರಾಟಗಾರರೊಂದಿಗೆ ಕಳೆದೆ. ಮಧ್ಯೆ ಚಿಂತಕರು ಮತ್ತು ಬರಹಗಾರರ ಜೊತೆಯೂ ಚರ್ಚೆಗೆ ಸಮಯ ಸಿಕ್ಕಿತು. ಎಲ್ಲರದ್ದೂ ಒಂದೇ ಆಶಯ. 2019 ರಲ್ಲೂ ಮೋದಿ ಗೆಲ್ಲಬಹುದು. ಆದರೆ ಅದೆಂತಹದ್ದೇ ಸವಾಲುಗಳು, ಸಮಸ್ಯೆಗಳು ಮತ್ತು ಬಿಕ್ಕಟ್ಟುಗಳು ಎದುರಾದರೂ ನಾವೆಲ್ಲರೂ ಧೃತಿಗೆಡದೆ, ನಿರಾಶರಾಗದೆ, ಭೀತಿಗೆ ಬಲಿಯಾಗದೆ ಪರಸ್ಪರಿಗೆ ನೆರವು ನೀಡುತ್ತಾ, ಬೆಂಬಲ ಕೊಡುತ್ತಾ ಒಗ್ಗಟ್ಟಾಗಿ ನಮ್ಮ ದೇಶದಲ್ಲಿ ಸಮಾನ, ಜಾತ್ಯತೀಯ, ಸಮ್ಮತಿಯ ಸಮಾಜ ನಿರ್ಮಾಣವಾಗುವಂತೆ ಶ್ರಮಿಸುವುದು... ■



ಅಂಗನವಾಡಿ ಮಹಿಳೆಯರ ಹೋರಾಟದ ಕಥನ

ನಾಡನ್ನು ಮತ್ತು ಪ್ರಭುತ್ವವನ್ನೂ ಎಚ್ಚರಿಸುವ ಹಾಗೆ ಅಂಗನವಾಡಿ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ದೊಡ್ಡ ಧ್ವನಿಯನ್ನು ಎತ್ತಿದ್ದಾರೆ. ಹೋರಾಟಗಾರ್ತಿ ವರಲಕ್ಷ್ಮಿ ಮೊದಲಾದವರು ತಮ್ಮ ನಿರಂತರ ಹೋರಾಟದ ಫಲವಾಗಿ ಚಳವಳಿಯನ್ನು ಈ ತುದಿಗೆ ತಂದು ನಿಲ್ಲಿಸಿದ್ದಾರೆ. ಇದೀಗ ಅಂಗನವಾಡಿ ಮಹಿಳೆಯರ ಹೋರಾಟಕ್ಕೆ ಜನಬೆಂಬಲವೂ, ಸಂಘಟನೆಗಳ ಬೆಂಬಲವೂ ಸಿಗುತ್ತಿದೆ. ಹೀಗೆ ನಾಲ್ಕು ದಶಕಗಳಿಂದ ದುಡಿಯುತ್ತಿರುವ ಅಂಗನವಾಡಿ ಮಹಿಳೆಯರ ಹೋರಾಟಕ್ಕೆ ಒಂದು ಚರಿತ್ರೆಯೇ ಇದೆ.

ನನಗೆ ಅರಿವು ಬಂದಾಗಿನಿಂದಲೂ 'ಅಂಗನವಾಡಿ' ಎನ್ನುವ ಪದ ನನ್ನೊಳಗೆ ಭಿನ್ನ ರೀತಿಯಲ್ಲಿ ರೂಪಾಂತರಗೊಂಡಿದೆ. ಅಂಗನವಾಡಿ ಕಟ್ಟಡವೇ ನಮ್ಮ ವಾಸದ ಮನೆಯೂ, ನನ್ನವ್ವನೇ ಅಂಗನವಾಡಿ ಕಾರ್ಯಕರ್ತೆಯೂ ಆಗಿದ್ದರಿಂದ ಬಾಲ್ಯದ ನೆನಪುಗಳಲ್ಲಿ ಅದನ್ನು ಬಿಡಿಸಿ ನೋಡುವುದೇ ಕಷ್ಟ. ತುಂಬಾ ಕಡಿಮೆ ಸಂಬಳಕ್ಕೆ ಕಡುಕಷ್ಟದ ಜೀವನ ನಡೆಸುವ ಅಂಗನವಾಡಿ ಮಹಿಳೆಯರ ಜೀವನ ಇಂದಿಗೂ ಸುಧಾರಣೆ ಕಂಡಿಲ್ಲ. ನನ್ನ ಬಾಲ್ಯದಿಂದಲೂ ಅವರುಗಳು ತಮ್ಮ ಸಂಬಳವನ್ನು ಹೆಚ್ಚಿಸಿಕೊಳ್ಳಲು, ನೌಕರಿಯನ್ನು ಕಾಯಂ ಮಾಡಲು ನಿರಂತರ ಹೋರಾಟ ಮಾಡುತ್ತಲೇ ಬಂದಿರುವುದನ್ನು ಕಂಡಿದ್ದೇನೆ. ಆದರೆ ಅವರ ಕನಸುಗಳು ಮಾತ್ರ ಈಗಲೂ ಕನಸಾಗಿಯೇ ಉಳಿದಿವೆ.


ಬಹುಶಃ ಈ ನೌಕರರು ಮಹಿಳೆಯರೇ ಆಗಿದ್ದರಿಂದ ಅವರ ಅಭದ್ರತೆ ಈಗಲೂ ಮುಂದುವರಿದಿದೆಯೇ ಎನ್ನುವ ಪ್ರಶ್ನೆಯೂ ನನ್ನನ್ನು ಹಲವು ಬಾರಿ ಕಾಡಿದೆ. ಕಳೆದ ನಾಲ್ಕು ದಶಕಗಳಿಂದಲೂ ದುಡಿಯುತ್ತಿರುವ ಅಂಗನವಾಡಿ ನೌಕರರ ಜಾಲ ಭಾರತದ ಹಳ್ಳಿಹಳ್ಳಿಗಳಿಗೂ, ಈ ದೇಶದ ಪ್ರತಿ ಮಗು ತಾಯಿಯ ಜತೆಗೂ ಸಂಬಂಧ ಬೆಸೆದುಕೊಂಡಿದೆ. ದೇಶದ ಜನನ ಮರಣದ ದಾಖಲಾತಿಯಿಂದ ಮೊದಲುಗೊಂಡು ಹಲವು ಬಗೆಯ ಗ್ರಾಮಜಗತ್ತಿನ ಮಾಹಿತಿಕೋಶ ಅಂಗನವಾಡಿಗಳಾಗಿವೆ. ಹಾಗಾಗಿಯೇ ಭಾರತದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ವಿಶ್ವದಲ್ಲಿಯೇ ಮಾದರಿಯಾದದ್ದೆಂದು ಸ್ವತಃ ವಿಶ್ವಸಂಸ್ಥೆ ಸಕಾರಾತ್ಮಕ ಅಭಿಪ್ರಾಯ ಹೊಂದಿದೆ.

ಭಾರತದಲ್ಲಿ ಕೇಂದ್ರ ಸರಕಾರದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು **INTEGRATED CHILD DEVELOPMENT SERVICES (ICDS) SCHEME** (ಶಿಅಯೋ, ICDS) 1975 ರಿಂದಲೂ ಕರ್ನಾಟಕದಲ್ಲಿ ಕ್ರಿಯಾಶೀಲವಾಗಿದೆ. ಈ ಯೋಜನೆಯ ಪ್ರಾಥಮಿಕ ಘಟಕಗಳಾದ ಅಂಗನವಾಡಿಯ ಮೂಲಕ ಮುಖ್ಯವಾಗಿ 6 ಸೇವೆಗಳನ್ನು ಪೂರೈಸುವ ಕೆಲಸ ನಡೆಯುತ್ತಿದೆ. ಅವುಗಳೆಂದರೆ, ಪೂರಕ ಪೌಷ್ಟಿಕ ಆಹಾರ, ಚುಚ್ಚುಮದ್ದು, ಆರೋಗ್ಯ ತಪಾಸಣೆ, ಮಾಹಿತಿ ಸೇವೆ, ತಾಯಂದಿರಿಗೆ ಆರೋಗ್ಯ ಮತ್ತು ಪೌಷ್ಟಿಕ ಆಹಾರದ ಬಗ್ಗೆ ಶಿಕ್ಷಣ ಹಾಗೂ 3-6 ವರ್ಷದ ಮಕ್ಕಳಿಗೆ ಅನೌಪಚಾರಿಕ ಶಾಲಾಪೂರ್ವ ಶಿಕ್ಷಣ ನೀಡಲಾಗುತ್ತಿದೆ. ರಾಜ್ಯದಲ್ಲಿ 61187 ಅಂಗನವಾಡಿಗಳು, 3331 ಮಿನಿ ಅಂಗನವಾಡಿಗಳನ್ನು ಒಳಗೊಂಡಂತೆ ಒಟ್ಟು 64558 ರಷ್ಟು ಅಂಗನವಾಡಿ ಕೇಂದ್ರಗಳ ಪೈಕಿ 40235 ರಷ್ಟು ಸ್ವಂತ ಕಟ್ಟಡವನ್ನು ಹೊಂದಿವೆ. ಕರ್ನಾಟಕದಲ್ಲಿ ಒಟ್ಟು ಒಂದು ಲಕ್ಷದ ಇಪ್ಪತ್ತೊಂದು ಸಾವಿರದ ಇನ್ನೂರ ಇಪ್ಪತ್ತೈದರಷ್ಟು ನೌಕರರು ಈ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ.

* * *

ಸಹಜವಾಗಿ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ವರ್ಷಕ್ಕೆ ನಾಲ್ಕೈದು ಬಾರಿ ಸ್ಟ್ರೈಕ್ ಮಾಡುತ್ತಾರೆ. ಇದು ತಮ್ಮ ಬೇಡಿಕೆಗಳನ್ನು ಈಡೇರಿಸುವ ಹಕ್ಕೊತ್ತಾಯದ ನಿರಂತರ ಚಳವಳಿ. ಹೀಗೆ ನಿಲ್ಲದ ಹೋರಾಟ ಮಾಡಿದ ಫಲವೆಂದರೆ, ಸದ್ಯಕ್ಕೆ ಉಸಿರಾಡುವಷ್ಟು ಸಂಬಳ ಸಿಗುತ್ತಿದೆ. ಇಂತಹ ಚಳವಳಿಗೆ ಬಾಲ್ಯದಲ್ಲಿ ಅವ್ವನ ಜತೆ ಹತ್ತಾರು ಬಾರಿ ಹೋಗಿದ್ದೇನೆ. ಇವುಗಳನ್ನು ನೆನಪಿಸಿಕೊಂಡರೆ ಅವು ಹೋರಾಟದ ಕಥನದಂತಿರದೆ, ಪ್ರವಾಸ ಕಥನದಂತಿರುವುದು ಸೋಜಿಗ.

ಸಾಮಾನ್ಯವಾಗಿ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ರಾಜ್ಯಮಟ್ಟದ ಸಂಘಟನೆಗಳಿವೆ. ಅವುಗಳು ಕಾಲಕಾಲಕ್ಕೆ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಸ್ಟ್ರೈಕ್‌ಗಳನ್ನು ನಡೆಸುತ್ತಾ ಬಂದಿವೆ. ಈ ಬಗೆಯ ಚಳವಳಿಯ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಜವಾಗಿ ತಿಳುವಳಿಕೆ ಕಡಿಮೆ. ಸಂಘದವರು ನಮ್ಮ ಬಗ್ಗೆ ಏನೋ ಒಳ್ಳೆ ಕೆಲಸ ಮಾಡುತ್ತಾರೆ ಎಂದಷ್ಟೆ ಭಾವಿಸಿರುತ್ತಾರೆ. ಕಾರಣ ಇವರು ಸಾಮಾನ್ಯವಾಗಿ ಎಸ್.ಎಸ್.ಎಲ್.ಸಿ ಓದಿದವರು. ಬಹುಪಾಲು ಪೆಚ್ಚು ಓದದವರು. ಕೆಲವರಿಗೆ ತಾವು ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದೇವೆ ಎನ್ನುವುದರ ಅರಿವಿಲ್ಲ, ಕಾರಣ ನಾವು ಮಾಡುವ ಕೆಲಸಕ್ಕೆ ಇಷ್ಟು ಸಂಬಳವೇ ಸರಿಯೆಂದು ತಿಳಿದಿದ್ದಾರೆ. ಇವರಿಗೆ ತಮ್ಮ ಕೆಲಸದ ಮಹತ್ವ, ಅದಕ್ಕೆ



ಸಿಗಬೇಕಾದ ನ್ಯಾಯಯುತ ಸಂಬಳ ಮುಂತಾದ ಸಂಗತಿಗಳ ಬಗ್ಗೆ ಜಾಗೃತಿ ಕಡಿಮೆ. ಚಳವಳಿಗಾರರು ಈ ಬಗ್ಗೆ ಜಾಗೃತಿ ಮೂಡಿಸುತ್ತಾರಾದರೂ ಅದು ಕೆಲವರಿಗೆ ಸೀಮಿತವಾಗಿರುತ್ತದೆ.

ಕಡಿಮೆ ಸಂಬಳ, ಕಾಯಂ ಅಲ್ಲದ ವೃತ್ತಿ ಕೆಲವೊಮ್ಮೆ ಈ ನೌಕರರ ಪ್ರತಿರೋಧವನ್ನು ತಗ್ಗಿಸುತ್ತದೆ. ಜಾಗೃತಿ ಇರುವ ಕೆಲವರಾದರೂ ತಮ್ಮ ಮೇಲಿನ ಸೂಪರ್‌ವೈಸರ್ ಮೇಲಾಗಲಿ, ಸಿಡಿಪಿಓ ಮೇಲಾಗಲಿ ದೌರ್ಜನ್ಯದ ವಿರುದ್ಧ ಧ್ವನಿ ಎತ್ತದಷ್ಟು ಭಯಗ್ರಸ್ತರಾಗಿದ್ದಾರೆ. ಹಾಗಾಗಿ ಎಷ್ಟೋ ಬಾರಿ ಸೂಪರ್‌ವೈಸರ್‌ಗಳೇ ಅಂಗನವಾಡಿ ಕಾರ್ಯಕರ್ತೆಯರ ಶೋಷಕರಾಗಿರುತ್ತಾರೆ. ಇನ್ನು ಕೆಲವು ಕಡೆ ಸಿಡಿಪಿಓ ಶೋಷಣೆ ಮಾಡುತ್ತಾರೆ. ಇಂತಹ ಅಸಹಾಯಕತೆಯ ಕಾರಣಕ್ಕೆ ಕೆಲವು ಕಾರ್ಯಕರ್ತೆಯರು ತಮ್ಮ ಸಹಾಯಕಿಯ ಪಾಲಿಗೆ ಶೋಷಕಿಯಾಗುವ ಸಾಧ್ಯತೆಯಿದೆ. ಇನ್ನು ಕೆಲವೆಡೆಗಳಲ್ಲಿ ಸಹಾಯಕಿ ಊರವರ ಜತೆ ಸೇರಿಕೊಂಡು ಕಾರ್ಯಕರ್ತೆಯನ್ನು ಶೋಷಿಸುವ ಘಟನೆಗಳೂ ಇಲ್ಲದಿಲ್ಲ.

* * *

2015ರ ನವೆಂಬರ್ 28 ರಿಂದ 30 ರವರೆಗೆ ಸಿಐಟಿಯು ಸಂಘಟನೆಯು 6 ನೇ ಅಂಗನವಾಡಿ ನೌಕರರ ರಾಜ್ಯ ಸಮ್ಮೇಳನ 'ಐಸಿಡಿಎಸ್ ಯೋಜನೆಗೆ ಅನುದಾನ ಕಡಿತ ವಿರೋಧಿಸಿ, ಅಂಗನವಾಡಿ ಕೇಂದ್ರಗಳ ಕಾಯಂಗೆ ಒತ್ತಾಯಿಸಿ' ಎನ್ನುವ ಘೋಷ ವಾಕ್ಯದಡಿ ನಡೆಯಿತು. ಈ ಸಮ್ಮೇಳನ ಈ ತನಕದ ಕರ್ನಾಟಕದ ಸಂದರ್ಭದಲ್ಲಿ ಅಂಗನವಾಡಿ ನೌಕರರ ಹೋರಾಟವನ್ನು ನೆನಪಿಸಿಕೊಂಡಿತು. ಅದರ ಪಯಣವನ್ನೂ ಮೆಲುಕು ಹಾಕಿತು. 1975 ರಲ್ಲಿ ಅಂಗನವಾಡಿಗಳು ಪ್ರಾಯೋಗಿಕವಾಗಿ ಆರಂಭಗೊಂಡಾಗ ಅಂಗನವಾಡಿ ಕಾರ್ಯಕರ್ತೆಯರಿಗೆ 110 ರೂ., ಸಹಾಯಕಿಯರಿಗೆ 50 ರೂ. ಮಾಸಿಕ ಗೌರವಧನದೊಂದಿಗೆ ಆರಂಭವಾಗಿ ಇದೀಗ ಆ ಮೊತ್ತ 6000 ರೂ. 3000 ರೂಗೆ ಬಂದಿದೆ. ಈತನಕವೂ ಅಂಗನವಾಡಿ ನೌಕರರನ್ನು ಕಾಯಂಗೊಳಿಸದೆ ಕನಿಷ್ಠ ವೇತನ ನೀಡಿ ಗರಿಷ್ಠ ಕೆಲಸವನ್ನು ಪಡೆಯಲಾಗುತ್ತಿದೆ. ಈ ಗರಿಷ್ಠ ಕೆಲಸಕ್ಕೆ ಸರಿಯಾದ ವೇತನ, ಭದ್ರತೆ, ಭತ್ಯೆಗಳನ್ನು ಕೊಡಬೇಕೆಂಬ ಕಾರಣಕ್ಕೆ ಅಂಗನವಾಡಿ ನೌಕರರು ನಿರಂತರ ಹೋರಾಟ ಮಾಡುತ್ತಿದ್ದಾರೆ.

ಈ ಬಗೆಯ ಅಂಗನವಾಡಿ ಮಹಿಳೆಯರ ಹೋರಾಟಕ್ಕೂ ಒಂದು ಚರಿತ್ರೆಯಿದೆ. ಅಖಿಲ ಭಾರತದ ಮಟ್ಟದಲ್ಲಿ ಸ್ವತಂತ್ರ ಹೋರಾಟಗಾರ್ತಿ ವಿಮಲಾ ರಣದಿವೆ ಅವರ ನಾಯಕತ್ವದಲ್ಲಿ ಅಂಗನವಾಡಿ ನೌಕರರ ಸಂಘಟನೆಗಳು ಮೊಳೆತವು. 1988-89ರ ಹೊತ್ತಿಗೆ ನಿಧಾನಕ್ಕೆ ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ಸಂಘಟನಾತ್ಮಕ ಚಟುವಟಿಕೆಗಳು ಚುರುಕಾಗತೊಡಗಿದವು. ಇದರ ಫಲವಾಗಿ 1991ರಲ್ಲಿ ರಾಜಸ್ಥಾನದ ಉದಯಪುರದಲ್ಲಿ ಪ್ರಥಮ ರಾಷ್ಟ್ರೀಯ ಸಮ್ಮೇಳನ ಆಯೋಜನೆಗೊಂಡಿತು. ಕರ್ನಾಟಕದಲ್ಲಿ ಗುಲ್ಬರ್ಗಾ, ಗೌರಿಬಿದನೂರು, ಹೊಸಪೇಟೆಗಳಲ್ಲಿ ಸಂಘಟನಾತ್ಮಕ ಚಟುವಟಿಕೆಗಳು ಆರಂಭವಾದವು.

ಕರ್ನಾಟಕದಲ್ಲಿ ಸಿಪಿಐ(ಎಮ್)ನ ಘಟಕವಾದ 'ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್' (ಸಿಐಟಿಯು) ಅಂಗನವಾಡಿ ನೌಕರರನ್ನು ಸಂಘಟಿಸುತ್ತಿದೆ. 1994ರಲ್ಲಿ ಹೊಸಪೇಟೆಯಲ್ಲಿ ಆರಂಭವಾದ ಸಿಐಟಿಯು ಸಂಘಟನೆಯು ಇಂದು ರಾಜ್ಯವ್ಯಾಪಿ ಇದೆ. ಇತರೆ ಎಡಸಂಘಟನೆಗಳು ಅಂಗನವಾಡಿ ನೌಕರರನ್ನು ಸಂಘಟಿಸಿದರೂ ಸದ್ಯಕ್ಕೆ ಸಿಐಟಿಯು ಸಂಘಟನೆ ಹೆಚ್ಚು ಪ್ರಬಲವಾಗಿದೆ. 1995 ರಲ್ಲಿ 300 ಜನರ ಸದಸ್ಯತ್ವದೊಂದಿಗೆ ಆರಂಭವಾಗಿ ಇಂದು ಈ ಸಂಘಟನೆಯು 80 ಸಾವಿರದಷ್ಟು ನೌಕರರನ್ನು ಒಳಗು ಮಾಡಿಕೊಂಡು ಕ್ರಿಯಾತ್ಮಕ ಹೋರಾಟಗಳನ್ನು ರೂಪಿಸುತ್ತಿದೆ.

ಎರಡನೆಯದಾಗಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಸಿಪಿಐ)ದ ಘಟಕವಾದ 'ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್' (ಎಐಟಿಯುಸಿ) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಫೆಡರೇಷನ್ ರೂಪಿಸಿ ಅಂಗನವಾಡಿ ನೌಕರರನ್ನು ಸಂಘಟಿಸುತ್ತಿದೆ. ಸದ್ಯಕ್ಕೆ ಹೆಚ್.ಕೆ.ರಾಮಚಂದ್ರಪ್ಪ ಅವರು ಈ ಸಂಘಟನೆಯ ಅಧ್ಯಕ್ಷರಾಗಿದ್ದಾರೆ. ಜಯಮ್ಮ ಅವರು ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಅಂದಾಜು ಈ ಸಂಘಟನೆಯಲ್ಲಿ 20 ಸಾವಿರದಷ್ಟು ಸದಸ್ಯರಿರಬಹುದು ಎನ್ನುತ್ತಾರೆ. ಉಳಿದಂತೆ ಹಲವು ಬಗೆಯ ಸ್ಥಳೀಯ ಮತ್ತು ರಾಜ್ಯಮಟ್ಟದ ಸಂಘಟನೆಗಳು ಅಂಗನವಾಡಿ ನೌಕರರನ್ನು ಸಂಘಟಿಸುತ್ತಿದ್ದರಾದರೂ ಅವುಗಳು ಸಂಘಟನಾ ಶಕ್ತಿ ಬಿಡಿಬಿಡಿಯಾಗಿದೆ.

ಈ ಬಗೆಯ ನಿರಂತರ ಹೋರಾಟದಿಂದ ಈಡೇರಿದ ಬೇಡಿಕೆಗಳು ಕೆಲವಷ್ಟೆ ಎನ್ನಬಹುದು. ಮುಖ್ಯವಾಗಿ ಹಂತಹಂತವಾಗಿ ಗೌರವಧನ ಹೆಚ್ಚಾಗಿದೆ. 2000ನೇ ಇಸ್ವಿಯಿಂದ ಕಾಯಿಲೆ ಮತ್ತು ಮರಣ ಪರಿಹಾರ ನಿಧಿಯನ್ನು ಸ್ಥಾಪಿಸಲಾಗಿದೆ. 2001ರಲ್ಲಿ 7 ದಿನಗಳ ಬೇಸಿಗೆ ರಜೆಯನ್ನು ಮಂಜೂರು ಮಾಡಲಾಗಿದೆ. 2004ರಲ್ಲಿ ಅಂಗನವಾಡಿ ನೌಕರರ ವಿಮಾಯೋಜನೆ ಜಾರಿ ಮತ್ತು ಶೇ 45 ರಷ್ಟು ಮೇಲ್ವಿಚಾರಕರನ್ನಾಗಿ ಆಯ್ಕೆ ಮಾಡುವ ನಿಯಮ ಜಾರಿಯಾಗಿದೆ. 2010ರಲ್ಲಿ 180 ದಿನಗಳ ಹೆರಿಗೆ ರಜೆ ಮತ್ತು ಗರ್ಭಪಾತ ರಜೆಯನ್ನು ಮಂಜೂರು ಮಾಡಲಾಗಿದೆ.

2011ರಲ್ಲಿ ನಿವೃತ್ತಿ ಸೌಲಭ್ಯ ಮತ್ತು ಬೇಸಿಗೆ ರಜೆ 7 ದಿನದಿಂದ 15 ದಿನಕ್ಕೆ ಹೆಚ್ಚಳ ಮಾಡಲಾಗಿದೆ. 2012 ರಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಪ್ರಕ್ರಿಯೆಗೆ



ಒಂದು ಮಾರ್ಗಸೂಚಿಯನ್ನು ನಿರ್ಧರಿಸಲಾಯಿ[...] ಅಂತೆಯೇ ಹತ್ತನೇ ತರಗತಿ ಪೂರೈಸಿದ ಸಹಾಯಕಿಯ[...] ಕಾರ್ಯಕರ್ತೆಯನ್ನಾಗಿ ನೇಮಿಸುವ ಪ್ರಸ್ತಾವಕ್ಕೆ ಒಪ್ಪಿಗೆ ಸಿ[...] 2013-14ರಲ್ಲಿ ಮರಣ ಪರಿಹಾರವನ್ನು 50 ಸಾವಿ[...] ಹೆಚ್ಚಿಸಲಾಯಿತು. 2015ರಲ್ಲಿ ರಾಜ್ಯ ಮತ್ತು ಕೇ[...] ಸರಕಾರದ ಗೌರವಧನ ಒಂದೇ ಬಾರಿಗೆ ಕೊಡಲು ಆದೇ[...] ವಾಗಿದೆ. ಹೀಗೆ ಅಂಗನವಾಡಿ ನೌಕರರ ಹೋರಾ[...] ಪ್ರತಿಫಲವಾಗಿ ಹಂತಹಂತವಾಗಿ ಕೆಲವೊಂದು ಬೇಡಿಕೆ[...] ಈಡೇರಿವೆ.

ದೇಶವ್ಯಾಪಿ ಅಂಗನವಾಡಿ ನೌಕರರ ವೇತ[...] ತಾರತಮ್ಯವೂ ಇದೆ. ಹೀಗಾಗಿ ಏಕರೂಪಿ ವೇತ[...] ಬೇಡಿಕೆಯೂ ಹೋರಾಟದ ಮುಖ್ಯ ಅಂಶವಾಗಿದೆ. ಸ[...] ಗೋವಾದಲ್ಲಿ ಕಾರ್ಯಕರ್ತೆಗೆ 15 ಸಾವಿರ, ಸಹಾಯ[...] 14 ಸಾವಿರ ಸಂಬಳವಿದ್ದರೆ, ಪಾಂಡಿಚೆರಿಯಲ್ಲಿ ಈ ಮೊ[...] 13 ಮತ್ತು 12 ಸಾವಿರವಿದೆ. ಕೇರಳದಲ್ಲಿ 10 ಮ[...] 7500 ರಷ್ಟಿದೆ. ತಮಿಳುನಾಡಿನಲ್ಲಿಯೂ ಉತ್ತಮ ವೇ[...] ವಿದೆ. ಆದರೆ ಕರ್ನಾಟಕದಲ್ಲಿ ಈಗಲೂ ಕಾರ್ಯಕರ್ತೆ[...] 6 ಸಾವಿರ, ಸಹಾಯಕಿಗೆ 3 ಸಾವಿರದಷ್ಟಿದೆ. ಈ ವೇ[...] ತಾರತಮ್ಯವನ್ನು ಕೊನೆಗಾಣಿಸಿ ದೇಶವ್ಯಾಪಿ ಒಂ[...] ವೇತನವನ್ನು ತರುವ ಪ್ರಯತ್ನವೂ ಈ ಹೋರಾಟ[...] ಮುಖ್ಯ ಗುರಿಗಳಲ್ಲಿ ಒಂದಾಗಿದೆ.

2016 ಅಕ್ಟೋಬರ್‌ನಲ್ಲಿ 'ಸಮಾನ ಕೆಲಸಕ್ಕೆ ಸಮ[...] ವೇತನ' ಎಂಬ ಸುಪ್ರೀಂಕೋರ್ಟ್ ತೀರ್ಪು ಅಂಗನವಾ[...] ಮಹಿಳೆಯರ ಹೋರಾಟಕ್ಕೆ ಹೊಸ ತಿರುವು ತಂದಿ[...] ಇಲಾಖೇತರ ಯೋಜನೇತರ ಕೆಲಸಗಳಲ್ಲಿ ಇವರ[...] ಬಳಸಿಕೊಂಡು ಒಂದು ರೀತಿ ಸರಕಾರವೇ ನಿರಂ[...] ದೌರ್ಜನ್ಯ ಎಸಗುತ್ತಿದೆ. ಇವರು ಕರ್ನಾಟಕದಲ್ಲಿ ಒಂದೂ[...] ಲಕ್ಷದಷ್ಟು ಸ್ತ್ರೀಶಕ್ತಿ ಸಂಘಗಳನ್ನು ಕಟ್ಟಿದ್ದಾರೆ, ಎರಡು ಲಕ್ಷದ[...] ಭಾಗ್ಯಲಕ್ಷ್ಮಿ ಬಾಂಡ್ ಕೊಡಿಸುವಲ್ಲಿ ಇವರು ಶ್ರಮವಹಿಸಿದ್ದಾ[...] ಹೀಗೆ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾ[...] ಸಂಬಂಧವೇ ಇಲ್ಲದ ದೇಶವ್ಯಾಪಿ ನೂರಾರು ಯೋಜನೆ[...] ಕೆಲಸಗಳಲ್ಲಿ ಇವರನ್ನು ತೊಡಗಿಸಿಕೊಂಡು ಹೈರಾಣಾಗಿಸಿದ[...]

ಸಿಐಟಿಯುನ ಎಸ್.ವರಲಕ್ಷ್ಮಿ ಅವರು ಅಂಗನವಾ[...] ನೌಕರರ ಹೋರಾಟಗಳನ್ನು ಕಳೆದ 20 ವರ್ಷಗಳಿಂದಲ[...] ಸಂಘಟಿಸುತ್ತಿದ್ದಾರೆ. ಅವರು ಹೇಳುವಂತೆ 'ನಿರಂತರವಾ[...] ಹೋರಾಟದಿಂದ ಅಂಗನವಾಡಿ ನೌಕರರಲ್ಲಿ ಒಂದು ಬಗೆ[...] ವಿಶ್ವಾಸ ಗಟ್ಟಿಯಾಗಿದೆ. ಇದೀಗ ಸಂಘಟಿತ ಹೋರಾಟದಿ[...] ಮಾತ್ರ ನಮ್ಮ ನ್ಯಾಯಯುತ ಬೇಡಿಕೆಗಳು ಈಡೇರ[...] ಸಾಧ್ಯ ಎನ್ನುವ ನಿಲುವಿಗೆ ಬಂದಿದ್ದಾರೆ. ಈ ಬೆಳವ[...] ಕೂಡ ನಮ್ಮ ನಿರಂತರ ಹೋರಾಟದ ಫಲ' ಎನ್ನುತ್ತಾ[...]

* * *

ಈಚೆಗೆ ಬಿಪಾಷ ಮೈತಿ ಅವರು 'ಎಕನಾಮಿಕ್ ಅ[...] ಪೊಲಿಟಿಕಲ್ ವೀಕ್ಲಿ' ಪತ್ರಿಕೆಯಲ್ಲಿ ಬರೆದ ಲೇಖನದ[...] ಬೇರೆಬೇರೆ ರಾಜ್ಯಗಳಲ್ಲಿ ಅಂಗನವಾಡಿಗಳ ಕಾರ್ಯಚ[...] ವಟಿಕೆಗಳ ವ್ಯತ್ಯಾಸ ಮತ್ತು ಅದಕ್ಕೆ ಕಾರಣಗಳನ್ನು ವಿಶ್ಲೇ[...] ದ್ದಾರೆ. ಈ ಬರಹದ ಕೆಲವು ಸಂಗತಿಗಳು ಆಸಕ್ತಿದಾಯ[...] ವಾಗಿವೆ. ಭಾರತದಲ್ಲಿ ಅಂಗನವಾಡಿ ಕೇಂದ್ರಗಳ ಕಟ[...] ಮತ್ತು ಮೂಲಸೌಕರ್ಯಗಳನ್ನು ಸರಕಾರ ಒದಗಿಸಿರು[...] ಗೋವಾ ರಾಜ್ಯ ಮೊದಲ ಸ್ಥಾನದಲ್ಲಿದೆ. ಅದರ ಶೇಕಡವಾ[...] 0.835 ಇದ್ದು ಇದು ಭಾರತದಲ್ಲಿ ಅತ್ಯುತ್ತಮ ಮ[...] ಸೌಕರ್ಯವನ್ನು ಒದಗಿಸಿದ ರಾಜ್ಯವಾಗಿದೆ. ಈ ಪ್ರಮಾ[...] ದೇಶದಲ್ಲಿ ಅತಿ ಕಡಿಮೆ ಎಂದರೆ ನಾಗಾಲ್ಯಾಂಡ್ 0.2[...] ನಷ್ಟಿದೆ. ಈ ಸಂಖ್ಯಾವಾರು ಕರ್ನಾಟಕದ ಪ್ರಮಾಣವ[...] ನೋಡಿದರೆ 6ನೇ ಸ್ಥಾನದಲ್ಲಿದೆ. ಇದರ ಶೇಕಡವಾ[...] 0.681 ರಷ್ಟಿದ್ದು ಸಾಮಾನ್ಯ ದರ್ಜೆಯನ್ನು ಕಾಯ್ದುಕೊಂಡ[...]

ಶಿಅಯೋ ಆಶಯಗಳನ್ನು ಸರಿಯಾಗಿ ಅರ್ಥೈ[...] ಕೊಂಡು ಅವುಗಳನ್ನು ತಮ್ಮ ಕಾರ್ಯಚಟುವಟಿಕೆ[...] ಮೂಲಕ ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಗೋವಾ ರಾ[...] ಮೊದಲ ಸ್ಥಾನದಲ್ಲಿದೆ. ಅದು ಶೇ. 0.976 ರಷ್ಟ[...] ದೇಶದಲ್ಲಿಯೇ ಅತ್ಯುತ್ತಮವಾಗಿದೆ. ಎರಡನೇ ಸ್ಥಾನ[...] ಮಧ್ಯಪ್ರದೇಶವಿದ್ದು ಅದು 0.876 ರಷ್ಟಿದೆ. ಈ ನಿಟ್[...] ಕರ್ನಾಟಕದ ಕ್ರಮಾಂಕವೂ ಆಶಾದಾಯಕ ವಾಗಿದೆ. [...] ಶೇ. 0.830 ರಷ್ಟಿದ್ದು ದೇಶದಲ್ಲಿ ಅತ್ಯುತ್ತಮ 7 ರಾಜ್ಯಗ[...] ಆರನೇ ಸ್ಥಾನ ಪಡೆದಿದೆ. ಇದರಲ್ಲಿ ಕಡೆಯ ಸ್ಥಾನ[...] ಮೇಘಾಲಯ ಪಡೆದಿದ್ದು ಅದು 0.140 ರಷ್ಟಿದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸರಿಯ[...] ಸೇವೆಯನ್ನು ಒದಗಿಸುವ ಕ್ರಮಾಂಕದಲ್ಲಿ ಆಂಧ್ರಪ್ರದ[...] ಮೊದಲ ಸ್ಥಾನದಲ್ಲಿದ್ದು 0.969 ರಷ್ಟಿದೆ. ಇ[...] ದೇಶದಲ್ಲಿಯೇ ಅತ್ಯುತ್ತಮವಾಗಿದೆ. ಈ ವಿಷಯ[...] ಕರ್ನಾಟಕದ ಸ್ಥಾನವೂ ಆಶಾದಾಯಕವಾಗಿದೆ: ಇದು ನಾಲ[...] ಸ್ಥಾನದಲ್ಲಿ ಶೇ 0.767 ರಷ್ಟಿದ್ದು ಉತ್ತಮ ಸ್ಥಾನ[...]

▶▶ 1[...]

ಬೆಂಗಳೂರು Bengaluru

■ ಕೆ.ಫಣಿರಾಜ್ 6

ಲ್ಯಾಟಿನ್ ಅಮೆರಿಕದ ಪಶ್ಚಿಮದ ಕರಾವಳಿಯ ಪುಟ್ಟ ದೇಶವಾದ ಡೊರ್ ತನ್ನ ಭೌಗೋಳಿಕತೆ ಹಾಗು ಜನ ಸಂಸ್ಕೃತಿಯ ವೈವಿಧ್ಯಗಳಿಂದ ಬಿ ತುಳುಕುವ ದೇಶ. ಪಶ್ಚಿಮದ ಕಡಲು, ಅಮೇಜಾನ್ ಕಾಡುಗಳು, ಂಡ್ಸ್ ಪರ್ವತ ಶ್ರೇಣಿಗಳನ್ನು ಒಳಗೊಂಡ ಈ ದೇಶದ ವಿಸ್ತೀರ್ಣ ಕರಾವಳಿ ಟಕದಷ್ಟೇ. ಸ್ಪೇನಿನ ವಸಾಹತುವಾಗಿದ್ದ ಈ ಪುಟ್ಟ ನಾಡು ಚರಿತ್ರೆಯ ವು ಬಗೆಯ ಹಿಂಸೆಗಳನ್ನು ಹಾದು ಉಳಿದಿದೆ. 1970 ದಶಕದಲ್ಲಿ ರಿಕದ ಸಾಮ್ರಾಜ್ಯಶಾಹಿಯ ಅಂಕುಶದಲ್ಲಿ ಇಕೊಡೊರನ್ನು ಆಳಿದ ಮಿಲಿಟರಿ ಧಿಕಾರ ನಡೆಸಿದ ಅವರ್ಣನೀಯ ಹಿಂಸೆ ಹಾಗು ಆ ನಂತರದ ತೋರಿಕೆಯ ಪ್ರಭುತ್ವದ ಅಡಿ ನಡೆಯುತ್ತಿರುವ ಮಾನವಹಕ್ಕುಗಳ ಉಲ್ಲಂಘನೆಗೆ ಡೊರ್ ಪ್ರಸಿದ್ಧ. ಇಂಥ ದೇಶದಲ್ಲಿ 1990ರ ದಶಕದವರೆಗೂ ರ್ಮಾಣವಾಗುತ್ತಿದ್ದದ್ದು ದಶಕಕ್ಕೊಂದು ಸಿನಿಮಾ. 2000ದ ನಂತರದಲ್ಲಿ ಕ್ಕೊಂದು ಸಿನಿಮಾ ಹೊರಬರುತ್ತಿದೆ. ಸಮಾಜದ ಸ್ಥಿತಿಗತಿಗೂ ಸೂತ್ರ ಂಧವನ್ನು ಹೊಸೆಯುವುದು ನನ್ನ ಉದ್ದೇಶವಲ್ಲ, ಆದರೆ, ಬಹು ಸಿನಿಮಾ ರ್ಮಾಣದ ಪರಂಪರೆಯೇ ಇರದ, ವಿಲಕ್ಷಣ ಹಿಂಸೆಯ ಸಮಾಜದಿಂದ ರುವ ಬೆರಗುಗೊಳಿಸುವ ಈ ಸಿನಿಮಾ, ತನ್ನ ಪರಿಧಿಯಾಚೆ ಇವೆಲ್ಲವುಗಳ ಯೋಚಿಸುವಂತೆ ಮಾಡುವುದು ಸೋಜಿಗ. ಬೆಳೆವ ಮಕ್ಕಳ ತವಕ ಗಳನ್ನು ಹಿಡಿದಿಡುವ 'ಕಮಿಂಗ್ ಆಫ್ ಏಜ್' ಎಂಬ ಸಿನಿಮಾ ಪ್ರಾಕಾರ ಯ್ತಿನಿಂದ ಇದೆ. ರಾಬರ್ಟ್ ಬ್ರೇಸನ್‌ನ 'ಬಲ್ತಜಾರ', ಕೆನ್ ಲೋಚ್‌ನ ', ಫ್ರಾಂಜುವಾ ಥ್ರೂಫೋನ '400 ಬ್ಲೋಸ್', ಸತ್ಯಜಿತ್ ರೇ ರ 'ಅಪೂ 'ಗಳಿಂದ ಹಿಡಿದು ಅವಿನಾಶ್ ಅರುಣರ 'ಕಿಲ್ಲಾ', ನಾಗರಾಜ್ ಜುಳೆಯವರ 'ಫಂಡ್ರಿ'ಗಳವರೆಗೆ ಈ ಸಿನಿಮಾ ಪ್ರಾಕಾರ ತನ್ನ ವ್ಯಾಪ್ತಿಯನ್ನು ಸಿಕೊಂಡಿದೆ ಮಾತ್ರವಲ್ಲ- ಪ್ರತಿಯೊಬ್ಬರೂ, ತಮ್ಮದೇ 'ಅತ್ಯುತ್ತಮ ಹತ್ತು'ಗಳನ್ನು ಸುವಷ್ಟು ಹರವಿನದಾಗಿದೆ. ಬರ್ರಗನಳ ಮೊದಲ ಸಿನಿಮಾ ಈ ಪ್ರಾಕಾರದ ತ್ತಮಗಳ ಸಾಲಲ್ಲಿ ತನ್ನದೇ ವಿಶಿಷ್ಟತೆಯಿಂದ ನಿಲ್ಲಬಲ್ಲ ಸಿನಿಮಾ ಶಕ್ತಿ ದೆ.

ಸಿನಿಮಾದ ಕಥಾ ಸಾರಾಂಶ

ನಾಲ್ಕೈದು ಸಾಲಲ್ಲಿ ಕಥನಸಾರವನ್ನು ಹೇಳಿ ಮುಗಿಸುವಷ್ಟು ಸರಳ ಕಥಾ ರವುಳ್ಳ ಸಿನಿಮಾವಿದು. ಕಥನ ನಮ್ಮ ನಾಡ ಸಿನಿಮಾಗಳ ಪರಂಪರೆಯಾಗಿ ಷ್ಟು ದೀರ್ಘದಲ್ಲಿ ಕಥಿಸುವೆ:

ಅಲ್ಬ ವಿಚ್ಛೇದಿತ ತಾಯಿಯ ಜೊತೆ ಬದುಕುತ್ತಿರುವ ಹನ್ನೊಂದು ವರ್ಷದ ಡುಗಿ. ತಾಯಿ ಮಾರಣಾಂತಿಕ ಕಾಯಿಲೆಯಿಂದ ನರಳುತ್ತಾ ಹಾಸಿಗೆ ದವಳು. ಮಕೇಡಿಯಾದ (ಯಾರ ಜೊತೆಗೂ ಸುಲಭದಲ್ಲಿ ಬೆರೆಯದ ಏಕಾಂಗಿ ಸ್ವಭಾವ) ಅಲ್ಬ ತಾಯಿಯ ಕಾಯಿಲೆಯ ವಸ್ತುಸ್ಥಿತಿಯ ಜೊತೆ ದಿಕೊಂಡು, ತಾಯಿಗೆ ತೊಂದರೆಯಾಗದಂತೆ ತನಗೆ ತಾನೇ ಆಡಿಕೊಂಡು, ಯ ಜೊತೆ ಮಾತ್ರವೇ ಗುಸುಗುಸು ದನಿಯಲ್ಲಿ ತನ್ನ ಕಷ್ಟಸುಖಗಳನ್ನು ಕೊಳ್ಳುತ್ತ ಇರುವವಳು. ಪ್ರತಿಷ್ಠಿತ ಶಾಲೆಯಲ್ಲಿ ಇವಳು ಸದಾ ಒಬ್ಬಂಟಿ; ದ ಹುಡುಗಿಯರು ತಮ್ಮ ಹದಿಹರಯಕ್ಕೆ ಕಾಲಿಡುವ ಸಾಹಸಗಳ ಬಗ್ಗೆ ಾಡಿಕೊಂಡು ನಲಿಯುವಾಗ, ಇವಳು ತನ್ನ ಅಂಗಿಯ ಚುಂಗು ಜಗ್ಗುತ್ತ ಗಿಯಾಗಿರುವವಳು. ಈ ಕಾರಣಕ್ಕಾಗಿಯೇ, ಶಾಲೆಯ ಸಹಭಾಗಿತ್ವದ ಾಠಗಳಲ್ಲಿ ಇವಳು ಸದಾ ಚೇಡಿಕೆಗೆ ಗುರಿಯಾಗಿ ಕನಲುವವಳು. ಹಾಗಂತ ಗೆ ಹರೆಯಕ್ಕೆ ಇಣುಕುತ್ತಿರುವ ಹುಡುಗಿಯರ ಆಸೆಗಳು ಇಲ್ಲವೆಂದಲ್ಲ; ರ ಹುಟ್ಟುಹಬ್ಬದ ಪಾರ್ಟಿಗಳಿಗೆ ಹೋಗುವುದು, ಅಲ್ಲಿ ಮಕೇಡಿಯಾಗಿ ದ್ದು, ಸೆಂಟು, ಲಿಪ್‌ಸ್ಟಿಕ್, ಫ್ಯಾನ್ಸಿ ಸರಗಳನ್ನು ಕದ್ದುಮುಚ್ಚಿ ಎತ್ತಿತಂದು, ತದಲ್ಲಿ ಸಂಭ್ರಮಿಸುವುದು-ಎಲ್ಲಾ ನಡೆಯುತ್ತದೆ; ರೋಗಿಷ್ಠ ತಾಯಿಗೆ ಗೊತ್ತಾಗಿಯೂ, ಅವಳು ಅಲ್ಬಳ ಸುಳ್ಳುಗಳನ್ನು ಕಕ್ಕುಲಾತಿಯಲ್ಲಿ ಸುವುದಲ್ಲದೇ ಬೇರೇನು ಮಾಡಲಾರಳು. ಹೀಗಿರುವಾಗ, ಅವಳ ತಾಯಿಯ ಗ ತೀವ್ರಗೊಂಡು ಆಸ್ಪತ್ರೆ ಸೇರಬೇಕಾಗುತ್ತದೆ. ಪುಟ್ಟಿ ಅಲ್ಬ ಅನಿವಾರ್ಯವಾಗಿ, ಹಸು ಕೂಸಾಗಿದ್ದಾಗ ಸಂಬಂಧ ತೊರೆದ ತಂದೆಯ ಆಶ್ರಯದಲ್ಲಿ ಕುವ ಸ್ಥಿತಿ ಬರುತ್ತದೆ. ತಂದೆಯೋ ಅತಿ ಕಡಿಮೆ ವರಮಾನವಿರುವ ಾಸ್ತ, ಮಗಳ ಹಾಗೆ ಮಕೇಡಿ. ವರ್ಷಾಂತರಗಳ ಒಂಟಿಯಾಗಿ ತನ್ನ

ಬೆಳೆವ ಹುಡುಗಿಯ ಮೌನ ತವಕ ತಲ್ಲಣ



ಪಾಡಿಗೆ ತಾನಿದ್ದವನು, ಇದೀಗ ಹರೆಯಕ್ಕೆ ಕಾಲಿಡುತ್ತಿರುವ ಮಗಳ ಜೊತೆ ಭಾವಜೀವನವನ್ನು ನಡೆಸಲಾಗದೆಂದು ಹೇಳಿಕೊಳ್ಳಲಾರ, ಜವಾಬ್ದಾರಿಯಿಂದ ನುಣುಚಿಕೊಳ್ಳಲಾರ; ತನ್ನ ಸ್ವಗತದಲ್ಲಿ, ತಾಯಿಯ ಜೊತೆ ಪಿಸುಮಾತಿನಲ್ಲಿ ತನ್ನ ಭಾವ ತೋಡುವ ಅಲ್ಬಳಿಗೆ ಮತ್ತೀಗ ಕಡುಮೌನದ ವಾಸ. ಮೌನ ತಂದೆ-ಮಗಳಿಬ್ಬರನ್ನೂ ಇರಿಯುತ್ತದೆ. ಇಬ್ಬರ ನಡುವೆ ಕೊಂಡಿಯಾಗಿರುವುದು ಮನೆಯ ಕೆಲವು ವಸ್ತುಗಳು-ಮೇಲು ಅಡಕೋಣೆಯಲ್ಲಿರುವ ಹಳೆಯ ಫೋಟೊ ಆಲ್ಬಂ, ಸಂಸಾರ ಒಟ್ಟಾಗಿದ್ದಾಗ ಅಲ್ಬ ಪುಟ್ಟಿಯಾಗಿದ್ದಾಗ ಇದ್ದ ಸಂಸಾರ ಸಲಕರಣೆಗಳು ಹಾಗು ಅಲ್ಬ ತನ್ನ ತಾಯಿಗಾಗಿ ಕಟ್ಟಲು ಹೆಣಗುತ್ತಿರುವ ಒಂದು ಬಯಲಲ್ಲಿರುವ ಮರದ ಚಿತ್ರದ ಚೆಕರ್ ಬೋರ್ಡ್. ಬದಲಾದ ಬದುಕಿನ ಸ್ಥಿತಿಯಲ್ಲಿ, ಅಲ್ಬಗೆ ತನ್ನ ತಂದೆಯ ಜೊತೆಯ ಕಡು ದಾರಿದ್ರ್ಯದ ಬದುಕನ್ನು ತೋರಿಸಿಕೊಳ್ಳುವುದು ಬಹು ಅವಮಾನಕರವಾಗಿ ಕಾಣುತ್ತದೆ-ಅದನ್ನು ಮುಚ್ಚಿಡಲು ಅವಳು ಕೆಲವು ಸುಳ್ಳು ಸಾಹಸಗಳಲ್ಲಿ ತೊಡಗಲು ಹಿಂಜರಿಯಳು. ಅಲ್ಬ ಋತುಮತಿಯಾಗಿದ್ದಾಳೆ, ಅನನುಭವಿ ತಂದೆ ಆ ಸ್ಥಿತಿಯನ್ನು ನಿಭಾಯಿಸಲು ಹೆಣಗುತ್ತಿದ್ದಾನೆ, ಒಟ್ಟಿಗೆ ಬದುಕುವ ಅನಿವಾರ್ಯ ತಂದೆ ಮಗಳ ನಡುವೆ ಅಲ್ಲೊಂದು ಇಲ್ಲೊಂದು ಭಾವತಂತಿಗಳನ್ನು ಹೆಣೆಯುತ್ತಿದೆ. ಇಬ್ಬರ ನಡುವಿನ ಆಗಂತುಕತೆ ಹರಿಯುವ ಲಕ್ಷಣಗಳು ಒದಗಿಬರುತ್ತಿಲ್ಲ, ಅಲ್ಬಳಿಗೆ ತಂದೆ ಹತ್ತಿರವಾಗುತ್ತಿದ್ದಾನೆ ಎನಿಸುವಾಗ ದೂರವಾಗಿರಬೇಕೆಂಬ ಹಟಭಾವ ಪುಟಿಯುತ್ತದೆ. ಆಗಾಗ ತಾಯಿಯನ್ನು ಆಸ್ಪತ್ರೆಯಲ್ಲಿ ನೋಡಲು ಹೋದಾಗ, ಈ ಭಾವದಾಟವನ್ನು ಅಲ್ಬ ತಾಯಿಯ ಕಿವಿಯಲ್ಲಿ ಉಸುರುತ್ತಾಳೆ-ತಾಯಿ ಎಚ್ಚರದ ಸ್ಥಿತಿಯಲ್ಲಿ ಇಲ್ಲದಾಗಲೂ, ತಂದೆ ಪಿಸುಮಾತು ಕೇಳಿಸದಷ್ಟು ದೂರದಲ್ಲಿ ಕಣ್ಣಳತೆಯಲ್ಲಿ ಕೂತಾಗಲೂ. ತಾಯಿಯ ಮರಣದ ಸುದ್ದಿ ಬಂದಾಗ, ಅಲ್ಬ ಇದೀಗ ಸ್ವಲ್ಪ ಹದಿಹರೆಯದ ಗರಿಕೆದರಿಕೊಂಡು, ಸ್ಥಿತಿವಂತ ಸಹಪಾಠಿಯೊಬ್ಬಳ ಪಾರ್ಟಿಯಲ್ಲಿ ತಲ್ಲೀನಳಾಗಿರುತ್ತಾಳೆ; ಸುದ್ದಿ ತಿಳಿದ ತಂದೆ ಹುಡುಕಿ ಬಂದು 'ಅಲ್ಬ! ಅಲ್ಬ' ಎಂದು ಗೋಗರೆದರೂ, ಇವಳು ಈ ದರಿದ್ರನ ಮಗಳು ಎಂದು ಗುರುತಿಸಿಕೊಳ್ಳಲು ಹಿಂಜರಿಯುತ್ತಾಳೆ. ಅವನೊಬ್ಬ ಹಡಬೆ ದರಿದ್ರನೆಂದು ಪಾರ್ಟಿಯಿಂದ ಹೊರಹಾಕುತ್ತಾರೆ. ಪಾರ್ಟಿಯಿಂದ ಹೊರಗೋಡಿ ಬರುವಾಗ, ಅಲ್ಬ ತನ್ನ ತೋರಿಕೆ ವೇಷಗಳನ್ನು ಕಳಚುತ್ತಾ ಮನೆಗೆ ಓಡಿಬರುತ್ತಾಳೆ. ತಲೆ ಮೇಲೆ ಕೈಹೊತ್ತು ಕೂತ ತಂದೆಯ ಕೊರಳನ್ನು ಹಿಂಬದಿಯಿಂದ ಅಪ್ಪುತ್ತಾಳೆ.

ಈ ಸಿನಿಮಾ ಯಾಕೆ ಮುಖ್ಯ

ಸಿನಿಮಾ ದೃಶ್ಯ-ಶ್ರವಣಗಳ ಕಲೆ. ಇಲ್ಲಿ ಮಾತು, ಕತೆಗಳ ನಿರೂಪಣೆ ಬರಿ ದೃಶ್ಯಾವಳಿ ಹಾಗು ಮಾತಿಗೆ ಹೊರತಾದ, ದೈನಂದಿನ ಬದುಕಿನ ಶಬ್ದಗಳಲ್ಲಿ ಕಟ್ಟಿಕೊಡಬೇಕು. ಹಾಗೇ ಕಟ್ಟುವಾಗ, ಕಥನದ ಪ್ರತಿ ಭಾವಾನುಭವಗಳನ್ನು ನೋಡುವವನಿಗೆ ತಲುಪಿಸುವ ಬಗೆಯಲ್ಲಿ ಕಟ್ಟಬೇಕು. ಅನುಭವ-ಅನುಭಾವದ ತಾಳ ಮದ್ದಳೆಯೆಲ್ಲಾ ಇಲ್ಲಿ ದೃಶ್ಯ-ಶಬ್ದಗಳ ಸಂಕಲನಾ ಜಾಣ್ಮೆಯಲ್ಲಿ ನೋಡುವವರನ್ನು ಮುಟ್ಟಬೇಕು. ಈ ನೆಲೆಯಲ್ಲಿ ನೋಡುವವರಿಂದ ದೃಶ್ಯ-ಶಬ್ದ ಕಲಾಜ್ಞಾನವನ್ನು ನಿರೀಕ್ಷಿಸಿ ಸಾಂದ್ರವಾದ ಘನ ಸಿನಿಮಾವನ್ನು ಕಟ್ಟಬಹುದು (ಅಂಥ ಸಿನಿಮಾದ ಬಗ್ಗೆ ಮುಂದೆ ಬರೆಯುವೆ) ಅಥವಾ ನಿರೂಪಿಸುವ ಬದುಕಿನ ಕ್ಷಣಾನುಭವಗಳನ್ನೂ ದೃಶ್ಯ-ಶಬ್ದಗಳ ವಿಶೇಷ ಆಯಾಮವನ್ನು ಕಟ್ಟಿ ನಿರೂಪಿಸಬಹುದು- 'ನಿಧಾನಗತಿಯ ಸಿನಿಮಾ' ಎಂಬ ಪ್ರಕಾರವೇ ಕಟ್ಟಿಕೊಂಡಿದೆ. ಇವೆರಡೂ, ರೆಡಿಮೇಡ್ ಜನಪ್ರಿಯ ಸಿನಿಮಾ ಪ್ರೇಕ್ಷಕರನ್ನು ತಲುಪದಂತೆ ತಡೆಯುವ ಜನಪ್ರಿಯ ಸಿನಿಮಾ ಕಲೆಯೂ ಇದೆ; ಅದು ದೃಶ್ಯ-ಶಬ್ದ ಕಲೆಯನ್ನು ಒಪ್ಪಿತ ಅಧಿಕಾರ ಸಾಮಾಜಿಕ ಮಾದರಿಗೆ ಹೊಂದಿಸುವ ನೈಪುಣ್ಯತೆ ಪಡೆದಿದೆ-ಅದು ಹಾಲಿವುಡ್ಡಿನಿಂದ ಸ್ಯಾಂಡಲ್‌ವುಡ್ಡಿನವರೆಗೆ ಒಪ್ಪಿತ ಮಾದರಿಯಾಗಿದೆ. ಈ ಎರಡು ಅತಿಗಳ ನಡುವೆ, ಸಿನಿಮಾ ಕಲೆಯನ್ನು ಜನಪ್ರಿಯ ಅಧಿಕಾರಸ್ಥ ನಿಲುವುಗಳಿಂದ ಪಾರು ಮಾಡಿ, ನೈಜ ಬದುಕಿನ ಸಂಕಟಗಳನ್ನು ದೃಶ್ಯ-ಶ್ರವಣ ಮಾಧ್ಯಮಗಳ ಮೂಲಕ ಕಟ್ಟುವ ಹಲವು ಪ್ರಯೋಗಗಳು ನಡೆಯುತ್ತಿವೆ. ಕ್ರಿಷ್ಟಿನಾಳ 'ಅಲ್ಬ' ಅಂಥ ಒಂದು ವಿಶಿಷ್ಟ ಪ್ರಯೋಗ.

ನಾನು ಮೊದಲು, 'ನಾಲ್ಕೈದು ಸಾಲಲ್ಲಿ ಕಥನಾ ಸಾರವನ್ನು ಹೇಳಿ ಮುಗಿಸುವಷ್ಟು ಸರಳ ಕಥಾಹಂದರವುಳ್ಳ ಸಿನಿಮಾವಿದು' ಎಂದು ಹೇಳಿದೆ; ನಂತರದಲ್ಲಿ ನಾನು ನಿರೂಪಿಸಲು ಹೆಣಗಿದ ಕಥನವೆಲ್ಲಾ ನಡೆಯುವುದು 'ದೃಶ್ಯ-ಮಾತುರಹಿತ ಶಬ್ದ'ಗಳಲ್ಲಿ! 98 ನಿಮಿಷದ ಈ ಸಿನಿಮಾದಲ್ಲಿ ನಮಗೆ ಕೇಳುವುದು ಹೆಚ್ಚೆಂದರೆ 20-25 ನಿಮಿಷದ ಮಾತುಗಳು-ಅವು ಅಬ್ಬರವಿಲ್ಲದ ಪಿಸುಮಾತುಗಳಲ್ಲಿ, ಬಾಕಿಯ ಭಾವವೆಲ್ಲಾ ವ್ಯಕ್ತವಾಗುವುದು ದೃಶ್ಯ-ಶಬ್ದಗಳಲ್ಲಿ.

98 ನಿಮಿಷಗಳ ಸಿನಿಮಾದಲ್ಲಿ, ಈ ಜಟಿಲವಾದ ಸಂಬಂಧಗಳ ಜೀವ ಭಾವನ್ನು ತಲುಪಿಸಲು, ದೃಶ್ಯಾವಳಿಯಲ್ಲಿ ನಟಿಸುವ ನಟರ ಆಂಗಿಕ-ವಾಚಿಕ



ಅಭಿನಯ ಬಲು ಮುಖ್ಯ-ಅಲ್ಬಳಾಗಿ ಪುಟ್ಟ ಮಕರೆನಾ ಅರಿಯಾಸ್ ಹಾಗು ತಂದೆಯಾಗಿ ಪಾಬ್ಲೋ ಅಗ್ಯುರೆಯ ಅಭಿನಯ ಕಥನದ ಭಾವವನ್ನು ನೋಡುವವರಿಗೆ ತಲುಪಿಸುವಷ್ಟು ಸಶಕ್ತವಾಗಿವೆ. ಅರಿಯಾಸಳ ಮುಗ್ಧ ಮುಖಭಾವದಲ್ಲಿ, ಬದಲಾಗುವ ಕಣ್ಣುಗಳ ಭಾವಾಭಿನಯವಂತೂ ಬೆರಗಿನದು.

ಕಡಿಮೆ ಅವಧಿಯಲ್ಲಿ, ಎಲ್ಲೂ ಅತಿ ಭಾವುಕತೆಗೆ ಅವಕಾಶ ನೀಡದೆ, ಸಂಬಂಧಗಳ ಗೋಜಲನ್ನು ದೃಶ್ಯದಲ್ಲಿ ನಿರೂಪಿಸಲೆಂದೇ ಸಿನಿಮಾ ಕಲೆಯು 'ಮಾಂಟಜ್'-ದೃಶ್ಯ ಸಂಕಲನವೆಂಬ ಕಲೆಯನ್ನು ಕಟ್ಟಿಕೊಂಡಿದೆ. ಕ್ರಿಷ್ಟಿನಾಳ ಜೊತೆ, ರಮಿಬ್ರಾಸ್ ಅಸುಅರ್, ಜುಅನ್ ಡೇನಿಯಲ್ ಮೊಲೆರೊ, ಜೋಸ್ ಮಾರಿಯಾ ಅವಿಲೆಸ್-ಇವರುಗಳು ಸಂಕಲನದಲ್ಲಿ ದುಡಿದು, ಸಂಕಲನ ಹಾಗು ಸಿನಿಮಾ ನಿರ್ದೇಶನ ಒಂದು ಸಿನಿಮಾದ ಕಲಾ ತೀವ್ರತೆಗೆ ಸಮನಾದ ಕಲೆಗಳು ಎಂದು ನಿರೂಪಿಸಿದ್ದಾರೆ. ಬರಿ ಕ್ರೆಡಿಟ್ ಕಾರ್ಡಿನಲ್ಲಿ ಹಾದುಹೋಗುವ ಸಂಕಲನಾಕಾರರ ಪ್ರತಿಭೆ ಸಿನಿಮಾಕ್ಕೆ ಎಷ್ಟು ಮುಖ್ಯ ಅನ್ನೋದನ್ನು 'ಅಲ್ಬ' ಮತ್ತೊಮ್ಮೆ ಮನಗಾಣಿಸುತ್ತದೆ.

■ ಕೆ.ಫಣಿರಾಜ್

2 ◀◀

ಟ್ಟಿಕೊಂಡಿದೆ. ಇನ್ನು ಎಲ್ಲಾ ವಿಷಯಗಳಲ್ಲಿ ಮೊದಲ ಸ್ಥಾನ ಪಡೆದ ಗೋವಾ ರಾಜ್ಯವು ಅತ್ಯುತ್ತಮ ಸ್ಥಾನಗಳನ್ನೂ ಪಡೆದಾಗಲೂ ಯೋಜನೆಯ ಸೇವೆಯನ್ನು ಗೆ ಒದಗಿಸುವಲ್ಲಿ ಏಳನೇ ಸ್ಥಾನದಲ್ಲಿದೆ. ಅದು ಶೇ. 02 ರಷ್ಟಿದೆ. ಇನ್ನು ಕೊನೆಯ ಸ್ಥಾನದಲ್ಲಿ ಅರುಣಾಚಲ ಪ್ರದೇಶವಿದ್ದು ಅದರ ಶೇಕಡವಾರು 0.189 ರಷ್ಟಿದೆ.

ಇನ್ನು ದೇಶದಲ್ಲಿ ಪರಿಶಿಷ್ಟ ಜಾತಿ (ಪಜಾ) ಮತ್ತು ಪರಿಶಿಷ್ಟ ಪಂಗಡದ (ಪಪಂ) ಮಕ್ಕಳ ತಾಯಂದಿರು ಯೋಜನೆಯ ಜಾಗೃತಿ ಪಡೆದ ಶೇಕಡಾವಾರು ಕ್ರಮಾಂಕವೂ ಕುತೂಹಲಕಾರಿಯವಾಗಿದೆ. ಇಲ್ಲಿ ಮುಖ್ಯವಾಗಿ ಯೋಜನೆಯ ಪೌಷ್ಟಿಕಾಂಶದ ಆಹಾರ ಮತ್ತು ಆರೋಗ್ಯ ಸಂಬಂಧದ ತಿಳಿವನ್ನು ಪಡೆದ ಪಜಾ ಮತ್ತು ಪಪಂ ತಾಯಂದಿರ ಜಾಗೃತಿಯ ಪ್ರಮಾಣವು 0-3 ವರ್ಷದವರೆಗಿನ ಮತ್ತು 3-6 ವರ್ಷದವರೆಗಿನ ಮಕ್ಕಳ ತಾಯಂದಿರ ಜಾಗೃತಿಯನ್ನು ಪ್ರತ್ಯೇಕವಾಗಿ ನೋಡಬಹುದಾಗಿದೆ.

0-3 ವರ್ಷದ ಮಕ್ಕಳ ತಾಯಂದಿರ ಜಾಗೃತಿಯ ಪ್ರಮಾಣದಲ್ಲಿ ಆಂಧ್ರಪ್ರದೇಶ ಮುಂಚೂಣಿಯಲ್ಲಿದೆ. ಇಲ್ಲಿ 0.9.1 ರಷ್ಟು ಪಜಾ ತಾಯಂದಿರಿದ್ದರೆ, 0.9.3 ರಷ್ಟು ಪಪಂ ತಾಯಂದಿರಿದ್ದಾರೆ. ಈ ಪ್ರಮಾಣ ಕರ್ನಾಟಕದಲ್ಲಿ 0.6.5 ನಷ್ಟು ಪಪಂ ತಾಯಂದಿರಿದ್ದು 0.3.5 ನಷ್ಟು ಪಜಾ ತಾಯಂದಿರಿದ್ದಾರೆ. ಇನ್ನು 3-6 ವರ್ಷದ ಒಳಗಿನ ಮಕ್ಕಳ ತಾಯಂದಿರ ಜಾಗೃತಿಯ ಪ್ರಮಾಣದಲ್ಲಿ ಆಂಧ್ರಪ್ರದೇಶವೇ ಮೊದಲ ಸ್ಥಾನದಲ್ಲಿದೆ. ಆಂಧ್ರದಲ್ಲಿ 0.8.9ರಷ್ಟು ಪಜಾ ತಾಯಂದಿರಿದ್ದರೆ, 0.6 ನಷ್ಟು ಪಪಂ ತಾಯಂದಿರಿದ್ದಾರೆ. ಈ ಪ್ರಮಾಣ ಕರ್ನಾಟಕದಲ್ಲಿ 0.6.4 ರಷ್ಟು ಪಪಂ ತಾಯಂದಿರಿದ್ದರೆ,



0.3.7 ರಷ್ಟು ಪಜಾ ತಾಯಂದಿರಿದ್ದಾರೆ.

ಇದೀಗ ದೇಶದ ಪ್ರಧಾನಿ ನರೇಂದ್ರ ಮೋದಿಯವರು ಐಸಿಡಿಎಸ್ ಯೋಜನೆಗೆ ಶೇ. 50% ರಷ್ಟು ಅನುದಾನವನ್ನು ಕಡಿತಗೊಳಿಸಿದ್ದಾರೆ. ಹಾಗಾಗಿ ಸದ್ಯಕ್ಕೆ ಈ ಯೋಜನೆಯ ನೌಕರರು ಮತ್ತಷ್ಟು ಆತಂಕವನ್ನು ಎದುರಿಸುವಂತಾಗಿದೆ. ಅಂಗನವಾಡಿ ನೌಕರರು ಈ ದೇಶದ ಅಪೌಷ್ಟಿಕತೆಯನ್ನು ಕಡಿಮೆ ಮಾಡುವಲ್ಲಿಯೂ, ದೇಶದ ಒಂದೂವರೆ ಮಿಲಿಯನ್ ಮಕ್ಕಳು ಮತ್ತು ತಾಯಂದಿರ ಆರೋಗ್ಯವನ್ನು ಕಾಪಿಡುತ್ತಿದ್ದರೂ, ಆ ಎಲ್ಲಾ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಕೊಡುತ್ತಿದ್ದರೂ ಇವರನ್ನು 'ಅನುತ್ಪಾದಕ' ಎನ್ನುವ ಮಾರುಕಟ್ಟೆಯ ಪರಿಭಾಷೆಯಲ್ಲಿ ಕೇಂದ್ರ ಸರಕಾರ ಪರಿಭಾವಿಸುತ್ತಿರುವುದು ದೊಡ್ಡ ದುರಂತವಾಗಿದೆ.

ಹಾಗಾಗಿ ಅಂಗನವಾಡಿ ಮಹಿಳೆಯರು ಇಂದು ದೇಶವ್ಯಾಪಿ ಬೆಸೆವ ದೊಡ್ಡ ಹೋರಾಟಗಳನ್ನು ತೀವ್ರಗೊಳಿಸ ಬೇಕಿದೆ. ಇವರ ಕನಸುಗಳನ್ನು ಜೀವಂತವಾಗಿರಿಸ ಕೇಂದ್ರ ಸರಕಾರದ ಉತ್ಪಾದಕ ... ಯುತೆಯನ್ನು ಬಯಲು ಮಾಡಬೇಕಿದೆ.

■ ಅರುಣ್ ಜೋಳದಕೂಡ್ಲಿಗಿ

ರಂಜನೆ | ಬೋಧನೆ | ಪ್ರತಿಭಟನೆ ಲಂಕೇಶ್

ಮಹಾಜನರು ಮತ್ತು ಬಹುಜನರ



ಬಸವ ಶಾಸನ-2

ಹಿಂದಿನ ಜನ್ಮದಲ್ಲಿ ಮಾಡಿದ ಪಾಪದ ಕಾರಣ ಪಾಪಿಗಳು ಶೂದ್ರರು ಮತ್ತು ದಲಿತರಾಗಿ ಜನ್ಮತಾಳಿದ್ದಾರೆ. ಈ ಜನ್ಮದಲ್ಲಿ ಪ್ರಾಮಾಣಿಕವಾಗಿ ಸವರ್ಣೀಯರ ಸೇವೆ ಮಾಡಿದರೆ ಮಾತ್ರ ಮುಂದಿನ ಜನ್ಮದಲ್ಲಿ ಪಾಪಮುಕ್ತರಾಗಿ ಜನಿಸುತ್ತಾರೆ ಎಂಬ ಭ್ರಮೆಯನ್ನು ಮನುವಾದಿಗಳು ಸೃಷ್ಟಿಸುತ್ತಾರೆ. ಹೀಗೆ ಅವರು ಉಳ್ಳವನಾಗುತ್ತಾರೆ. ನಂತರ ಇಂಥ ಉಳ್ಳವರ ಮತ್ತು ಬಡವರ ವರ್ಗಗಳಾಗುತ್ತವೆ. ಉಳ್ಳವರು ಕಡಿಮೆ ಸಂಖ್ಯೆಯಲ್ಲಿ ಇದ್ದರೆ ಬಡವರು ಬಹುಸಂಖ್ಯೆಯಲ್ಲಿದ್ದಾರೆ. ಶೋಷಕರಾದ ಉಳ್ಳವರು ಒಗ್ಗಟ್ಟಿನಿಂದ ವರ್ಗಹಿತವನ್ನು ಕಾಪಾಡುವಲ್ಲಿ ಸಹಸ್ರಾರು ವರ್ಷಗಳಿಂದ ಯಶಸ್ಸನ್ನು ಸಾಧಿಸುತ್ತಲೇ ಬಂದಿದ್ದಾರೆ. ಉಳ್ಳವರು 'ಮಹಾಜನರು' ಎಂದು ಕರೆಯಿಸಿಕೊಂಡರೆ, ಬಡವರು ಬಹುಜನರಾಗಿರುತ್ತಾರೆ. ಈ ಬಡಜನರು ಜಾತಿ ವಿಜಾತಿಗಳನ್ನು ಮೀರಿ ಕಾಯಕಜೀವಿಗಳ ವರ್ಗವಾಗಿ ರೂಪುಗೊಳ್ಳಬೇಕು ಆ ಮೂಲಕ ಶೋಷಣೆಯನ್ನು ತಡೆಗಟ್ಟಬೇಕು. ಶೋಷಣೆಯನ್ನು ತಡೆಗಟ್ಟಿದಾಗಲೇ ಭವಿಗಳು ಕೂಡ ಬೇರೆ ದಾರಿಯಿಲ್ಲದೆ ಭಕ್ತರಾದಾಗ ವರ್ಗರಹಿತ ಸಮಾಜ ನಿರ್ಮಾಣವಾಗುವುದು. ಅಲ್ಲಿಯವರೆಗೆ ಭಕ್ತಿ ಎಂಬುದು ಅವರಿಗೆ ತೋರಿ ಉಂಬ ಲಾಭವಾಗಿರುತ್ತದೆ.

"ವೇದವೆಂಬುದು ಓದಿನ ಮಾತು; ಶಾಸ್ತ್ರವೆಂಬುದು ಸಂತೆಯ ಸುದ್ದಿ,
ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ,
ಭಕ್ತಿ ಎಂಬುದು ತೋರಿ ಉಂಬ ಲಾಭ,
ಗುಹೇಶ್ವರನೆಂಬುದು ಮೀರಿದ ಘನವು."

ಅಲ್ಲಮಪ್ರಭುಗಳು ಹೇಳುವುದನ್ನು ಅರ್ಥ ಮಾಡಿಕೊಂಡಾಗ, ನಮ್ಮ ದೇಶದಲ್ಲಿ ಧಾರ್ಮಿಕ ಭಾವನೆಗಳು ಮತ್ತು ಸುಲಿಗೆ ಸಂಸ್ಕೃತಿ ಹೇಗೆ ಒಂದಕ್ಕೊಂದು ಪೂರಕವಾಗಿ ಬೆಳೆದವು ಎಂಬುದರ ಅರಿವು ನಮಗಾಗದೆ ಇರದು.

ಬಸವಳಿದವರ ಬಳಿಗೆ ಬಂದ ಬಸವ

ಉನ್ನತ ಕುಲದಲ್ಲಿ ಹುಟ್ಟಿ, ಉನ್ನತ ವಿದ್ಯೆ ಪಡೆದು, ಉನ್ನತ ಹುದ್ದೆ ಹೊಂದಿದ್ದ ಉನ್ನತ ವರ್ಗದ ಬಸವಣ್ಣನವರು ವ್ಯವಸ್ಥೆಯ ಎಲ್ಲ ಸೌಕರ್ಯಗಳನ್ನು ತೊರೆದು ಬಸವಳಿದ ಜನರ ಬಳಿಗೆ ಬಂದು, ಇಂಥ ಶೋಷಣೆ ಇಲ್ಲದ ಭಕ್ತಿಮಾರ್ಗವನ್ನು ಸೃಷ್ಟಿಸಿದರು. ಅಂತೆಯೆ ಉಳ್ಳವರು, ಬಡವರು, ಭಕ್ತ, ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ದಾಸೋಹ ಮುಂತಾದ ಶಬ್ದಗಳು ಮತ್ತು ಪದಗಳು ವಚನಸಾಹಿತ್ಯದ ಪಾರಿಭಾಷಿಕ ಪದಗಳಾಗಿ ಬಸವಣ್ಣನವರ ಹೊಸಜಗತ್ತಿನ ತತ್ವಕ್ಕೆ ಪೂರಕವಾಗಿವೆ. ಈ ಶಬ್ದಗಳಿಗೆ ವೈದಿಕರು ಕೊಟ್ಟ ಅರ್ಥವನ್ನು ಹಚ್ಚಲಿಕ್ಕಾಗದು. ವಚನಕಾರರು ಬಳಸುವ ಅನೇಕ ಶಬ್ದಗಳು ವಿವಿಧ ವಚನಗಳಲ್ಲಿ ಆಯಾ ಸಂದರ್ಭಕ್ಕೆ ತಕ್ಕಂತೆ ವಿವಿಧ ತತ್ತ್ವಾರ್ಥಗಳನ್ನು ಕೊಡುವ ಸಾಮರ್ಥ್ಯವನ್ನು ಹೊಂದಿವೆ.

ಬಡತನ ನೋಡುವ ಕ್ರಮ


ಬಸವಣ್ಣನವರು ಬಡತನವನ್ನು ನೋಡುವ ಕ್ರಮ ಕೂಡ ಬೇರೆಯಾಗಿದೆ. ವಸ್ತುಮೋಹಿಯಾಗದೆ ಅರಿವಿನ ಸಂಪತ್ತನ್ನು ಪಡೆದು ನೈಸರ್ಗಿಕ ಸಂಪನ್ಮೂಲಗಳು ದುರ್ಬಳಕೆಯಾಗದಂತೆ ಸರಳ ಸಹಜವಾಗಿ, ಪವಿತ್ರವಾಗಿ ಮತ್ತು ಸ್ವತಂತ್ರಧೀರರಾಗಿ ಬದುಕುವುದೇ ಬಸವಣ್ಣನವರು ಪ್ರತಿಪಾದಿಸುವ ಬಡವರ ವ್ಯಕ್ತಿತ್ವವಾಗಿದೆ. ಐಹಿಕ ಆಸೆಗಳಿಂದ ಮುಕ್ತರಾಗಿ ಸಂಪತ್ತಿನ ಸಂಗ್ರಹಕ್ಕೆ ಹೇಸಿ, ಬಡತನವನ್ನು ಪ್ರಜ್ಞಾಪೂರ್ವಕವಾಗಿ ಸ್ವೀಕರಿಸುವವರೇ ಶರಣರು.

"ಮನೆ ನೋಡಾ ಬಡವರು ಮನ ನೋಡಾ ಘನ
ಬಂದ ತತ್ಕಾಲಕ್ಕೆ ಉಂಟು ಪಸರಕ್ಕನುವಿಲ್ಲ
ಸೋಂಕಿನಲ್ಲಿ ಶುಚಿ ಸರ್ವಾಂಗ ಕಲಿಗಳು
ಕೂಡಲಸಂಗನ ಶರಣರು ಸ್ವತಂತ್ರ ಧೀರರು."

ಬಸವಣ್ಣನವರು ಅಭಿಮಾನದಿಂದ ಹೇಳುವಂತೆ ಶರಣರದು ಬಡವರ ಮನೆಯಾಗಿದ್ದರೂ ಅವರ ಮನದಲ್ಲಿ ಘನ (ದೈವೀಶಕ್ತಿ) ಇದೆ. ಕಾಯಕಜೀವಿಗಳಾದ ಅವರಲ್ಲಿ ಅಂದಂದಿಗೆ ಬೇಕಾಗುವಷ್ಟು ಮಾತ್ರ ಇರುತ್ತದೆ. ಶರಣಸಂಕುಲದಲ್ಲಿ ಸಂಗ್ರಹಕ್ಕೆ ಅವಕಾಶವಿಲ್ಲ, ಅವರು ಸೋಂಕಿನಲ್ಲಿ ಶುಚಿಯಾಗಿದ್ದಾರೆ. ಅಂದರೆ ಯಾವುದೇ ತೆರನಾದ ಅನೈತಿಕತೆಯಿಂದ ದೂರವಿದ್ದಾರೆ. ಅವರು ಸರ್ವಾಂಗ ಕಲಿಗಳಾಗಿದ್ದರಿಂದಲೇ ಇದು ಸಾಧ್ಯವಾಗಿದೆ. ಅವರು ಸರ್ವಾಂಗ ಕಲಿಗಳು ಏಕೆಂದರೆ ತಮ್ಮ ಎಲ್ಲ ಅಂಗಾಂಗಗಳ ಮೇಲೆ ಅವರು ಹಿಡಿತವನ್ನು ಸಾಧಿಸಿದ್ದಾರೆ. ಅವರ ಕಣ್ಣುಗಳು ಕೆಟ್ಟದ್ದನ್ನು ನೋಡುವುದಿಲ್ಲ, ಅವರ ಕಿವಿಗಳು ಕೆಟ್ಟದ್ದನ್ನು ಕೇಳುವುದಿಲ್ಲ, ಅವರ ಕೈಗಳು ಕೆಟ್ಟದ್ದನ್ನು ಮುಟ್ಟುವುದಿಲ್ಲ, ಅವರ ಕಾಲುಗಳು ಕೆಟ್ಟದ್ದರ ಕಡೆಗೆ ಹೋಗುವುದಿಲ್ಲ, ಏಕೆಂದರೆ ಅವರ ಮನಸ್ಸು ಕೆಟ್ಟದ್ದನ್ನು ಬಯಸುವುದಿಲ್ಲ. ಹೀಗೆ ಎಲ್ಲ ಅಂಗಾಂಗಳ ಮೇಲೆ ಹಿಡಿತವನ್ನು ಸಾಧಿಸಿದ್ದರಿಂದಲೇ ಅವರು ಸ್ವತಂತ್ರರು ಮತ್ತು ಧೀರರು ಆಗಿದ್ದಾರೆ.

ಬಸವಣ್ಣನವರು ಕಾಯಕಜೀವಿಗಳ ವ್ಯಕ್ತಿತ್ವವನ್ನು ರೂಪಿಸುತ್ತ ಅವರನ್ನು ಸಾತ್ವಿಕ ಶಕ್ತಿಯಾಗಿ ಮಾರ್ಪಡಿಸಿದರು. ತದನಂತರ ಅವರನ್ನು ಸಾಮಾಜಿಕ ಶಕ್ತಿಯಾಗಿಸಿ ಅನ್ಯಾಯದ ವಿರುದ್ಧದ ಚಳವಳಿಗೆ ಅಣಿಗೊಳಿಸಿದರು. ಈ ತೆರನಾಗಿ ಬಸವಣ್ಣನವರ ಕ್ರಾಂತಿಕಾರಿ ವಿಚಾರಗಳು ಹೊಸ ಸಮಾಜ ನಿರ್ಮಾಣಕ್ಕೆ ಬೇಕಾದ ಸಾಮೂಹಿಕ, ಸಾತ್ವಿಕ ಮತ್ತು ದೈಹಿಕ ಶಕ್ತಿಯನ್ನು ಕ್ರೋಢೀಕರಿಸುವಲ್ಲಿ ಸಫಲವಾದವು.

ಸದಾ ಅಪಮಾನ, ಅವಹೇಳನ ಮತ್ತು ಮೂಢನಂಬಿಕೆಯ ವಾತಾವರಣದಲ್ಲಿ ಬದುಕುತ್ತಿದ್ದ ಬಡವರು, ವೈದಿಕರು ಹೇಳಿದ್ದೇ ಸತ್ಯ ಎಂದು ಭಾವಿಸಿದ್ದರು. ಹೀಗಾಗಿ ಕಷ್ಟಕುಲ



ಗಳಲ್ಲಿ ಜನಿಸಿದ ತಾವೆಲ್ಲ ಪಾಪಿಗಳೆಂದೇ ಭ್ರಮಿಸಿದ್ದರು. ಅಂಥ ಭ್ರಮೆಗಳಿಂದ ಜನಸಮುದಾಯವನ್ನು ಹೊರಗೆ ತಂದವರೇ ಬಸವಣ್ಣನವರು. ಅಂತೆಯೆ 'ಕಲ್ಯಾಣದಲ್ಲಿ ಬಸವಣ್ಣ ಇರುವಾಗ ಕಲ್ಲಿಗ್ಯಾಕ ಕೈಯ ಮುಗೀತಿ' ಎಂದು ನಿರಕ್ಷರಿ ಜನಪದ ಕವಿ ಹೇಳಲು ಸಾಧ್ಯವಾಯಿತು.

ಕರ್ಮಸಿದ್ಧಾಂತಕ್ಕೆ ತಿರಸ್ಕಾರ

'ಪುಣ್ಯ ಪಾಪವೆಂಬ ಉಭಯ ಕರ್ಮವನಾರು ಬಲ್ಲರಯ್ಯಾ? ಇವನಾರುಂಬರು? ಕಾಯ ತಾನುಂಬಡೆ ಕಾಯ ತಾ ಮಣ್ಣು ಜೀವ ತಾನುಂಬಡೆ ಜೀವ ತಾ ಬಯಲು' ಎಂದು ಬಸವಣ್ಣನವರು ಹೇಳಿದರು. ದೇಹ ಮಣ್ಣುಗೂಡಿ ಮನಸ್ಸು ಬಯಲಾಗುವುದರಿಂದ ಅವುಗಳಿಗೆ ಪುಣ್ಯ ಮತ್ತು ಪಾಪ ಹತ್ತಲಿಕ್ಕೆ ಸಾಧ್ಯವೇ ಇಲ ಎಂದು ಸಾರಿದರು.

ಜನ್ಮಜನ್ಮಾಂತರದಿಂದ ಉಳಿದುಕೊಂಡು ಬಂದ ಸಂಚಿತ ಕರ್ಮ, ಹಿಂದಿನ ಜನ್ಮದಿಂದ ಬಂದ ಪ್ರಾರಬ್ಧ ಕರ್ಮ ಮತ್ತು ಈ ಜನ್ಮದಲ್ಲಿ ಮಾಡಿದ ಕರ್ಮದಿಂದಾಗಿ ಮುಂದಿನ ಜನ್ಮದಲ್ಲಿ ಅನುಭವಿಸಲೇಬೇಕಾದ ಆಗಾಮಿ ಕರ್ಮಗಳು ಮತ್ತು ಜನ್ಮಜನ್ಮಾಂತರಗಳು ವೈದಿಕರ ಸುಳ್ಳುಸೃಷ್ಟಿಗಳು ಎಂಬುದು ಕಾಯಕಜೀವಿಗಳಿಗೆ ಮನವರಿಕೆಯಾಯಿತು.

ಬಸವಧರ್ಮದಲ್ಲಿ ಆಚಾರವೆ ಸ್ವರ್ಗ; ಅನಾಚಾರವೆ ನರಕ. ಹೀಗಾಗಿ ಇಲ್ಲಿ ವೈದಿಕರ ಸ್ವರ್ಗ, ನರಕಗಳು ಕೂಡ ಇಲ್ಲ. "ಭಕ್ತಿಯ ಪಿತ್ತ ನೆತ್ತಿಗೇರಿ ಕೈಲಾಸದ ಬಟ್ಟೆಯ ಹತ್ತುವ ವ್ಯರ್ಥರ ಕಂಡು ಎನ್ನ ಮನ ನಾಚಿತ್ತು, ನಾಚಿತ್ತು, ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ". ಎಂದು ಬಸವಣ್ಣನವರು ಕೈಲಾಸವನ್ನು ಅಲ್ಲಗಳೆದು ಈ ಭೂಮಿಯ ಬಗ್ಗೆ ಅನನ್ಯ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ಭಕ್ತಿ ಎಂಬುದು ಸ್ವರ್ಗಪ್ರಾಪ್ತಿಗಾಗಿ ಇರುವಂಥದ್ದಲ್ಲ. ಈ ನೆಲದ ಬದುಕನ್ನು ಸುಂದರಗೊಳಿಸುವುದಕ್ಕಾಗಿ ಇರುವಂಥದ್ದು. ಈ ಮರ್ತ್ಯಲೋಕವೇ ಕರ್ತಾರನ ಕಮ್ಮಟ ಎಂದು ಅವರು ಸಾರಿದ್ದಾರೆ.

ಎಲ್ಲ ಧರ್ಮಗಳಲ್ಲಿ ಮನುಷ್ಯರು ಸತ್ತಮೇಲೆ ದೇವರ ಕಡೆಗೆ ಹೋಗುತ್ತಾರೆ. ಆದರೆ ಬಸವಧರ್ಮದಲ್ಲಿ ದೇವರೇ ಮನುಷ್ಯರ ಕಡೆಗೆ ಬರುತ್ತಾನೆ. ಏಕೆಂದರೆ ಈ ಭೂಮಿಯೇ ಆತನ ಕಮ್ಮಟ (ಟಂಕಸಾಲೆ) ಆಗಿದೆ. ಈ ಜಗತ್ತನ್ನು ಶಾಂತಿ ಮತ್ತು ಸಮಾನತೆಯ ಮಹಾಮನೆಯಾಗಿಸುವ ನಿರಹಂಕಾರಿಗಳು ಮಾತ್ರ ಆತನ ಪ್ರೀತಿಗೆ ಪಾತ್ರರಾಗುತ್ತಾರೆ.

ಇನ್ನೂ ವೈಶಿಷ್ಟ್ಯವೆಂದರೆ ಎಲ್ಲ ಧರ್ಮಗಳಲ್ಲಿ ದೇವರು ಮನುಷ್ಯರಿಗೆ ಹೇಳುತ್ತಾನೆ. ಆದರೆ ಈ ಧರ್ಮದಲ್ಲಿ ಶರಣರು ದೇವರಿಗೆ ತಮ್ಮ ಬದುಕಿನ ಪರಿಯ ಬಗ್ಗೆ ವಚನಗಳ ಮೂಲಕ ವರದಿ ಒಪ್ಪಿಸುತ್ತಾರೆ! ಆದ್ದರಿಂದಲೇ ಲಿಂಗಾಯತ ಧರ್ಮವು ಅರಿವನ್ನು ಈ ಲೋಕದಲ್ಲಿ ಆಚರಣೆಗೆ ತರುವ ಧರ್ಮವಾಗಿದೆ.

ಕಾಯಕಜೀವಿಗಳು 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂಬುದನ್ನು ಬಹುಬೇಗ ಅರಿತುಕೊಂಡರು. ಸತ್ಯಶುದ್ಧ ಕಾಯಕದಿಂದ ಕೂಡಿದ ಜೀವನವಿಧಾನವನ್ನು ಒಂದು ಮೌಲ್ಯವಾಗಿ ಸ್ವೀಕರಿಸಿದರು. ಕಾಯಕದ ಮೂಲಕ ಘನತೆವೆತ್ತ ವ್ಯಕ್ತಿತ್ವ ರೂಪುಗೊಳ್ಳುವುದು ಎಂಬುದು ಅವರಿಗೆ ಮನವರಿಕೆಯಾಯಿತು. ಯಾರಿಗೂ ಬೇಡದೆ ಮತ್ತು ಬಡತನಕ್ಕೆ ಅಂಜದೆ ಅವರು ಕಾಯಕ ಮಾಡುತ್ತ ಸ್ವತಂತ್ರಧೀರರಾಗಿ ಬದುಕಿದರು ಮತ್ತು ಅಸಹಾಯಕರಿಗೆ ದಾಸೋಹ ಭಾವದಿಂದ ಸಹಾಯಹಸ್ತ ಚಾಚಿದರು. ಕಾಯಕಜೀವಿಗಳ ಆತ್ಮಗೌರವ ಮತ್ತು ಸಮೂಹ ಪ್ರಜ್ಞೆಯಿಂದಾಗಿ ಇಂಥ ಅನುಪಮವಾದ ಸಾಮಾಜಿಕ ವ್ಯವಸ್ಥೆಯು ಸೃಷ್ಟಿಯಾಯಿತು. 'ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ' ಎಂದು ಬಸವಣ್ಣನವರು ಹೇಳಿದ್ದು 12ನೇ ಶತಮಾನದಲ್ಲಿ ಶರಣರೆಂಬ ನವಮಾನವರ ಸಮಾಜ ರೂಪುಗೊಂಡಿದ್ದಕ್ಕೆ ಸಾಕ್ಷಿಯಾಗಿದೆ.

ರಾಜ್ಯಶಕ್ತಿ ಮತ್ತು ಜನಶಕ್ತಿ

ಎಲ್ಲವನ್ನೂ ಈ ಭೂಮಿಯಲ್ಲೇ ಸಾಧಿಸಿತೋರಿಸಬೇಕೆಂಬುದು ಬಸವಣ್ಣನವರ ಛಲವಾಗಿತ್ತು. ಅಂತೆಯೆ ಅವರು ಕೈಲಾಸದ ಭ್ರಮೆಯನ್ನು ಕಳೆದು ನೆಲಸಂಸ್ಕೃತಿಯ ಹರಿಕಾರರೆನಿಸಿದರು. ಕಾಯಕಜೀವಿಗಳು ತಮ್ಮ ಶ್ರಮದ ಮೂಲಕ ಸಮೃದ್ಧವಾದ ಸಮಾಜವನ್ನು ಸೃಷ್ಟಿಸಿದರು. ಬಸವಣ್ಣನವರು ನವಸಮಾಜ ನಿರ್ಮಾಣಕ್ಕಾಗಿ ಬಿಜ್ಜಳನ ಭಂಡಾರದ ಮೇಲೆ ಅವಲಂಬಿತರಾಗಲಿಲ್ಲ. ದುಡಿಯುವ ಜನರ ಶಕ್ತಿಯ ಮೇಲೆ ಅವರಿಗೆ ಅಚಲವಾದ ವಿಶ್ವಾಸವಿತ್ತು. ರಾಜ್ಯಶಕ್ತಿಗಿಂತ ಜನಶಕ್ತಿ ಮಿಗಿಲು ಎಂಬುದನ್ನು ವಿಶ್ವದಲ್ಲೇ ಮೊದಲಬಾರಿಗೆ ಕಂಡುಹಿಡಿದವರೇ ಬಸವಣ್ಣನವರು. ಶರಣಸಂಕುಲದಲ್ಲಿ ಈ ಪರಿಕಲ್ಪನೆಯನ್ನು ಪ್ರಯೋಗಕ್ಕೆ ಒಡ್ಡಿ ಯಶಸ್ವಿಯಾದರು. ಅಂತೆಯೆ ಅವರಿಗೆ

"ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು
ಒರೆಯಾವಿನ ಬೆನ್ನ ಹರಿಯಲದೇಕಯ್ಯಾ,
ಲಜ್ಜೆಗೆಡಲೇಕೆ ನಾಣುಗೆಡಲೇಕೆ
ಕೂಡಲಸಂಗಮದೇವನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ"

ವಿವಿಧ ಧರ್ಮಗಳ ಪರಿಕಲ್ಪನೆಯಲ್ಲಿ ಹಾಲುಹಳ್ಳಗಳು ಸ್ವರ್ಗದಲ್ಲಿ ಹರಿಯುತ್ತವೆ. ಆದರೆ ಬಸವಣ್ಣನವರ ವಚನದಲ್ಲಿ ಊರ ಮುಂದೆ ಹಾಲುಹಳ್ಳ ಹರಿಯುತ್ತದೆ! ಕಾಯಕಜೀವಿಗಳ ಬದುಕು ಸಮೃದ್ಧವಾಗಿತ್ತು ಎಂಬುದಕ್ಕೆ ಬಸವಣ್ಣನವರ ಈ ಮಾತೇ ಸಾಕ್ಷಿಯಾಗಿದೆ.

ರಾಜ್ಯಶಕ್ತಿ ಎಂಬುದು ಹಿಂಸೆಯ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಜನಶಕ್ತಿಯು ಶಾಂತಿ, ಸೌಹಾರ್ದ, ಸಮೃದ್ಧಿ ಮತ್ತು ನೆಮ್ಮದಿಯನ್ನು ಬಯಸುತ್ತಿರುತ್ತದೆ. ಕಾಯಕ, ಪ್ರಸಾದ ಮತ್ತು ದಾಸೋಹದ ಮೂಲಕ ಮಾತ್ರ ನಿಜವಾದ ಜನಶಕ್ತಿ ರೂಪುಗೊಳ್ಳುವುದು ಎಂಬ ಪರಮಸತ್ಯವನ್ನು ಬಸವಣ್ಣನವರು 12ನೇ ಶತಮಾನದಲ್ಲೇ ಕಂಡುಹಿಡಿದರು.

ಕಾಯಕವು ನಮ್ಮ ಮನದಲ್ಲಿ ಆತ್ಮಗೌರವ ಮೂಡಿಸುವುದರ ಮೂಲಕ ಭಿಕ್ಷುಕರ ಸೃಷ್ಟಿಯಾಗದಂತೆ ನೋಡಿಕೊಳ್ಳುತ್ತದೆ. ಪರಾವಲಂಬಿ ಜೀವ[illegible] ಮುಕ್ತಗೊಳಿಸುತ್ತದೆ. ಎಲ್ಲವನ್ನೂ ಅವರು ಕಾ[illegible] ಮೂಲಕವೇ ಪಡೆಯುವುದರಿಂದ ವಸ್ತುಗಳ ಮಹತ್ವ[illegible] ಚೆನ್ನಾಗಿ ತಿಳಿದಿರುತ್ತದೆ. ಆದ್ದರಿಂದಲೇ ಅವರು ಪ್ರತಿ[illegible] ವಸ್ತುವನ್ನು ಪ್ರಸಾದದಂತೆ ಉಪಯೋಗಿಸುತ್ತಿ[illegible] ಕಾಯಕಜೀವಿಗಳು ಪರಹಿತ ಬಯಸುವುದು ಮತ್ತ[illegible] ನೋವಿಗೆ ಕ್ರಿಯಾತ್ಮಕವಾಗಿ ಸ್ಪಂದಿಸುವುದು ಸಹಜ[illegible] ಇದುವೇ ದಾಸೋಹ ಭಾವ. ಹೀಗೆ ದುಡಿಯುವ ಜ[illegible] ಸಹಜವಾಗಿರುವ ಕಾಯಕ, ಪ್ರಸಾದ ಮತ್ತು ದಾ[illegible] ಪ್ರಜ್ಞೆ, ಲಿಂಗಾಯತ ಧರ್ಮದ ಮೂರು [illegible] ಸ್ತಂಭಗಳಾಗಿವೆ. ಕಾಯಕ ಪ್ರಜ್ಞೆಯು ಉ[illegible] ಸಾಮರ್ಥ್ಯವನ್ನು ಹೆಚ್ಚಿಸಿತು. ಪ್ರಸಾದ ಪ್ರಜ್ಞೆಯು ವ[illegible] ಹಿತಮಿತವಾಗಿ ಬಳಸಿಕೊಳ್ಳುವುದನ್ನು ಕಲಿಸಿತು. ದಾ[illegible] ಪ್ರಜ್ಞೆಯು ಉತ್ಪಾದಿತ ವಸ್ತುಗಳ [illegible] ವಿತರಣೆಯಾಗುವಂತೆ ನೋಡಿಕೊಂಡಿತು. ಆದ್ದ[illegible] ಮೂರೂ ಪದಗಳು ಏಕಕಾಲಕ್ಕೇ ಶರಣ (ಲಿಂಗ[illegible] ಧರ್ಮದ ಜೀವನವಿಧಾನವಾಗಿ, ಸದೃಢ ಅರ್ಥ[illegible] ಮತ್ತು ಸಮತಾ ಸಮಾಜ ನಿರ್ಮಾಣಕ್ಕೆ ಕಾರಣ[illegible]

"ಕಾಯಕದಲ್ಲಿ ನಿರತರಾದಡೆ
ಗುರುದರ್ಶನವಾದರೂ ಮರೆಯಬೇಕು
ಕಾಯಕವೇ ಕೈಲಾಸವಾದ ಕಾರಣ
ಜಂಗಮದ ಹಂಗು ಹರಿಯಬೇಕು
ಸಾಕ್ಷಾತ್ ಅಮರೇಶ್ವರ ಲಿಂಗವಾ[illegible]
ಕಾಯಕದೊಳಗು."

ಕಾಯಕವು ಗುರು ಲಿಂಗ ಮತ್ತು ಜಂಗಮಕ್ಕಿ[illegible] ಮಿಗಿಲಾದುದು ಎಂದು ಆಯ್ದಕ್ಕಿ ಮಾರಯ್ಯ[illegible] ತಿಳಿಸಿದ್ದಾರೆ. ಕಾಯಕವಿಲ್ಲದೆ ತ್ರಿವಿಧ ದಾ[illegible] ನಡೆಯುವುದಿಲ್ಲ ಎಂಬ ಕಾರಣಕ್ಕಾಗಿ ಅವರು[illegible] ಹೇಳುವ ಮೂಲಕ ಕಾಯಕದ ಮಹತ್ವವನ್ನು ಸಾ[illegible] ಕಾಯಕವು ಮಾನವಕುಲಕ್ಕೆ ಮತ್ತು ಪ್ರಕೃತಿಗೆ ಪೂ[illegible] ಉತ್ಪದನಾ ವ್ಯವಸ್ಥೆಯಾಗಿದೆ.

ಕಾಯಕದ ಮೇಲೆ ಮೂರು ತೆರನಾದ ಜವಾಬ[illegible] ಇವುಗಳನ್ನು ತ್ರಿವಿಧ ದಾಸೋಹ ಎಂದು ಕರೆಯಲು[illegible] ಅರಿವೆಂಬ ಗುರುವಿಗೆ, ತತ್ತ್ವ ಎಂಬ ಲಿಂಗಕ್ಕೆ[illegible] ಸಮಾಜ ಎಂಬ ಜಂಗಮಕ್ಕೆ ದಾಸೋಹದ [illegible] ಸೇವೆ ಸಲ್ಲಿಸುವ ಉದ್ದೇಶದಿಂದಲೇ ಕಾಯ[illegible] ಮಾಡಬೇಕು. ಸ್ವಾವಲಂಬಿಯಾಗಿ ಕಾಯಕ ಮಾ[illegible] ಉದ್ದೇಶವನ್ನು ಈಡೇರಿಸಲಿಕ್ಕಾಗದು. ಹೀಗೆ [illegible] ಮಾಡುವಾಗ ಯಾವ ಮೂರನ್ನು ಮರೆಯಬೇಕೆಂದು[illegible] ಮಾರಯ್ಯನವರು ಹೇಳಿದರೋ ಆ ಮೂರಕ್ಕಾಗಿಯೆ[illegible] ಮಾಡಬೇಕೆಂದು ದೃಢನಿರ್ಧಾರವನ್ನು ಹೊಂದಿದವ[illegible] ಆದ್ದರಿಂದ ಕಾಯಕ ಎಂಬುದು ಗುರು ಲಿಂಗ ಜ[illegible] ಸೇವೆ ಮಾಡುವುದಕ್ಕೆ ಅನುಕೂಲವಾಗುವುದ[illegible] ಸ್ವಾವಲಂಬನೆಯ ಮೂಲಕ ಆತ್ಮಗೌರವವನ್ನು ಕಾಪ[illegible] ಕುಟುಂಬ ರಕ್ಷಣೆಯ ಕಾಳಜಿ ಮೂಡಿಸುತ್ತದೆ. ಮ[illegible] ಸಮಾಜದ ಸೇವೆಗೆ ಅನುವು ಮಾಡಿಕೊಡುತ್ತದೆ[illegible]

ಬಸವಣ್ಣನವರ ಜೀವಜಾಲದ ಪರಿ[illegible]

ಜಂಗಮ ಪದದ ಅರ್ಥವಿಸ್ತಾರ ಸಕಲ ಚರಾಚ[illegible] ಒಳಗೊಳ್ಳುವುದರಿಂದ ಕಾಯಕವು ಸಕಲ ಜೀವ[illegible] ಲೇಸನೆ ಬಯಸುವಂಥ ಮನಸ್ಥಿತಿಯನ್ನು ಉಂಟುಮಾ[illegible] 'ಜೀವಜಾಲದಲ್ಲಿದೆ ಚರಾಚರವೆಲ್ಲ' ಎಂದು ಬಸವ[illegible] ಹೇಳಿದ್ದಾರೆ. ಜೀವಜಾಲವನ್ನು ರಕ್ಷಿಸುವುದು [illegible] ನೈತಿಕ ಜವಾಬ್ದಾರಿಯಾಗಿದೆ. ಭೂ[illegible] ವಾಯುಮಲಿನವಾಗದಂತೆ ನೋಡಿಕೊಳ್ಳಬೇಕಿದೆ. ಅ[illegible] ಸಂರಕ್ಷಿಸಬೇಕಿದೆ. ಜಲಚರ ಸಮೇತ ಸಕಲ ಪ್ರಾ[illegible] ಬಗ್ಗೆ ಕೂಡ ಕಾಳಜಿ ವಹಿಸಬೇಕಿದೆ. ಜೀವಜಾ[illegible] ರಕ್ಷಿಸದಿದ್ದರೆ ಜಗತ್ತು ಸರ್ವನಾಶವಾಗುವುದರಲ್ಲಿ ಸಂಶ[illegible]

"ಧರಣಿಯ ಮೇಲೊಂದು ಹಿರಿದಪ್ಪ ಅಂಗ[illegible]

ಸರದ ಕುಳಿತಿರ್ದ ನಮ್ಮ ಮಹಾದೇವಸೆಟ್ಟಿ.
ಮ್ಮನವಾದಡೆ ಒಡನೆ ನುಡಿವನು, ಇಮ್ಮನವಾದಡೆ
ನುಡಿಯನು.
ಾಣೆಯ ಸೋಲ, ಅರ್ಧಗಾಣೆಯ ಗೆಲ್ಲ;
ಜಾಣ ನೋಡವ್ವ ನಮ್ಮ ಕೂಡಲಸಂಗಮದೇವ."

ಬಸವಣ್ಣನವರು ಜೀವಜಾಲ ಸಮತೋಲನದ ತ್ವವನ್ನು ಸಾರಿದ್ದಾರೆ. ದೇವ ಮಹಾದೇವಸೆಟ್ಟಿ ಈ ಯ ಮೇಲೆ ಲೋಕವ್ಯವಹಾರವೆಂಬ ಬೃಹತ್ ಡಿಯನ್ನು ಇಟ್ಟುಕೊಂಡು ವ್ಯಾಪಾರಕ್ಕೆ ಕುಳಿತಿದ್ದಾನೆ. ೀಭಾವದಿಂದ ತಮಗೆ ಎಷ್ಟು ಬೇಕೋ ಅಷ್ಟನ್ನು ಬಯಸುವವರ ಕೂಡ ಆತ ವ್ಯವಹರಿಸುತ್ತಾನೆ. ಪಿತನದಿಂದ ಇಮ್ಮನಸು ಹೊಂದಿದವರ ಜೊತೆ ವ್ಯವಹಾರವಿಲ್ಲ. ಆತನ ಜೀವಜಾಲ ಸಮತೋಲನದ ಯಲ್ಲಿ ಒಂದಿಷ್ಟೂ ವ್ಯತ್ಯಾಸ ಕಂಡುಬರುವುದಿಲ್ಲ. ುವವನಿಗಾಗಲಿ ಕೊಳ್ಳುವವನಿಗಾಗಲಿ ಹಾನಿ ಎಂಬುದೇ ಆದ್ದರಿಂದಲೇ ಇಂಥ ಪ್ರಕೃತಿಯನ್ನು ಸೃಷ್ಟಿಸಿದ ರ್ತ ಜಾಣನಲ್ಲದೆ ಇನ್ನೇನಾಗಿರಲು ಸಾಧ್ಯ?

ಸಕಲ ಜೀವರಾಶಿಗೆ ಇಂಥ ಸೃಷ್ಟಿಯನ್ನು ನಿರ್ಮಿಸಿದ ರ್ತ ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಮಾಣನಾಗಿದ್ದಾನೆ. ಆತ ಅಗಮ್ಯನಾಗಿದ್ದರಿಂದ ಆತನ ಹೋಗಲಿಕ್ಕಾಗದು. ಆತ ಅಗೋಚರನಾಗಿರು ಿಂದ ಆತನನ್ನು ಹೊರಗಣ್ಣಿನಿಂದ ನೋಡಲಿಕ್ಕಾಗದು. ಅಪ್ರತಿಮನಾಗಿರುವುದರಿಂದ ಆತನನ್ನು ಯಾವುದರ ಗೂ ಹೋಲಿಸಲಿಕ್ಕಾಗದು. ಅನಂತನಾದ ಆತ ಮಾಣನಾಗಿರುವುದರಿಂದ ಆತನ ಉದ್ದಗಲಗಳನ್ನು ುಲಿಕ್ಕಾಗದು.

'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮಕುಟ
ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೇ
ನಿನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ."

ಬಸವಣ್ಣನವರು ಅಗೋಚರನಾದ ದೇವರನ್ನು ಲಿಂಗವೆಂಬ ಕುರುಹಿನ ರೂಪದಲ್ಲಿ ನಮ್ಮ ಕರಸ್ಥಲಕ್ಕೆ ದ್ದಾರೆ.

ಷ್ಟಲಿಂಗದಲ್ಲಿ ವಿಶ್ವಪ್ರೇಮದ ಪಾಠ

ಬಸವಣ್ಣನವರು ಕೊಟ್ಟ ಈ ಇಷ್ಟಲಿಂಗವು ಇಡೀ ್ರಂಡದ ಸಂಕೇತವೂ ಆಗಿದೆ. ಇದರಲ್ಲಿ ಸೂರ್ಯ ತಾರೆಯರು ಸೇರಿದಂತೆ ಸಕಲಜೀವರಾಶಿಯಿಂದ ದ ಪೃಥ್ವಿಯೂ ಉಂಟು. ಇಷ್ಟಲಿಂಗ ಪೂಜಕರು ವಿಶ್ವವನ್ನೇ ಪೂಜಿಸುವವರಾಗಿದ್ದಾರೆ. ಲಿಂಗಾಯತ ದಲ್ಲಿ ಪೂಜೆ ಎಂದರೆ ಮಾನವ ಸಕಲಜೀವಿಗಳನ್ನು ಾವಲೋಕದಲ್ಲಿ ಇಂಬಿಟ್ಟುಕೊಳ್ಳುವುದು. ಆದ್ದರಿಂದ ಂಗಪೂಜಕನಿಗೆ ಯಾವುದೂ ಹೊರಗಿನದಲ್ಲ ಮತ್ತು ೂ ಹೊರಗಿನವರಲ್ಲ. ಬಸವಣ್ಣನವರು ಇಷ್ಟಲಿಂಗದ ಲಕ ವಿಶ್ವಪ್ರೇಮದ ಪಾಠವನ್ನು ಹೇಳಿಕೊಟ್ಟಿದ್ದಾರೆ. ನವಮಾನವರೆಂದರೆ ಶರಣರು. ಇವರೇ ಾನವರು. ಹೀಗೆ ಮಾನವನನ್ನು ವಿಶ್ವಮಾನವನನ್ನಾಗಿ ುವ ಧರ್ಮ ಇದಾಗಿದೆ.


ಬಸವಣ್ಣನವರು ಬಯಸಿದಂತೆ ವಿಶ್ವಮಾನವನಾಗುವುದು ದ ಕೆಲಸವಲ್ಲ. ಏಕಾತ್ಮನು ಲೋಕಾತ್ಮರ ಜೊತೆ ದಾಗ ಮಾತ್ರ ತನ್ನೊಳಗಿನ ಪರಮಾತ್ಮನನ್ನು ಕೂಡುವ ತೆ ಪಡೆಯುತ್ತಾನೆ. ಆ ಮೂಲಕ ಶಿವಸ್ವರೂಪಿಯಾಗಿ ಾನವನಾಗುತ್ತಾನೆ. ಲಿಂಗಾಂಗಸಾಮರಸ್ಯದಿಂದ ಾನವರಾಗುವ ಕ್ರಮವನ್ನು ಬಸವಣ್ಣನವರು ದ್ದಾರೆ. ನಾವು ಅಂಗ. ನಮ್ಮನ್ನು ಜೀವಂತವಾಗಿರಿಸಿ ು ನಮ್ಮೊಳಗಿನ ಲಿಂಗ. ನಾವು ಅಂಗವಾದಂತೆ ಸಕಲ ಚರಾಚರವೂ ಅಂಗವೇ ಆಗಿದೆ. ಎಲ್ಲ ಗಳಲ್ಲಿಯೂ ಲಿಂಗವೇ ಇದೆ. ಆದ್ದರಿಂದ ನಾವು ಪ್ರತಿಯೊಂದು ಜೀವಿಯ ಬಗ್ಗೆ ಜೀವಕಾರುಣ್ಯವನ್ನು ುದಾಗ ಮಾತ್ರ ನಮ್ಮೊಳಗಿನ ದೇವರ ಜೊತೆ ಗಲು ಸಾಧ್ಯವಾಗುತ್ತದೆ. ನಾವು ನಮ್ಮೊಳಗಿನ ದೇವರ ಐಕ್ಯವನ್ನು ಸಾಧಿಸುವುದೇ ಲಿಂಗಾಂಗಸಾಮರಸ್ಯ. ವಸ್ತು ಮತ್ತು ಚೈತನ್ಯದ ಅವಿನಾಭಾವ ಸಂಬಂಧ. ವಿಜ್ಞಾನದಲ್ಲಿ 'ಮ್ಯಾಟರ್ ಅಂಡ್ ಎನರ್ಜಿ' ಕರೆಯುತ್ತಾರೆ. ಮ್ಯಾಟರ್ ಅಂಗವಾದರೆ ಎನರ್ಜಿ ಾಗುತ್ತದೆ. ಇಡೀ ವಿಶ್ವ ಚೈತನ್ಯದಿಂದ ಸೃಷ್ಟಿಯಾಗಿದೆ. ಒಂದು ದಿನ ನಿರ್ನಾಮವಾಗಿ ಚೈತನ್ಯವನ್ನೇ ದೆ ಎಂದು ವಿಜ್ಞಾನ ಹೇಳುತ್ತದೆ. ಇದನ್ನೇ ಪ್ಪುಗಳು "ರೂಪಿಂಗೆ ಕೇಡುಂಟು" ಎಂದು ರೆ. "ಸಕಲ ಜೀವರೆಲ್ಲರೂ ಪೃಥ್ವಿಯಿಂದ ಉದ್ಭವ" ಸಾರಿದ ಅಲ್ಲಮಪ್ರಭುಗಳು ಕಣ್ಣಿಗೆ ಕಾಣುವುದೆಲ್ಲವೂ ಜೀಬೇಕು ಎಂದು ಹೇಳಿದ್ದು ಎಷ್ಟೊಂದು ಕವಾಗಿದೆ! ಮಾನವರು ಇದನ್ನರಿತು ಇತರ ೊಂದಿಗೆ, ಸಕಲಜೀವಿಗಳೊಂದಿಗೆ ಹಾಗೂ ಒಟ್ಟಾರೆ ೊಂದಿಗೆ ಸೌಹಾರ್ದಯುತವಾಗಿ ಬದುಕಬೇ

ಕೆಂಬುದೇ ಬಸವಧರ್ಮವಾದ ಲಿಂಗಾಯತ ಧರ್ಮದ ಸಂದೇಶವಾಗಿದೆ.

ಇದು ಬರಿ ಸಂದೇಶ ಮಾತ್ರವಲ್ಲ, ಇದನ್ನು ಕಾರ್ಯಗತಗೊಳಿಸುವ ವಿಧಾನವನ್ನೂ ಬಸವಾದಿ ಶರಣರು ತಿಳಿಸಿಕೊಟ್ಟಿದ್ದಾರೆ. ನಮ್ಮ ಕಣ್ಣಿಗೆ ಕಾಣುವ ಅನುಭವದ ಜಗತ್ತಿನಲ್ಲಿ ಬದುಕುತ್ತಲೇ ಒಳಗಣ್ಣಿಗೆ ಕಾಣುವ ಅನುಭಾವದ ಜಗತ್ತಿನಲ್ಲಿ ಆನಂದಮಯವಾಗಿ ಇರಲು ಸಾಧ್ಯವಾಗುವಂಥ ಮಾರ್ಗದರ್ಶಿ ಸೂತ್ರಗಳನ್ನು ಲಿಂಗತತ್ತ್ವ ಒಳಗೊಂಡಿದೆ. ಆ ಸೂತ್ರಗಳು ಶರಣರ ವಚನಗಳಲ್ಲಿ ಹಾಸುಹೊಕ್ಕಾಗಿವೆ. ಇಷ್ಟಲಿಂಗವು ಅನುಭಾವದೆಡೆಗೆ ಒಯ್ಯುವ ಲಿಂಗಾಂಗ ಸಾಮರಸ್ಯಕ್ಕಷ್ಟೇ ಸೀಮಿತವಾಗಿಲ್ಲ, ಅದು ಐಹಿಕ ಬದುಕಿನ ಎಲ್ಲ ಸ್ತರಗಳಲ್ಲೂ ನಮ್ಮನ್ನು ಕಾಪಾಡುವ ಶಕ್ತಿಯನ್ನು ಹೊಂದಿದೆ.

ಸಮೂಹ ಶಕ್ತಿ

ಇಷ್ಟಲಿಂಗವು ಸಮೂಹದ ಪರವಾಗಿದ್ದು ಸಮೂಹ ಶಕ್ತಿಯನ್ನು ಒಂದುಗೂಡಿಸುವ ಸಾಮರ್ಥ್ಯವನ್ನು ಹೊಂದಿದೆ. "ದಾಸೀಪುತ್ರನಾಗಲಿ ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ" ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಇಷ್ಟಲಿಂಗ ದೀಕ್ಷೆಯಾದ ಮೇಲೆ ಅನೈತಿಕ ಸಂಬಂಧದಿಂದ ಜನಿಸಿದ ದಾಸೀಪುತ್ರರು ಮತ್ತು ವೇಶ್ಯಾಪುತ್ರರು ಹಾಗೂ ದಾಂಪತ್ಯ ಸಂಬಂಧದಿಂದ ಜನಿಸಿದ



ಪುತ್ರರಲ್ಲಿ ಬಸವಣ್ಣನವರು ಯಾವುದೇ ಭೇದಭಾವ ಎಣಿಸಲಿಲ್ಲ. ಇಷ್ಟಲಿಂಗ ಧರಿಸಿದ ವೇಶ್ಯಾಪುತ್ರರು, ನಿರ್ಗತಿಕರ, ಬಡವರ, ಶ್ರೀಮಂತರ ಮತ್ತು ರಾಜರ ಮಕ್ಕಳು ಒಂದೇ ಸ್ಥಾನಮಾನ ಹೊಂದಿದ್ದರು. ಶರಣಸಂಕುಲದಲ್ಲಿ ಅವರೆಲ್ಲ ಆತ್ಮಗೌರವ ಮತ್ತು ಕಾಯಕಸಂಸ್ಕೃತಿಯೊಂದಿಗೆ ಬದುಕುತ್ತ ಸಮೂಹಶಕ್ತಿಯಾಗಿ ಬೆಳೆದರು.

ಇವರಲ್ಲಿನ ಅನೇಕರು ಶರಣಸಂಕುಲಕ್ಕೆ ಬರುವ ಮೊದಲು ಅರಮನೆಯಲ್ಲಿ, ಗುರುಮನೆಯಲ್ಲಿ ಮತ್ತು ದೇವಾಲಯಗಳಲ್ಲಿ ಬಿಟ್ಟಿಕೂಲಿ ಮಾಡುತ್ತ ಹೊಟ್ಟೆಪಾಡಿಗಾಗಿ ಜೀವ ಸವೆಸುತ್ತಿದ್ದರು. ಅವರಿಗೆಲ್ಲ ಆಹಾರವೇ ಕೂಲಿಯಾಗಿತ್ತು. ಕೆಲಸ ಮಾಡಿಕೊಳ್ಳುವವರು ಅವರತ್ತ ತಲೆ ಎತ್ತಿ ಕೂಡ ನೋಡುತ್ತಿರಲಿಲ್ಲ. ಇಂಥ ಸ್ಥಿತಿಯನ್ನು 'ಅರಸರಿಯದ ಬಿಟ್ಟಿ' ಎಂದು ಬಸವಣ್ಣನವರು ತಿಳಿಸಿದ್ದಾರೆ.


ಕಾಯಕಜೀವಿಗಳು ಸಹಸ್ರಾರು ವರ್ಷಗಳಿಂದ ಬೆಳೆದುಬಂದ ಮಾನಸಿಕ ಗುಲಾಮಗಿರಿಯಿಂದ ಹೊರಬಂದು ವೃತ್ತಿಗೌರವದ ವಾತಾವರಣದಲ್ಲಿ ವ್ಯಕ್ತಿತ್ವ ವಿಕಸನ ಹೊಂದುತ್ತ ಮೊದಲ ಬಾರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಆನಂದವನ್ನು ಅನುಭವಿಸಿದರು. ಶೋಷಣೆಯ ಕೇಂದ್ರಗಳಾಗಿ ಬೆಳೆದಿದ್ದ ಮಂದಿರ ವ್ಯವಸ್ಥೆಯನ್ನು ಬಸವಣ್ಣನವರು ತಿರಸ್ಕರಿಸಿದ್ದರಿಂದ ಕಾಯಕಜೀವಿಗಳು ಮಂದಿರಗಳ ಸಂಬಂಧವನ್ನು ಸಂಪೂರ್ಣ ವಾಗಿ ಕಡಿದುಕೊಂಡರು. ತಮ್ಮ ಆರಾಧ್ಯ ದೈವಗಳಾಗಿದ್ದ ಸ್ಥಾವರಲಿಂಗಗಳನ್ನು ಕೂಡ ತಿರಸ್ಕರಿಸಿ ಬಸವಣ್ಣನವರು ಕೊಟ್ಟ ಇಷ್ಟಲಿಂಗಗಳನ್ನು ಎದೆಯ ಮೇಲೆ ಕಟ್ಟಿಕೊಂಡು ಆ ಮೂಲಕ ದೇವಸಾನಿಧ್ಯವನ್ನು ಪಡೆದರು. ಏಕದೇವೋಪಾಸನೆಯ ಮೂಲಕ ಕಾಯಕಜೀವಿಗಳು ತಮ್ಮ ಜಾತಿಗಳಿಂದ ಹೊರಬಂದು ಕಾಯಕಜೀವಿಗಳ ವರ್ಗವಾಗಿ ರೂಪು ಗೊಂಡರು. ಹೀಗೆ ಜನ ಜನ ಸೇರಿ ಜನಸಾಗರವೇ ಆದರು. ಮೊದಲಬಾರಿಗೆ ಜಗತ್ತಿನಲ್ಲಿ ದುಡಿಯುವ ಜನರ ಸಮೂಹಶಕ್ತಿಯ ಉದಯವಾಯಿತು! ಶರಣಸಂಕುಲ ಜಾತಿವರ್ಗ ಮತ್ತು ಲಿಂಗಭೇದಗಳಿಲ್ಲದ ಹೊಸ ಸಮಾಜ ವಾಯಿತು. ಮೇಲ್ಜಾತಿಯವರು, ಕೆಳಜಾತಿಯವರು, ಬಡವರು ಮತ್ತು ಶ್ರೀಮಂತರು ಶರಣಸಂಕುಲದಲ್ಲಿ ಇಷ್ಟಲಿಂಗ ದೀಕ್ಷೆಯ ಮೂಲಕ ಒಂದಾಗಿ ಹೋದರು. ಅವರು ತಮ್ಮ ಜಾತಿ ಮತ್ತು ವರ್ಗ ಲಕ್ಷಣಗಳನ್ನು ಕಳೆದುಕೊಂಡು ಪರಿಶುದ್ಧ ಮಾನವರಾದರು.

ಇಂದು ನಡೆದಾಡುವ ದೇವರು ಎನಿಸಿಕೊಳ್ಳುವವರು ಈ ಜಗತ್ತನ್ನು ಒಂದು ಮಾಯೆ ಎಂದು ಭಾವಿಸುತ್ತಾರೆ. 'ಇದು ಐತಿ ಅಂದ್ರ ಐತಿ; ಇಲ್ಲ ಅಂದ್ರ ಇಲ್ಲ' ಎಂಬ ವಾದವನ್ನು ಮಂಡಿಸುತ್ತಾರೆ. ಹೂವಿನ ಪರಿಮಳ, ಪಕ್ಷಿಗಳ ಮಧುರ ಗಾನ ಮತ್ತು ತಂಗಾಳಿಯ ಬಗ್ಗೆ ಇದೀ ಜೀವನ ಮಾತನಾಡುತ್ತ ಜನರು ತಮ್ಮ ದೈನಂದಿನ ಬದುಕಿನ ಕಷ್ಟನಷ್ಟಗಳನ್ನು ಮಾಯೆ ಎಂದು ಭ್ರಮಿಸುವ ಹಾಗೆ ಮಾಡುತ್ತಾರೆ. ಇವರು ಸಮಾಜದಲ್ಲಿನ ಜಾತಿ ಮತ್ತು ವರ್ಗ ಲಕ್ಷಣಗಳನ್ನು ಗುರುತಿಸುವ ಗೊಡವೆಗೆ ಹೋಗುವುದಿಲ್ಲ. ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿ ಇಟ್ಟು ತೂಗುತ್ತಾರೆ. ಶೋಷಕರಿಗೆ ಇಂಥವರನ್ನು ಕಂಡರೆ ಬಹಳ ಇಷ್ಟ. ಏಕೆಂದರೆ ಇವರು ಜನರನ್ನು ವಾಸ್ತವದ ನೆಲೆಯಿಂದ ಭ್ರಮಾತ್ಮಕ ನೆಲೆಗೆ ಒಯ್ಯುವ ಮೂಲಕ ಆ ಜನರಲ್ಲಿನ ಹೋರಾಟ ಮನೋಭಾವವನ್ನು ನಿಷ್ಕ್ರಿಯಗೊಳಿಸುತ್ತಾರೆ. ವಿವಿಧ ಕ್ಷೇತ್ರಗಳಲ್ಲಿನ ಶೋಷಕರಿಗೆ ಇದರಿಂದ ಬಹಳೇ ಲಾಭವಾಗುವುದು. ಆದ್ದರಿಂದ ಪ್ರತಿದಿನ ಲಕ್ಷ ರೂಪಾಯಿ ಖರ್ಚಾದರೂ ಇಂಥವರಿಂದ ತಿಂಗಳ ಪರ್ಯಂತ ಪ್ರವಚನದ ಏರ್ಪಾಡು ಮಾಡುತ್ತಾರೆ. ಸಹಸ್ರ ಸಹಸ್ರ ಜನರು ಇಂಥ ಭ್ರಮೆಯನ್ನು ಸೃಷ್ಟಿಸುವ ಪ್ರವಚನಗಳಿಗೆ ಸಹಜವಾಗಿಯೇ ಮಾರುಹೋಗುತ್ತಾರೆ. ಜೀವನ ನಶ್ವರ ಎಂದು ಗುಣಗುತ್ತ ನಿಷ್ಕ್ರಿಯರಾಗುವ ಮೂಲಕ ಶೋಷಣೆಯನ್ನು ಅನುಭವಿಸುತ್ತಲೆ ಬದುಕನ್ನು ಸವೆಸುತ್ತಾರೆ. ಈ ದೇಶದಲ್ಲಿ ದೇವರ ದಿಂಡರ, ಬಾಬಾಗಳ, ಶ್ರೀಶ್ರೀಗಳ, ಸ್ವಾಮೀಜಿಗಳನ್ನು ಬಳಸಿಕೊಳ್ಳುವುದರ ಮೂಲಕ ಸುಲಿಗೆಕೋರರು ಸಮಾಜದ ಸುಲಿಗೆ ಮಾಡುತ್ತಲೇ ಇರುತ್ತಾರೆ. ಜನರು ಚೆನ್ನಬಸವಣ್ಣನವರು ಹೇಳುವಂತೆ ನರಗುರಿಗಳಾಗಿರುತ್ತಾರೆ. ಇಡೀ ಸಮಾಜವನ್ನು ಒಂದು ಮಾಡಬೇಕಾದರೆ ಆ ಸಮಾಜದ ವರ್ಗ ಲಕ್ಷಣಗಳನ್ನು ಗುರುತಿಸಿ ಮೊದಲಿಗೆ ಕಾಯಕಜೀವಿಗಳ ರಕ್ಷಣೆ ಮಾಡಬೇಕು. ಅರಿವಿನೊಂದಿಗೆ ದುಡಿಯುವ ವರ್ಗ ಹೋರಾಟದ ಮಾರ್ಗ ಹಿಡಿದಾಗ ಮಾತ್ರ ವರ್ಗರಹಿತ ಸಮಾಜ ನಿರ್ಮಾಣವಾಗಲು ಸಾಧ್ಯ. ಈ ಸತ್ಯವನ್ನು ಕಂಡುಹಿಡಿದ ಬಸವಣ್ಣನವರಿಗೆ ಇಡೀ ಜಗತ್ತಿನ ಕಾಯಕಜೀವಿಗಳು ಗೌರವಿಸುವುದರಲ್ಲಿ ಸಂಶಯವಿಲ್ಲ. ಬಸವತತ್ವಗಳನ್ನು ಜಗತ್ತಿಗೆ ಮುಟ್ಟಿಸಿದಾಗಲೇ ಇದೆಲ್ಲ ಸಾಧ್ಯವಾಗುವುದು.

ಬಡ್ಡಿರಹಿತ ಸಾಮಾಜಿಕ ವ್ಯವಸ್ಥೆ

ಲಿಂಗಭಕ್ತರಾದವರು ವೈಯಕ್ತಿಕವಾಗಿ ಸಂಪತ್ತನ್ನು ಕೂಡಿ ಕರಿಸುವ ಹಾಗಿಲ್ಲ. 'ಅನ್ನದೊಳಗೊಂದಗುಳ, ಸೀರೆಯೊಳಗೊಂದೆಳೆಯ, ಹೊನ್ನಿನೊಳಗೊಂದೊರೆಯ ಇಂದಿಂಗೆ ನಾಳಿಂಗೆ ಎಂದೊಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ' ಎಂದು ಬಸವಣ್ಣನವರು ಹೇಳುವ ಮೂಲಕ ಖಾಸಗಿ ಆಸ್ತಿಗೆ ತಿಲಾಂಜಲಿ ಇತ್ತಿದ್ದಾರೆ.

ಯಾರು ಎಷ್ಟೇ ಗಳಿಸಿದರೂ ಹೆಚ್ಚಿನದನ್ನು ಶಿವನಿಧಿ ಎನಿಸಿಕೊಂಡ ಸಾಮಾಜಿಕ ನಿಧಿಗೇ ಸಲ್ಲಿಸಬೇಕಿತ್ತು. ಶರಣ ಸಂಕುಲದ ಸದಸ್ಯರು ತಮಗೆ ಬೇಕಾದಾಗ ಸಂಪತ್ತಿನ ಬಳಕೆ ಮಾಡುತ್ತಿದ್ದರು. ಮತ್ತೆ ಸಾಧ್ಯವಾದಾಗ ಶಿವನಿಧಿಗೆ ಅರ್ಪಿಸುತ್ತಿದ್ದರು. ಬಡ್ಡಿಯ ವ್ಯವಸ್ಥೆಯು ಕಾಯಕ ಸಿದ್ಧಾಂತಕ್ಕೆ ವಿರುದ್ಧವಾಗಿರುವ ಕಾರಣ ಬಸವಣ್ಣನವರು ಬಡ್ಡಿಯನ್ನು ನಿಷೇಧಿಸಿದ್ದರು. "ಮೃಡಭಕ್ತರಿಗಲ್ಲದೆ ಕಡ, ಬಡ್ಡಿಯ ಕೊಡಲಾಗದು. ಬಂದರೆ ಒಂದು ಲೇಸು ಬಾರದಿದ್ದರೆ ಎರಡು ಲೇಸು" ಎಂದು ಬಸವಣ್ಣನವರು ತಿಳಿಸಿದ್ದಾರೆ. ಕಾಯಕಜೀವಿಗಳು ದಾಸೋಹ ಮಾಡುವುದರಲ್ಲೇ ಆನಂದ ಪಡುತ್ತಿದ್ದರೇ ಹೊರತು ಏನನ್ನಾದರೂ ಪಡೆಯುವುದರಲ್ಲಿ ಅಲ್ಲ. ಹೀಗಾಗಿ ಕಾಯಕದ ಮೂಲಕ ಅವರು ಸಂಪಾದನೆ ಮಾಡಿದರು. ಸಂಪಾದನೆ ಮಾಡಿದ್ದನ್ನು ದೇವರ ಪ್ರಸಾದವೆಂದು ಸ್ವೀಕರಿಸಿ ಸ್ವಲ್ಪವೂ ಹಾಳಾಗದಂತೆ



ಬಳಸಿದರು. ಸಂಪಾದಿಸಿದ್ದರಲ್ಲಿ ಏನನ್ನೂ ಉಳಿಸಿಕೊಳ್ಳದೆ ಶಿವನಿಧಿಗೆ ಅರ್ಪಿಸಿದರು. ನಿತ್ಯ ಕಾಯಕದ ಮೂಲಕವೇ ಬದುಕಿದರು. ಆಯ್ದಕ್ಕಿ ಮಾರಯ್ಯನವರು ಒಂದು ಸಲ ಹೆಚ್ಚಿಗೆ ಅಕ್ಕಿಯನ್ನು ತಂದದ್ದಕ್ಕೆ ಅವರ ಪತ್ನಿ ಆಯ್ದಕ್ಕಿ ಲಕ್ಕಮ್ಮ "ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ" ಎಂದು ಪ್ರಶ್ನಿಸುತ್ತಾಳೆ. ಕಡುಬಡವಿಯಾದ ಈ ಶರಣೆ ರಾಜ್ಯವ್ಯವಸ್ಥೆಯನ್ನೇ ಎದುರು ಹಾಕಿಕೊಳ್ಳುವಂಥ ಧೈರ್ಯ ತಾಳಿದ್ದು ಜನಶಕ್ತಿಯ ದ್ಯೋತಕವಾಗಿದೆ. ಇಂಥ ಜನಶಕ್ತಿಯನ್ನು ಸೃಷ್ಟಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ.

ಬಸವಣ್ಣನವರು ರಾಜ್ಯಶಕ್ತಿಯ ಮೇಲೆ ಅವಲಂಬಿತವಾಗದೆ ಜನಶಕ್ತಿಯ ಸಮಾಜವನ್ನು ಕಟ್ಟುವ ಕನಸು ಕಂಡಿದ್ದರು. ಅಂತೆಯೆ 'ಊರಮುಂದೆ ಹಾಲಹಳ್ಳ ಹರಿಯುತ್ತಿರಲು ಬಿಜ್ಜಳನ ಭಂಡಾರವೆನಗೇಕಯ್ಯಾ' ಎಂದು ಹೇಳಿದ್ದರು. ಊರ ಮುಂದೆ ಹಾಲಹಳ್ಳ ಹರಿಯುವುದೆಂದರೆ ಜನಶಕ್ತಿಯ ಗುಣಗಾನ ಮಾಡುವುದು. ಹೀಗೆ ಜಗತ್ತಿನ ಯಾವ ಭಾಗದಲ್ಲೂ ಹಾಲಹಳ್ಳ ಹರಿಯಲಿಲ್ಲ. ಅದು ಹರಿದದ್ದು ಸ್ವರ್ಗದಲ್ಲಿ ಮಾತ್ರ ಎಂದು ವಿವಿಧ ಧರ್ಮಗ್ರಂಥಗಳು ಸಾರುತ್ತವೆ. ಇಷ್ಟಲಿಂಗವು ಹೀಗೆ 33 ಕೋಟಿ ದೇವತೆಗಳನ್ನು ದೂರ ಸರಿಸಿ ದುಡಿಯುವ ಜನರ ಎದೆಯ ಮೇಲೆ ರಾರಾಜಿಸಿತು. ದುಡಿಯುವ ಜನರನ್ನು ಒಂದು ವರ್ಗವಾಗಿ ರೂಪಿಸಿತು.

ಅರ್ಥಶಕ್ತಿ

ಇಷ್ಟಲಿಂಗವು ಎದೆಯ ಮೇಲೆ ಬಂದ ಬಳಿಕ ಕಾಯಕಜೀವಿಗಳು ಗುಡಿ ಗುಂಡಾರ ಸುತ್ತುವುದನ್ನು ಮತ್ತು ಅಲ್ಲಿ ಬಿಟ್ಟಿಕೂಲಿ ಮಾಡುವುದನ್ನು ನಿಲ್ಲಿಸಿದರು. ದೇವರಿಗೆ ಹರಕೆ ಹೊರುವುದು ತಪ್ಪಿತು. ಬೆಳ್ಳಿಬಟ್ಟಲು, ಬಂಗಾರದ ತೊಟ್ಟಿಲು, ಪ್ರಭಾವಳಿ, ಕುರಿ, ಕೋಣ, ತೆಂಗಿನಕಾಯಿ ಹೀಗೆ ಯಾವುದೂ ಇಷ್ಟಲಿಂಗ ಪೂಜೆಗೆ ಬೇಕಿಲ್ಲ. ಜಗತ್ತಿನ ಖರ್ಚಿಲ್ಲದ ಮಹಾದೇವರಿದು. ಭಾರತದಲ್ಲಿ ಮೂಢನಂಬಿಕೆ ಎಷ್ಟೊಂದು ವ್ಯಾಪಕವಾಗಿದೆ ಎಂದರೆ ಅದರ ಮೇಲೆ ಖರ್ಚು ಮಾಡುವ ಹಣ ಪಂಚವಾರ್ಷಿಕ ಯೋಜನೆಯ ಹಣವನ್ನೂ ಮೀರಿಸುತ್ತದೆ! ಕಾಯಕಜೀವಿಗಳ ಬಹುಪಾಲು ಶ್ರಮ ದೇವರು ಮತ್ತು ಮೂಢ ನಂಬಿಕೆಗಳಿಗೇ ಖರ್ಚಾಗುತ್ತಿತ್ತು. ಈ ಅನಿಷ್ಟ ಪದ್ಧತಿಗಳಿಗೆ ಮಾಡುವ ಖರ್ಚು ವೆಚ್ಚಗಳು ನಿಂತುಹೋದದ್ದರಿಂದ ಕಾಯಕಜೀವಿಗಳು ಸಾಲದ ಹೊರೆಯಿಂದ ಮುಕ್ತರಾಗಿ ನೆಮ್ಮದಿಯಿಂದ ಬದುಕುವಂತಾಯಿತು. ಹೀಗೆ ಇಷ್ಟಲಿಂಗವು ಅವರ ಆರ್ಥಿಕ ಶಕ್ತಿಯನ್ನು ಹೆಚ್ಚಿಸಿತು.

ಮನೋಶಕ್ತಿ

"ಕತ್ತಲೆ ಹರಿಯದೊಡಾ ಜ್ಯೋತಿಯದೇಕೋ, ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆ ಅದೇಕೋ" ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಮೂಢನಂಬಿಕೆಗಳ ತಾಯಿಯಾದ ಕರ್ಮಸಿದ್ಧಾಂತವನ್ನು ಅಲ್ಲಗಳೆಯುವುದೇ ಬಸವಣ್ಣನವರ ಗುರಿಯಾಗಿತ್ತು. ಕರ್ಮ ಎಂಬುದು ಇಲ್ಲವೇ ಇಲ್ಲ. ಅದೊಂದು ಭ್ರಮೆಯಾಗಿ ದುರ್ಬಲ ಜೀವಿಗಳ ಮನದಲ್ಲಿ ಮನೆ ಮಾಡಿರುತ್ತದೆ. ಕರ್ಮದ ಕತ್ತಲೆಯು ಲಿಂಗಪೂಜೆಯ ಬೆಳಕಿನಿಂದ ಹೊರಟುಹೋಗುತ್ತದೆ. ಇದೇ ಲಿಂಗಪೂಜೆಯ ಅರಿವು. ಈ ಅರಿವಿನಿಂದ ಮಾನವ ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದದ ಭ್ರಮೆಗಳಿಂದಲೂ ಹೊರ ಬರುತ್ತಾನೆ ಎಂದು ಬಸವಣ್ಣನವರು ಇನ್ನೊಂದು ವಚನದಲ್ಲಿ ಹೇಳಿದ್ದಾರೆ. 'ಲಿಂಗವ ಪೂಜಿಸಿ ಫಲವೇನಯ್ಯಾ ಸಮರತಿ, ಸಮಕಳೆ, ಸಮಸುಖವ ಅರಿಯದನ್ನಕ್ಕ?' ಎಂದು ಅವರು ಪ್ರಶ್ನಿಸಿದ್ದಾರೆ. ಸಮರತಿಯು ಅನುಭಾವಕ್ಕೆ ಸಂಬಂಧಿಸಿದ ಲಿಂಗಾಂಗಸಾಮರಸ್ಯಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ದೈನಂದಿನ ಬದುಕಿನಲ್ಲಿ ಕೂಡ ಲಿಂಗಭೇದ ಮಾಡದೆ ಬದುಕುವುದನ್ನು ಅದು ಸೂಚಿಸುತ್ತದೆ. ಅದೇ ರೀತಿ ಸಮಕಳೆ ಅಂದರೆ ಬ್ರಾಹ್ಮಣಕಳೆ, ಕ್ಷಾತ್ರಕಳೆ ಎಂದಿರದೆ ಮಾನವ ಕಳೆ ಎಂದಿರುತ್ತದೆ ಎಂದು ಬಸವಣ್ಣನವರು ಪ್ರತಿಪಾದಿಸಿದ್ದಾರೆ. ಸಮಸುಖ ಎಂದರೆ ಪ್ರಪಂಚದ ಎಲ್ಲ ವಸ್ತುಗಳು ಎಲ್ಲರಿಗೂ ಒಂದೇ ರೀತಿಯ ಸುಖವನ್ನು ಕೊಡುತ್ತವೆ. ಪ್ರಕೃತಿಯು ಮನುಷ್ಯರಲ್ಲಿ ಭೇದಭಾವ ಎಣಿಸುವುದಿಲ್ಲ ಎಂಬುದನ್ನು ಬಸವಣ್ಣನವರು ಮಾರ್ಮಿಕವಾಗಿ ತಿಳಿಸಿದ್ದಾರೆ.

ಕರ್ಮಸಿದ್ಧಾಂತದಿಂದಾಗಿ ಭಾರತೀಯರು ಸಹಸ್ರಾರು ವರ್ಷಗಳಿಂದ ಮಾನಸಿಕವಾಗಿ ಗುಲಾಮಗಿರಿಯನ್ನು ಅನುಭವಿಸುತ್ತಲೇ ಬಂದಿದ್ದಾರೆ. ಇದರ ಲಾಭವನ್ನು ಪುರೋಹಿತಶಾಹಿಗಳು ಪಡೆಯುತ್ತಲೇ ಬಂದಿದ್ದಾರೆ. ಕರ್ಮಸಿದ್ಧಾಂತವನ್ನು ಅಲ್ಲಗಳೆದ ಇಷ್ಟಲಿಂಗವು ಕಾಯಕಜೀವಿಗಳಲ್ಲಿ ಮನೋಶಕ್ತಿ ಹೆಚ್ಚುವಂತೆ ಮಾಡಿತು. ಅವರಿಗೆ ಏಕದೇವೋಪಾಸನೆಯ ಹೊಸ ಜೀವನ ವಿಧಾನವನ್ನು ಕಲಿಸಿತು.

(ಮುಂದುವರಿಯುವುದು)

■ ರಂಜಾನ್ ದರ್ಗಾ

ನಮ್ಮ ನಡಿಗೆ ಸರ್ವಾಧಿಕಾರಿ ಪ್ರಭುತ್ವದೆಡೆಗೆ ಎಂದಾಗುತ್ತಿದೆಯೆ




"ರಾಜಕಾರಣದಲ್ಲಿ ಭಕ್ತಿ ಅಥವಾ ಹೀರೋ ಆರಾಧನೆಯು ಅವನತಿಯೊಂದಿಗೆ ಅಂತಿಮವಾಗಿ ಸರ್ವಾಧಿಕಾರಕ್ಕೆ ನಿಶ್ಚಿತ ಮಾರ್ಗವಾಗಿದೆ."

– ಡಾ. ಬಾಬಾಸಾಹೇಬ್ ಅಂಬೇಡ್ಕರ್

ಫ್ಯಾಸಿಸಂ ಹಠಾತ್ತಾಗಿ ಬರುವುದಿಲ್ಲ, ತೆವಳುತ್ತಾ ಬರುತ್ತದೆ. ನಿಧಾನವಾಗಿ, ನಮಗೆ ಗೊತ್ತಾಗದಂತೆ ನಮ್ಮ ರಾಜಕೀಯ ವ್ಯವಸ್ಥೆಯೊಳಗೆ ನುಸುಳುತ್ತದೆ. ಅಂತಹ ನುಸುಳುವಿಕೆಗೆ ಅವಕಾಶ ಮಾಡಿಕೊಡುವುದು ಆ ರಾಜಕೀಯ ವ್ಯವಸ್ಥೆಯ ಹುಳುಕುಗಳು. ಆಡಳಿತ ವೈಫಲ್ಯ ಸಮಾಜೋ ಆರ್ಥಿಕ ಅಸಮಾನತೆ, ನಿರುದ್ಯೋಗ ಇತ್ಯಾದಿಗಳು ತಾಂಡವವಾಡುತ್ತಿರುವ ಪರಿಣಾಮವಾಗಿ ಜನಸಾಮಾನ್ಯರ ಪಾಲಿಗೆ ಬದುಕು ದುಸ್ತರವಾಗಿರುತ್ತದೆ; ಜನಮಾನಸದಲ್ಲಿ ಅತೃಪ್ತಿ ಅಸಮಾಧಾನ ಕುದಿಯುತ್ತಿರುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಮೊದಲು ಒಬ್ಬ ಬಲಶಾಲಿ, ಮಹತ್ವಾಕಾಂಕ್ಷಿ, ಅವಕಾಶವಾದಿ, ಜಿಹ್ವಾ ಪ್ರವೀಣ ನಾಯಕ ಹೊರಬೀಳುತ್ತಾನೆ. ಮೇಲ್ವರ್ಗಗಳಿಂದ ವಂಚಿತರಾಗಿ ಕೇವಲ ಭಗ್ನ ಕನಸುಗಳನ್ನಷ್ಟೆ ಬುತ್ತಿಯಲ್ಲಿ ಉಳಿಸಿಕೊಂಡ ಜನಸಾಮಾನ್ಯರ ಕಣ್ಣಿಗೆ ಇಂತಹ ಬಲಶಾಲಿ ವ್ಯಕ್ತಿಯೊಬ್ಬ ತಮ್ಮ ಆಸೆ ಆಕಾಂಕ್ಷೆಗಳಿಗೆ, ಸುಂದರ ಕನಸುಗಳಿಗೆ ಸಾಕಾರರೂಪ ನೀಡಬಲ್ಲ ನಾಯಕನಂತೆ ಕಾಣಿಸುತ್ತಾನೆ. ಅವರಿಗೆ ದೂರದ ಸ್ವರ್ಗಲೋಕದ ಭರವಸೆಯನ್ನು ನೀಡುವ ಅವನು ಮಾಂತ್ರಿಕನ ಹಾಗೆ ಜನರನ್ನು ತನ್ನ ಕಪಿಮುಷ್ಟಿಯೊಳಗೆ ಇಟ್ಟುಕೊಳ್ಳುತ್ತಾನೆ. ಅವನು ಮತ್ತೆ ಮತ್ತೆ ಬಗಿಯುತ್ತಾ ಹೋಗುವ ಸಮ್ಮೋಹಿನಿ ಶಕ್ತಿಯ ಜನಮರುಳ ಭಾಷಣಗಳಲ್ಲಿ ಸತ್ಯ ಮಿಥ್ಯಗಳು ಅಮುಖ್ಯ, ಜನರ ಮೇಲೆ ಅಪಪ್ರಚಾರದ ಸುರಿಮಳೆಗರೆದಾಗ ಅವರು ಅವನ ಮಾತುಗಳನ್ನು ನಂಬತೊಡಗುತ್ತಾರೆ. ಅವನು ಜನರ ಸಂಕಷ್ಟಗಳಿಗೆ ಅಲ್ಪಸಂಖ್ಯಾತರೇ ಕಾರಣ - ಅವರು ಭಿನ್ನ ಧರ್ಮೀಯರಿರಬಹುದು ಅಥವಾ ವಲಸಿಗರಿರಬ ಹುದು - ಎಂದು ಜನರನ್ನು ನಂಬಿಸುತ್ತಾನೆ. ಬಹುಸಂಖ್ಯಾ ತರಿಗೆ ಅಲ್ಪಸಂಖ್ಯಾತರ ಬಗ್ಗೆ ಆಳದಲ್ಲಿ ಇರುವ ಕೆಲವು ಭ್ರಾಮಕ ಕಲ್ಪನೆಗಳನ್ನು ಬಳಸಿಕೊಳ್ಳುತ್ತಾನೆ. ಬಹುಸಂಖ್ಯಾತರು ಅಲ್ಪಸಂಖ್ಯಾತರಿಂದ ದಬ್ಬಾಳಿಕೆಗೆ ಒಳಗಾಗಿರುವವರು, ಅಲ್ಪಸಂಖ್ಯಾತರ ಕೈಲಿ ಕಿರುಕುಳ ಅನುಭವಿಸುತ್ತಿರುವವರು ಎಂಬ ಭಾವನೆಯೊಂದನ್ನು ವ್ಯವಸ್ಥಿತವಾಗಿ ಬಿತ್ತುತ್ತಾನೆ. ಅತ್ತ ಬಂಡವಾಳಿಗರನ್ನೂ ಓಲೈಸುತ್ತಾನೆ. ಬೇಕಾದಷ್ಟು ನಿಧಿಗಳನ್ನು ಪಡೆಯುತ್ತಾನೆ. ವ್ಯವಸ್ಥಿತವಾಗಿ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಾ ತನ್ನ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾ ಹೋಗುತ್ತಾನೆ. ದೇಶದ ಒಂದು ಭಾಗದಲ್ಲಿ ನೆಲೆಯನ್ನು ಸ್ಥಾಪಿಸುತ್ತಾನೆ. ಕೊನೆಗೊಂದು ದಿನ ಪ್ರಾದೇಶಿಕದಿಂದ ರಾಷ್ಟ್ರ ರಾಜಕಾರಣಕ್ಕೆ ಧುಮುಕಿದಾಗ ಅಲ್ಲಿರುವವರ ಪೈಕಿ ಅತ್ಯಂತ ಪ್ರಬಲ ನಾಯಕ ಎನಿಸುತ್ತಾನೆ. ಪ್ರಜಾಸತ್ತೆ ಮೊದಲು ಅಂತಹ ಬಲಶಾಲಿ ವ್ಯಕ್ತಿಗೆ ಮಣಿಯುತ್ತದೆ. ತರುವಾಯ ನಿರಂಕುಶ ಆಡಳಿತಕ್ಕೆ, ಬಳಿಕ ಸರ್ವಾಧಿಕಾರಿ ಪ್ರಭುತ್ವಕ್ಕೆ. ಅಂತಹ ಸರ್ವಾಧಿಕಾರಿ ಪ್ರಭುತ್ವಗಳು ತಾವೇ ಖುದ್ದಾಗಿ ಸಾಕುವ ಬಲಿಲ್ಲಾ, ಕರಿಷರಟು, ಕಂದುಷರಟು ಪಡೆಗಳ ಮೂಲಕ ನಿರಂಕುಶ ಆಡಳಿತ ನಡೆಸುತ್ತವೆ.

ಈಗ ನಮ್ಮ ಮನೆಯನ್ನೆ ತೆಗೆದುಕೊಳ್ಳೋಣ. ಇಲ್ಲೊಬ್ಬ ಐವತ್ತಾರಿಂಚಿನ ಬಲಶಾಲಿ ನಾಯಕ ಹುಟ್ಟಿಕೊಂಡಿದ್ದಾನೆ. ಅವನು ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರ ನಡುವೆ ಗೋಡೆಗಳನ್ನು ಸೃಷ್ಟಿಸುತ್ತಾನೆ. ಜಾತಿವ್ಯವಸ್ಥೆಯನ್ನು ಎತ್ತಿಹಿಡಿಯುತ್ತಲೆ ತಳಜಾತಿಗಳ ಪರವೆಂದು ತೋರಿಸಿಕೊಳ್ಳುತ್ತಾನೆ. ರಾಷ್ಟ್ರದ ಕುರಿತ ಅಭಿಮಾನವನ್ನು ಉಗ್ರ ರಾಷ್ಟ್ರೀಯತೆಗೆ ಪರಿವರ್ತಿಸುತ್ತಾನೆ. ಅವನು ರಾಷ್ಟ್ರದ ಉದ್ಧಾರಕ್ಕಾಗಿ ಜನ್ಮವೆತ್ತಿ ಬಂದವನು ಎಂಬ ಸಂದೇಶವೊಂದನ್ನು ದೇಶದ ಮೂಲೆಮೂಲೆಗೂ ತಲಪಿಸಲಾಗುತ್ತದೆ. ಅವನು ಜನ ತಮ್ಮದೆ ಹಣವನ್ನು ಬ್ಯಾಂಕಿನಿಂದ ತೆಗೆಯಲು ಇಲ್ಲದ ನಿರ್ಬಂಧಗಳನ್ನು ಹೇರಿದರೂ, ಸಾವಿರಾರು ಉದ್ದಿಮೆಗಳು ನಾಶವಾಗಿ ಲಕ್ಷಾಂತರ ಮಂದಿ ಬೀದಿಗೆ ಬಿದ್ದರೂ, ನೂರಾರು ಜನ ಸತ್ತರೂ ನೋಟು ರದ್ದತಿಯ ಸಂಕಷ್ಟಗಳೆಲ್ಲ ಅಲ್ಪಕಾಲಿಕ, ಮುಂದೆ ಒಳ್ಳೆಯ ದಿನಗಳು ಬರಲಿವೆ ಎಂದು ಜನರನ್ನು ನಂಬಿಸುತ್ತಾನೆ. ಕಪ್ಪುಹಣ ವಾಪಸಾತಿ, ಸಬ್ ಕಾ ಸಾಥ್ ಸಬ್ ಕಾ ವಿಕಾಸ್‌ನಂತಹ ರಂಗುರಂಗಿನ ಭರವಸೆಗಳು ಬಾಯಿ ಮಾತಿಗೆ ಸೀಮಿತವಾದ ಬೂಸಿ ಘೋಷಣೆಗಳಿಂದಾದರೂ, ಅವುಗಳಿಂದ ಎಳ್ಳಷ್ಟು ಪ್ರಯೋಜನ ದಕ್ಕದಿದ್ದರೂ ಜನ ಅವನನ್ನು ಕ್ಷಮಿಸುತ್ತಾರೆ. ಅವನನ್ನು ಓರ್ವ ಹೀರೊ ಎಂದು ಭಾವಿಸಿ ಆರಾಧಿಸತೊಡಗುತ್ತಾರೆ. ಅವನು ಪ್ರಜಾತಾಂತ್ರಿಕ ಮಾರ್ಗದಲ್ಲೆ ಚುನಾವಣೆಗಳನ್ನು ಗೆಲ್ಲುತ್ತಾನೆ. ಅವನ ಬಳಿ ತೂಳಿದ ಮಿದುಳೊಳಗೆ ದ್ವೇಷ ತುಂಬಿದ ದೊಡ್ಡ ಸ್ವಯಂಸೇವಕರ ದಂಡು ಇದೆ. ಅದು ಹಲವು ದಶಕಗಳ ಹಿಂದೆ ಸೃಷ್ಟಿಸಲ್ಪಟ್ಟಂತಹ ದಂಡು. ವಿದೇಶೀಯರು ಈ ನೆಲವನ್ನು ಆಳುತ್ತಿದ್ದಾಗ ಅವರ ವಿರುದ್ಧದ ಹೋರಾಟದಲ್ಲಿ ಭಾಗವಹಿಸದ ದಂಡು ಈಗ ತನ್ನೆಲ್ಲಾ ಶಕ್ತಿಸಾಮರ್ಥ್ಯವನ್ನು ಸ್ವದೇಶೀಯರ ವಿರುದ್ಧವೆ ಪ್ರಯೋಗಿಸತೊಡಗುತ್ತದೆ! ಸರ್ಕಾರದ ಪೂರ್ಣ ಕೃಪಾಕಟಾಕ್ಷ ಮತ್ತು ಪರೋಕ್ಷ ಬೆಂಬಲಗಳೊಂದಿಗೆ ಕಾರ್ಯಾಚರಿಸುವ ಈ ಸ್ವಘೋಷಿತ ನ್ಯಾಯಪಾಲಕರ ಪಡೆ ಸಮಾಜದಲ್ಲಿ ಭಯ, ದ್ವೇಷ, ಹಿಂಸೆಯ ವಾತಾವರಣವನ್ನು ಸೃಷ್ಟಿಸುತ್ತದೆ. ಬೀದಿಬೀದಿಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ತನ್ನ ಕೈವಾಡವನ್ನು ತೋರಿಸುತ್ತದೆ. ದೇಶಭಕ್ತಿ ಎಂದರೆ ತನ್ನದು ಮಾತ್ರ, ಉಳಿದವರದು ದೇಶದ್ರೋಹ ಎಂದು ತಾನೇ ತೀರ್ಮಾನಿಸುತ್ತದೆ. ಅದೇವೇಳೆ ಬಲಶಾಲಿಯ ಬಾಯಿಂದ ಹೊರಬೀಳುವುದೆಲ್ಲ ಸತ್ಯ, ಅವನ 'ನವ ಭಾರತ'ದ ನಿರ್ಮಾಣವನ್ನು ಬಾಯಿ ಮುಚ್ಚಿಕೊಂಡು ಒಪ್ಪಬೇಕು ಎನ್ನುತ್ತದೆ. ದೇಶದೆಲ್ಲೆಡೆ ವಾಕ್‌ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯಗಳ ದಮನ ನಡೆಯುತ್ತದೆ. ವಿಶ್ವವಿದ್ಯಾನಿಲಯಗಳಲ್ಲಿ ವೈಚಾರಿಕತೆಗೆ, ವಿಚಾರಗಳ ಮುಕ್ತ ಅಭಿವ್ಯಕ್ತಿಗೆ, ವಿಚಾರ ವಿನಿಮಯಗಳಿಗೆ ಜಾಗ ಇಲ್ಲ ಎಂದಾಗುತ್ತದೆ. ಇದ್ದುದನ್ನು ಇದ್ದ ಹಾಗೆ ಹೇಳುವುದು, ಭಿನ್ನಾಭಿಪ್ರಾಯ ತೋರಿಸುವುದು 'ಶಾಂತಿ' ಮತ್ತು ದೇಶದ 'ಸಮಗ್ರತೆ'ಗಳಿಗೆ ಅಪಾಯಕಾರಿ ಎಂದಾಗುತ್ತದೆ! ಬಲಶಾಲಿ ನಾಯಕನನ್ನು, ಅವನ ಹೇಳಿಕೆಗಳನ್ನು ಟೀಕಿಸುವವರ ಮೇಲೆ ಮಾನಸಿಕ ಹಾಗೂ ದೈಹಿಕ ದಾಳಿಗಳು ನಡೆಯುತ್ತವೆ. ಅದು 'ದೇಶದ ಹಿತದೃಷ್ಟಿಯಲ್ಲಿ', 'ಶಾಂತಿಗಾಗಿ', 'ಸೌಹಾರ್ದಕ್ಕಾಗಿ' ಎನ್ನಲಾಗುತ್ತದೆ! ಇದು ಬಲಶಾಲಿ ನಾಯಕನ ಯಶಸ್ಸಿನ ಗುಟ್ಟು.

ಭಾರತದ ಸರ್ವೋಚ್ಚ ಸಂವಿಧಾನವನ್ನು ಎತ್ತಿಹಿಡಿಯುತ್ತ ಅದರ ನಿರ್ದೇಶನಗಳಿಗೆ ಅನುಗುಣವಾಗಿ ಕಾರ್ಯಾಚರಿಸಬೇಕಾಗಿರುವ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳು ಮೇ 2014ರ ನಂತರ ಅವನತಿಯ ಹಾದಿ ಹಿಡಿದಿರುವ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. ಭಾರತೀಯ ರಿಸರ್ವ್ ಬ್ಯಾಂಕು, ಕೇಂದ್ರ ವಿಚಕ್ಷಣಾ ದಳ, ಸಿಬಿಐ, ಎನ್‌ಐಎ, ಇತಿಹಾಸ ಸಂಶೋಧನಾ ಸಂಸ್ಥೆ ಭಾರತೀಯ ವಿಜ್ಞಾನ ಪರಿಷತ್ತು ಇವೇ ಮೊದಲಾದ ಪ್ರಜಾತಾಂತ್ರಿಕ



ಸಂಸ್ಥೆಗಳ ಮೇಲೆ ಗದಾಪ್ರಹಾರ ಆಗುತ್ತಿದೆ: ಆಳುವ ಪಕ್ಷದ ಪ್ರಚಂಡ ಬಹುಮತ ಸಂಸತ್ತನ್ನು ಬರೀ ನಾಮ್ ಕಾ ವಾಸ್ತೆ ಎಂದಾಗಿಸಿದೆ. ನ್ಯಾಯಾಂಗದಲ್ಲಿ ರಾಜಕೀಯ ನಾಯಕರ ಬಗ್ಗೆ ಮೃದು ಧೋರಣೆ ಇರುವಂತಿದೆ. ಬಿರ್ಲಾ-ಸಹಾರ ಪೇಪರ್ಸ್, ರಾಷ್ಟ್ರಗೀತೆಯಂತಹ ಪ್ರಕರಣಗಳು ನ್ಯಾಯಾಂಗ ತುಂಬಾ ದುರ್ಬಲವಾಗುತ್ತಿರುವ ಸೂಚಕದಂತೆ ಕಾಣುತ್ತಿದೆ. ನ್ಯಾಯಾಂಗ ಹೀಗೆ ಅಧಿಕಾರದಲ್ಲಿರುವವರ ಕಡೆ ವಾಲುವುದು ಪ್ರಜಾಸತ್ತೆಯ ಮಟ್ಟಿಗೆ ಖಂಡಿತಾ ಶುಭ ಸೂಚಕವಲ್ಲ. ಈ ಸಂದರ್ಭದಲ್ಲಿ ಅಮೆರಿಕದ ನ್ಯಾಯಾಂಗದೊಂದಿಗೆ ತುಲನೆ ಮಾಡದೆ ಇರಲಾಗುವುದಿಲ್ಲ. ಪ್ರಜಾಪ್ರಭುತ್ವದ ನಾಲ್ಕನೆ ಆಧಾರಸ್ತಂಭ ಎನ್ನಲಾಗುವ ಮಾಧ್ಯಮದ ಕಥೆಯೂ ಭಿನ್ನವಾಗಿಲ್ಲ. ಮಾಧ್ಯಮದ ವಾಣಿಜ್ಯೀಕರಣ, ಪಕ್ಷಪಾತೀಯ ಧೋರಣೆಗಳು, ಆಳುವ ವರ್ಗದ ತಪ್ಪುಗಳನ್ನು ನೇರವಾಗಿ ಹೇಳದಿರುವುದು ಪ್ರಜಾಪ್ರಭುತ್ವದ ಬೇರೂರುವಿಕೆಗೆ ಪೂರಕವಲ್ಲ. ವಾಸ್ತವದಲ್ಲಿ ಅಡ್ಡಿಯಾಗಿವೆ ಎಂದೆ ಹೇಳಬಹುದು. ಬೆರಳೆಣಿಕೆಯಷ್ಟನ್ನು ಹೊರತುಪಡಿಸಿದರೆ ಮಿಕ್ಕ ಮಾಧ್ಯಮಗಳೆಲ್ಲವೂ ಆ ಬಲಶಾಲಿಯ ಹಿನ್ನೆಲೆ, ಅವನ ಚರಿತ್ರೆ ಬಗ್ಗೆ ಅವನು ಪೋಷಿಸುವ ಕಾನೂನುಬಾಹಿರ ದಂಡಿನ ಬಗ್ಗೆ ಪ್ರಸ್ತಾಪ ಮಾಡುವುದರ ಮೇಲೆ ಸ್ವಯಂನಿಷೇಧ ಹೇರಿಕೊಂಡಂತಿದೆ. ಆ ಸ್ವಯಂನಿಷೇಧದ ಹಿಂದೆ ಅವ್ಯಕ್ತ ಭಯ, ಸ್ವಾರ್ಥ, ಲಾಭಬಡುಕತನ, ಅವಕಾಶವಾದ ಮೊದಲಾದ ಹಲವು ಕಾರಣಗಳಿರಬಹುದು.

ಭಾರತದ ಮಹಾನ್ ಮೇಧಾವಿಗಳಲ್ಲೊಬ್ಬರಾದ ಡಾ. ಬಾಬಾಸಾಹೇಬ್ ಅಂಬೇಡ್ಕರರು ನಮ್ಮ ದೇಶದಲ್ಲಿ ಇಂತಹ ಪರಿಸ್ಥಿತಿಯೊಂದು ನಿರ್ಮಾಣವಾಗುವ ಸಾಧ್ಯತೆ ಇದೆ ಎಂದು ಅಂದೇ ಯೋಚಿಸಿದ್ದರು. "ಸುದೀರ್ಘ ಕಾಲದಿಂದ ಪ್ರಜಾಸತ್ತಾತ್ಮಕ ವ್ಯವಸ್ಥೆಯಿರದ ಭಾರತದಂತಹ ದೇಶದಲ್ಲಿ ಪ್ರಜಾಸತ್ತೆಯು ಸರ್ವಾಧಿಕಾರಕ್ಕೆ ಎಡೆಗೊಡುವ ಅಪಾಯದ ಸಾಧ್ಯತೆ ಇದೆ. ವಾಸ್ತವವಾಗಿ ಈ ಹೊಸ ಪ್ರಜಾಸತ್ತೆ ಅದರ ಹೊರರೂಪವನ್ನು ಉಳಿಸಿಕೊಂಡು ಸರ್ವಾಧಿ[...] ಎಡೆಮಾಡಿಕೊಡುವ ಸಾಧ್ಯತೆ ಗಣನೀಯವಿದೆ. ಪ್ರ[...] ಬಹುಮತ ದೊರೆತ ಸಂದರ್ಭಗಳಲ್ಲಿ ಆ ಸಾ[...] ನಿಜವಾಗುವ ಅಪಾಯ ತುಂಬಾ ಹೆಚ್ಚು... ವ್ಯಕ್ತಿ[...] ಶ್ರೇಷ್ಠನಿರಬಹುದು; ಆದರೆ ಜನ ತಮ್ಮ ಸ್ವಾತಂತ್ರ್ಯ[...] ಅವನ ಪದತಲಕ್ಕೆ ಸಮರ್ಪಿಸುವ ಬಗ್ಗೆ ಅಥವಾ [...] ಸಂಸ್ಥೆಗಳನ್ನು ಬುಡಮೇಲುಗೊಳಿಸುವ ಅಧಿಕಾರ[...] ಅವನಿಗೆ ನೀಡುವ ಬಗ್ಗೆ ಎಚ್ಚರ ವಹಿಸಬೇಕು" [...] ಜಾನ್ ಸ್ಟುವರ್ಟ್ ಮಿಲ್ ಹೇಳಿದ್ದ ಪ್ರಜಾಸತ್ತೆಯ ಸಂ[...]ಯಲ್ಲಿ ಆಸಕ್ತಿ ಇರುವವರೆಲ್ಲರೂ ಮಿಲ್‌ನ ಈ ಸಲಹೆ[...] ಪಾಲಿಸಲೇಬೇಕಾಗಿದೆ. ಭಾರತದ ರಾಜಕಾರಣದಲ್ಲಿ [...] ಅಥವಾ ಭಕ್ತಿ ಮಾರ್ಗ ಅಥವಾ ಹೀರೋ ಆರಾ[...] ವಹಿಸುವ ಪಾತ್ರ ಎಷ್ಟಿದೆ ಎಂದರೆ ಅದಕ್ಕೆ ಸರಿಸಾಟಿ[...]ಗಬಲ್ಲ ದೇಶ ಜಗತ್ತಿನಲ್ಲೆಲ್ಲೂ ಇಲ್ಲ. ಆದುದರಿಂದಲೆ ಮಿ[...] ಸಲಹೆಯನ್ನು ಪಾಲಿಸುವುದು ಇತರ ದೇಶಗಳಿಗಿಂತ[...] ಭಾರತಕ್ಕೇ ಹೆಚ್ಚು ಅವಶ್ಯಕವಾಗಿದೆ. "ಧರ್ಮದಲ್ಲಿ ಭಕ್ತಿ[...] ಆತ್ಮೋದ್ಧಾರಕ್ಕೆ ಮಾರ್ಗ ಆಗಿರಬಹುದು. [...] ರಾಜಕಾರಣದಲ್ಲಿ ಭಕ್ತಿ ಅಥವಾ ಹೀರೋ ಆರಾಧನೆ[...] ಅವನತಿಯೊಂದಿಗೆ ಅಂತಿಮವಾಗಿ ಸರ್ವಾಧಿಕಾರಕ್ಕೆ ನಿ[...] ಮಾರ್ಗವಾಗಿದೆ" ಎಂದು ಮಿಲ್ ಎಚ್ಚರಿಸಿದ್ದರು. [...] ಅವರ ಎಚ್ಚರಿಕೆಯ ಮಾತುಗಳೆಲ್ಲ ನೀರ ಮೇ[...]ಗುಳ್ಳೆಯಂತಾಗಿರುವುದು ಅತ್ಯಂತ ದುರದೃಷ್ಟಕರ.

ಪ್ರಚಂಡ ಬಹುಮತ, ಹೀರೊ ಆರಾಧನೆ, 'ಜನಾ[...] ಶ್ರೇಷ್ಠತೆ' ಮತ್ತು 'ಧರ್ಮ ಶ್ರೇಷ್ಠತೆ'ಗಳು ಇಂದು ನಮ್ಮ[...] ಎಂತಹ ಭಯಾನಕ ಸ್ಥಿತಿಗೆ ತಂದು ನಿಲ್ಲಿಸಿವೆ ಎಂಬ[...] ಅರಿವು ಹೆಚ್ಚಿನವರಿಗೆ ಇರುವಂತಿಲ್ಲ. ಬೇರೊಂದು ಕಾಲ[...] ಬೇರೊಂದು ಭೂಖಂಡದಲ್ಲಿ ಜನಾಂಗ ಶ್ರೇಷ್ಠತೆಯ ಅಂ[...] ಪರಿಣಾಮ ಏನಾಯಿತೆಂದು ಹಲವರಿಗಷ್ಟೆ ತಿಳಿ[...] ಕೆಲವರು ಅದೆಲ್ಲ ಅವಾಸ್ತವಿಕ, ಕಾಲ್ಪನಿಕ, ಉತ್ಪ್ರೇ[...] ಎನ್ನುತ್ತಾರೆ. ಆದರೆ ಹೆಚ್ಚಿನವರಿಗೆ ಅದರ ಅ[...] ಇರುವಂತಿಲ್ಲ. ಇಂತಹ ಪರಿಸ್ಥಿತಿ ಇರುವಾಗ ಭಾರತ[...] ಪ್ರಜಾಸತ್ತೆಯ ಉಳಿವು, ಬೆಳವುಗಳನ್ನು ಬಯಸುವವರೆ[...] ಡಾ. ಬಾಬಾಸಾಹೇಬ ಅಂಬೇಡ್ಕರರ ಮುನ್ನೆಚ್ಚರಿಕೆಯ[...] ಮತ್ತೆ ನೆನಪಿಸಿಕೊಂಡು ನೆಲಮಟ್ಟದಲ್ಲಿ ಕಾರ್ಯೋದ್ಯುಕ್ತ[...]ಲೇಬೇಕಾದ ಅನಿವಾರ್ಯತೆ ಇದೆ. ಸ್ವಾತಂತ್ರ್ಯ ಚಳವಳಿ[...] ಕಾಲದಲ್ಲಿ ಭಾರತೀಯರೆಲ್ಲ ಜಾತಿ, ಮತ, ಲಿಂಗ ಭೇದಗ[...] ಮರೆತು ವಿದೇಶಿ ಪ್ರಭುತ್ವದ ದುರಾಡಳಿತ, ದಬ್ಬಾಳಿಕೆ[...] ವಿರುದ್ಧ ಒಂದುಗೂಡಲು ಸಾಧ್ಯವಾಗಿದ್ದರೆ ಅದರ ಹಿ[...] ಸಮಾಜದ ಕೊಟ್ಟಕೊನೆಯ ವ್ಯಕ್ತಿಯನ್ನೂ ಒಳಗೊ[...] ಭವ್ಯ ಭಾರತವನ್ನು ಕಟ್ಟುವ ಘನ ಉದ್ದೇಶವಿತ್ತು. [...] ಉದ್ದೇಶವನ್ನು ಮರೆತ ಸ್ವಾತಂತ್ರ್ಯಾನಂತರದ ಸ್ವದ[...] ಪ್ರಭುತ್ವಗಳ ಭ್ರಷ್ಟಾಚಾರ, ಬಂಡವಾಳವಾದ, ಕೋಮುವಾ[...]ಗಳಿಂದಾಗಿ ಭ್ರಮನಿರಸನಕ್ಕೆ ಒಳಗಾಗಿ, ಫ್ಯಾಸಿಸ್ಟ್ ದುಶ್ಶಕ್ತಿ[...] ದೇಶದ ಲಗಾಮನ್ನು ಒಪ್ಪಿಸಹೊರಟ ಜನರಲ್ಲಿ ತಿಳಿ[...] ಮೂಡಿಸಿ, ನಂಬಿಕೆ ಹುಟ್ಟಿಸುವಂತಹ ಭರವಸೆಯೊಂ[...] ಅವರನ್ನು ಮತ್ತೊಮ್ಮೆ ಒಗ್ಗೂಡಿಸುವ ಬಗೆ ಹೇಗೆ[...] ಗಂಭೀರವಾಗಿ ಯೋಚಿಸುವ ಸಮಯ ಬಂದಿದೆ.


■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: 'ದ ವಯರ್'ನಲ್ಲಿ ಉಜ್ವಲ್ ದೊಸ[...] ಮತ್ತು ದುಷ್ಯಂತ್ ದವೆಯವರ ಲೇಖನಗ[...]

ಉತ್ತರಪ್ರದೇಶವನ್ನು ನಾಲ್ಕು ರಾಜ್ಯಗಳಾಗಿ ವಿಭಜಿಸಬೇಕು

ಜಗತ್ತಿನ ಹತ್ತು ಅತಿಹೆಚ್ಚು ಜನಸಂಖ್ಯೆ ಇರುವ ದೇಶಗಳ ಪಟ್ಟಿ ಹೀಗಿದೆ: ಚೀನಾ-140 ಕೋಟಿ, ಭಾರತ-130 ಕೋಟಿ, ಅಮೆರಿಕ-33 ಕೋಟಿ, ಇಂಡೋನೇಷಿಯಾ-25 ಕೋಟಿ, ಬ್ರೆಜಿಲ್-20 ಕೋಟಿ, ಪಾಕಿಸ್ತಾನ-19 ಕೋಟಿ, ನೈಜೀರಿಯಾ-18 ಕೋಟಿ, ಬಾಂಗ್ಲಾದೇಶ-16 ಕೋಟಿ, ರಶಿಯಾ-15 ಕೋಟಿ, ಜಪಾನ್-12 ಕೋಟಿ.

ಭಾರತದಲ್ಲಿ ಈಗತಾನೇ ವಿಧಾನಸಭೆಗೆ ಚುನಾವಣೆ ಮುಗಿಸಿದ ಉತ್ತರ ಪ್ರದೇಶ ರಾಜ್ಯದ ಒಟ್ಟು ಜನಸಂಖ್ಯೆ ಎಷ್ಟು ಗೊತ್ತೇ? ಅದು ಬರೋಬ್ಬರಿ 22 ಕೋಟಿ. ಅಂದರೆ ಒಂದು ವೇಳೆ ಈ ಉತ್ತರ ಪ್ರದೇಶ ಸ್ವತಂತ್ರ ದೇಶವಾಗಿದ್ದರೆ ಅದು ಬ್ರೆಜಿಲನ್ನು ಸಹ ಹಿಂದಿಕ್ಕಿ ಜಗತ್ತಿನ 'ಐದನೆಯ' ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರ ಆಗಿರುತ್ತಿತ್ತು. ಇಷ್ಟೊಂದು ಹೆಚ್ಚು ಜನಸಂಖ್ಯೆ ಬಾಹುಳ್ಯ ಹೊಂದಿರುವ ಈ ರಾಜ್ಯವನ್ನು ಸರಿಯಾಗಿ ವಿಭಜಿಸುವ ಬದಲು ನವೆಂಬರ್ 2000 ದಲ್ಲಿ ಕೇವಲ ಒಂದು ಕೋಟಿ ಜನಸಂಖ್ಯೆ ಇರುವ ಉತ್ತರಾಂಚಲ್ ಪ್ರದೇಶವನ್ನು ಕೊರೆದು ತೆಗೆದು ಪ್ರತ್ಯೇಕ ರಾಜ್ಯ ಮಾಡಲಾಯಿತು. ಈ ಉತ್ತರಾಂಚಲ್ (ಉತ್ತರಾಖಂಡ್) ರಾಜ್ಯದ ಜನಸಂಖ್ಯೆ ಈಗಲೂ ಕೇವಲ ಒಂದು ಕೋಟಿ ಮಾತ್ರ. ಈ ಒಂದು ಸಣ್ಣ ರಾಜ್ಯವನ್ನು ಪ್ರತ್ಯೇಕ ರಾಜ್ಯ ಮಾಡುವ ಬದಲು ಇಡೀ ಉತ್ತರ




ಪ್ರದೇಶವನ್ನು ನಾಲ್ಕು ಅಥವಾ ಐದು ರಾಜ್ಯವನ್ನಾಗಿ ವಿಭಜಿಸುತ್ತಿದ್ದರೆ ಒಳ್ಳೆಯದಾಗಿರುತ್ತಿತ್ತು. 2009ರಲ್ಲಿ ಮಾಯಾವತಿ ಮುಖ್ಯಮಂತ್ರಿ ಆಗಿದ್ದಾಗ ಅವರು ತನ್ನ ರಾಜ್ಯವನ್ನು ನಾಲ್ಕು ರಾಜ್ಯವಾಗಿ ವಿಭಜಿಸುವ ಕ್ರಾಂತಿಕಾರಿ ವಿಧೇಯಕ ಉತ್ತರಪ್ರದೇಶದ ವಿಧಾನಸಭೆಯಲ್ಲಿ ಪಾಸು ಮಾಡಿ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದರು. ವಿಚಿತ್ರವೆಂದರೆ ಆಂಧ್ರ-ತೆಲಂಗಾಣವನ್ನು ವಿಭಜಿಸಿ ಮನಮೋಹನ್ ಸಿಂಗ್ ಸರಕಾರ ಕೈಸುಟ್ಟುಕೊಂಡು 2014 ರ ಚುನಾವಣೆಯಲ್ಲಿ ತೆಲುಗರ ಎರಡೂ ರಾಜ್ಯದಲ್ಲಿ ಕಾಂಗ್ರೆಸ್ ಹೇಳ ಹೆಸರಿಲ್ಲದಂತೆ ಆಯಿತು. ಆದರೆ ಉತ್ತರ ಪ್ರದೇಶವನ್ನು ವಿಭಜಿಸದೇ ದೊಡ್ಡ ತಪ್ಪು ಮಾಡಿತು. ಒಂದು ವೇಳೆ ಆಂಧ್ರದೊಟ್ಟಿಗೆ ಉತ್ತರ ಪ್ರದೇಶವನ್ನೂ ಮಾಯಾವತಿ ಸರಕಾರದ ಶಿಫಾರಸಿನಂತೆ ಆಗಿನ ಮನಮೋಹನ್ ಸಿಂಗ್ ಸರ[...] ನಾಲ್ಕು ರಾಜ್ಯವಾಗಿ ವಿಭಜಿಸುತ್ತಿದ್ದರೆ ಈಗ ಆ ನಾ[...] ರಾಜ್ಯಗಳಲ್ಲಿ ಕಾಂಗ್ರೆಸ್ ಇಷ್ಟೊಂದು ಹೀನಾಯವಾ[...] ಸೋಲುತ್ತಿರಲಿಲ್ಲ.

ನವೆಂಬರ್ 2000 ದಲ್ಲಿ ಕೇಂದ್ರದಲ್ಲಿ ವಾಜಪೇ[...]ಯವರ ಬಿಜೆಪಿ ಸರಕಾರ ಇದ್ದಾಗ ಉತ್ತರಾಖಂಡ್ ಹೊ[...] ರಾಜ್ಯವನ್ನು ರಚಿಸಲಾಯಿತು. ಈಗ ಮತ್ತೆ ಬಿಜೆಪಿ ಸರಕಾ[...] ಅಂತಹ ಇನ್ನೊಂದು ಅವಕಾಶ ಒದಗಿಬಂದಿದೆ. ರಾ[...] ಹಾಗೂ ಕೇಂದ್ರ ಎರಡರಲ್ಲಿಯೂ ಬಿಜೆಪಿಯೇ ಅಧಿಕಾರ[...] ಇರುವುದರಿಂದ ಉತ್ತರಪ್ರದೇಶದ ವಿಭಜನೆಗೆ ಯಾವ[...] ಅಡೆತಡೆ ಉಂಟಾಗಲಾರದು. ಈಗ ಉತ್ತರ ಪ್ರದೇಶ[...] ನಾಲ್ಕು ರಾಜ್ಯವಾಗಿ ವಿಭಜಿಸಿದರೆ ಅದರಿಂದ ಆ ರಾ[...] ಅಭಿವೃದ್ಧಿ ವೇಗವಾಗುತ್ತದೆ. ಜತೆಗೆ ಬಿಜೆಪಿಯಲ್ಲಿ ಹಲವಾ[...] ಮುಖ್ಯಮಂತ್ರಿ ಆಕಾಂಕ್ಷಿಗಳು ಇದ್ದಿದ್ದರಿಂದ ಒಬ್ಬನ ಬದ[...] ನಾಲ್ಕು ಜನರಿಗೆ ನಾಲ್ಕು ರಾಜ್ಯಗಳ ಮುಖ್ಯಮಂತ್ರಿ ಆಗ[...] ಅವಕಾಶ ಸಿಗುತ್ತದೆ. ಮೇಲಾಗಿ ಈಗಿನ ಈ ಬೃಹ[...] ರಾಜ್ಯದಲ್ಲಿ ಹಲವಾರು ವಿಭಿನ್ನ ಸಂಸ್ಕೃತಿ ಹಾಗೂ ವಿ[...] ಉಪಭಾಷೆಗಳು ಇವೆ. ಪಶ್ಚಿಮ ಭಾಗಕ್ಕೆ ಹರಿತ್ ಪ್ರದೇ[...] ಎನ್ನುತ್ತಾರೆ, ದಕ್ಷಿಣ ಭಾಗಕ್ಕೆ ಬುಂದೇಲ್‌ಖಂಡ್, ಮ[...] ಭಾಗಕ್ಕೆ ಅವಧ್ ಹಾಗೂ ಪೂರ್ವ ಭಾಗಕ್ಕೆ ಪೂರ್ವಾಂಚ[...] ಎನ್ನುತ್ತಾರೆ. ನಮ್ಮ ಕರ್ನಾಟಕದಲ್ಲಿ ಕರಾವಳಿಯ ಜನ[...]

ವ್ಯಾಘ್ರನ ಕರೆ

ಚಿರತೆಯನ್ನು ಬಲಿ ಪಡೆದ ನಾಯಿ!

ಇಂಗ್ಲಿಷ್ ಮೂಲ: ಆರ್ಥರ್ ಫೋವೆಲ್
ಕನ್ನಡಕ್ಕೆ: ವಸಂತ್ ನಡಹಳ್ಳಿ



ಸಾಮಾನ್ಯವಾಗಿ ಕಾಡಿನಲ್ಲಿ ಕೋತಿಗಳನ್ನು ಬೆನ್ನತ್ತಿದಾಗ ...ಯಿಗಳು ಸುಲಭವಾಗಿ ಚಿರತೆಗೆ ಬಲಿಯಾಗುತ್ತವೆ. ...ಡಿನಲ್ಲಿದ್ದ ಚಿರತೆಗೆ ನಾಯಿಯ ಕೂಗಾಟ ಕೇಳಿರಲೇಬೇಕು. ...ದು ಈಗ ಯಾವ ಕಡೆಯಿಂದ ಬರುತ್ತದೆ ಎಂದು ...ಳಿಯುವುದು ಸಾಧ್ಯವಿರಲಿಲ್ಲ. ನಮ್ಮ ಹಿಂದುಗಡೆ ಕೆಲವೇ ...ಡಿ ದೂರದಲ್ಲಿ ಒಂದು ಚಿಕ್ಕ ದಾರಿ ಇದ್ದುದನ್ನು ನೋಡಿ ...ನಗೆ ಭಯವಾಯಿತು. ದರ್ಬಾರಿಗೆ ಆ ಕಡೆ ...ಮನವಿಡುವಂತೆ ಹೇಳಬೇಕೆನ್ನುವಷ್ಟರಲ್ಲಿ ನಾಯಿ ತನ್ನ ...ಪಾಟವನ್ನು ನಿಲ್ಲಿಸಿ ನಮ್ಮ ಎಡಗಡೆಯ ಕಾಡಿನ ಕಡೆಗೆ ...ಟ್ಟನೋಟವನ್ನು ಇಟ್ಟಿತು. ಅದಕ್ಕೆ ಎಲ್ಲಿ ಏನೋ ...ಡಿರಬೇಕು. ಮುಂದಿನ ಎರಡೇ ಕ್ಷಣದಲ್ಲಿ ದೊಡ್ಡ ಚಿರತೆ ...ಂದು ಕಾಡಿನಿಂದ ಹೊರಬಂತು. ನಾನು ನಿರೀಕ್ಷಿಸಿದಂತೆ ...ದು ನೇರವಾಗಿ ನಾಯಿಯಕಡೆ ಹೋಗದೆ ಬಯಲಿನ ...ಧ್ಯೆ ನಿಂತು ಸುತ್ತಲಿನ ಪರಿಸ್ಥಿತಿಯನ್ನು ಸಮೀಕ್ಷೆ ಮಾಡ ...ಡಗಿತು. ನಾಯಿ ಏಕೆ ಇನ್ನೂ ಓಡಿಹೋಗಿಲ್ಲವೆಂದು ...ದಕ್ಕೆ ಆಶ್ಚರ್ಯವಾಗಿರಬೇಕು. ಬಿದಿರು ಮೆಳೆಗಳ ಹಿಂದೆ ...ದ್ದ ನಾನು ಕೂಡಲೇ ಬಂದೂಕನ್ನು ಚಲಾಯಿಸುವುದು ...ಧ್ಯವಿರಲಿಲ್ಲ. ಚಿರತೆ ನಿಧಾನವಾಗಿ ನಾಯಿಯ ಕಡೆ ...ತೆಯುತೊಡಗಿತು. ಅದು ನಾಯಿಯ ಮೇಲೆ ಆಕ್ರಮಣ ...ಾಡುವವರೆಗೆ ನಾನು ಕಾಯಬೇಕಿತ್ತು. ಆದರೆ ನಾಯಿಯ ...ೀವವನ್ನು ಉಳಿಸುವ ಉದ್ದೇಶದಿಂದ ನಾನು ಕೂಡಲೆ ...ರಡು ಗುಂಡು ಹಾರಿಸಿದೆ. ಚಿರತೆ ಎರಡು ಬಾರಿ ಜಿಗಿದು ...ೋರಾಗಿ ಘರ್ಜಿಸುತ್ತಾ ನಮ್ಮ ಪಕ್ಕದಲ್ಲಿಯೇ ...ಡಿಹೋಯಿತು. ಹಾಗೆ ಹೋಗುವಾಗ ಅದು ನಮ್ಮನ್ನು ...ೋಡಿದ್ದರೆ ನಮ್ಮ ಕಥೆ ಅವತ್ತೇ ಕೊನೆಯಾಗುತ್ತಿತ್ತು.

ಸಾಕಷ್ಟು ಸಮಯ ಚಿರತೆಯ ಜೋರಾದ ಕೂಗಾಟ ...ಮ್ಮ ಹಿಂದಿನ ಕಾಡಿನಿಂದ ಕೇಳಿಬರುತ್ತಿತ್ತು. ನಾವು ಆ ...ಗು ನಿಲ್ಲುವವರೆಗೆ ಅಲುಗಾಡದೆ ಕಾಯುತ್ತಿದ್ದೆವು. ನಂತರ ...ಧಾನವಾಗಿ ಮರೆಯಿಂದ ಹೊರಬಂದು ನಾಯಿಯನ್ನು ...ಡಿಸಿದೆವು. ಅಲ್ಲಿಯವರೆಗೆ ನಮ್ಮಂತೆ ಮೌನವಾಗಿ ...ಯುತ್ತಿದ್ದ ಅದು ಈಗ ಖುಷಿಯಿಂದ ಊರಿನ ಕಡೆ ...ಡಿಹೋಯಿತು. ಊರಿಗೆ ಹಿಂತಿರುಗಿದ ನಾವು ಮುಂದಿನ ...ೋಜನೆಯ ಬಗೆಗೆ ಚಿಂತಿಸಿದೆವು.

ಚಿರತೆಗಳು ಸಾಮಾನ್ಯವಾಗಿ ಬಲಿಪಶುವಿನ ಕಡೆ ನುಗ್ಗಿ ...ಲ್ಲುತ್ತವೆ. ಆದರೆ ಇಲ್ಲಿ ಅದು ಬಹಳ ನಿಧಾನವಾಗಿ ...ಯಿಯ ಕಡೆ ಹೋಗಿತ್ತು. ಅಂದರೆ ಒಂದು ಲಂಗೂರ್ ...ೋತಿಯನ್ನು ಈಗಾಗಲೇ ಅದು ಭೋಜನ ಮಾಡಿ ...ುಗಿಸಿರಬೇಕು. ಅರ್ಧಗಂಟೆಯ ನಂತರ ನಾವು ಮತ್ತೆ ...ರತೆಯನ್ನು ಹುಡುಕಲು ಹೊರಟೆವು. ಆರಂಭದಲ್ಲಿ ಕೆಲವು ...ತಿ ರಕ್ತದ ತೆಳುವಾದ ಗುರುತುಗಳಿದ್ದವು. ಸ್ವಲ್ಪ ಮುಂದೆ ...ೋದಂತೆ ಚಿರತೆಯ ಮೂಳೆಯ ಚೂರೊಂದು ಕಾಣಿಸಿತು. ...ಭಾಗದಲ್ಲಿ ಅದು ಘರ್ಜಿಸುತ್ತಾ ಕುಳಿತುಕೊಂಡಿತ್ತು.

ಅಲ್ಲಿಂದ ಮುಂದೆ ಯಾವುದೇ ಕುರುಹುಗಳು ಕಂಡಬರಲಿಲ್ಲ. ಸಂಜೆಯವರೆಗೆ ಹುಡುಕಾಟವನ್ನು ಮುಂದುವರೆಸಿದರೂ ಚಿರತೆ ಕಣ್ಣಿಗೆ ಬೀಳಲಿಲ್ಲ. ಮರುದಿನ ಬೆಳಗ್ಗೆ ಅದರ ಶವ ನಮಗೆ ಸಿಕ್ಕಿತು. ನಾನು ಹೊಡೆದ ಗುಂಡು ಅದರ ಭುಜವನ್ನು ಪುಡಿಮಾಡಿತ್ತು. ಅದೃಷ್ಟದಾಟವೆಂದರೆ ಕೆಲವೇ ದಿನಗಳ ನಂತರ ನಮ್ಮ ನಾಯಿ ಕಾಡಿನಲ್ಲಿ ಬರುವಾಗ ಇನ್ನೊಂದು ಚಿರತೆಗೆ ಬಲಿಯಾಯಿತು.

ಇದ್ದದ್ದು ಎರಡು ಸತ್ತಿದ್ದು ಒಂದು

ಕಾಡಿನಲ್ಲಿ ಓಡಾಡುವ ಬುಡಕಟ್ಟು ಜನರು ನಿಧಾನವಾಗಿ ನಡೆದಂತೆ ಕಂಡರೂ ಅವರ ನಡಿಗೆಯ ವೇಗ ಅವರ ಜೊತೆ ಇದ್ದಾಗ ಮಾತ್ರ ತಿಳಿಯುತ್ತದೆ. ಇನ್ನು ಅವರು ವೇಗವಾಗಿ ನಡೆದರೆ ಅವರ ಜೊತೆ ಸ್ಪರ್ಧಿಸಲು ಸಾಧ್ಯವೇ?

ಹೀಗೆ ವೇಗವಾಗಿ ನಡೆಯುತ್ತಾ ನಮ್ಮ ಶಿಕಾರಿಗಳು ಒಂದು ಬೆಳಗ್ಗೆ ನನ್ನ ಬಳಿ ಬಂದಾಗ ಏನೋ ಮಹತ್ವದ ಸಮಾಚಾರವಿರಲೇಬೇಕು ಎನ್ನಿಸಿತು. ಹುಲಿಯೊಂದು ಐದು ಮೈಲು ದೂರದಲ್ಲಿ ತಾವು ಕಟ್ಟಿದ್ದ ಬಲಿಪಶುವನ್ನು ಕೊಂದುಹಾಕಿದೆ ಎಂದು ಅವರು ನಗುಮುಖದಿಂದ ಪ್ರಕಟಿಸಿದರು. ಆಗ ಬೆಳಗಿನ ಹತ್ತು ಗಂಟೆ. ನಾವು ಬೇಕಾದ ಸರಂಜಾಮುಗಳೊಂದಿಗೆ ತಕ್ಷಣ ಹೊರಟೆವು. ಮಾರ್ಗಮಧ್ಯದಲ್ಲಿ ಬಲಿಗಾಗಿ ಎಮ್ಮೆಯನ್ನು ಕಟ್ಟಿದ್ದ ಜನಗಳು ಝರಿಯೊಂದರ ಬಳಿ ನಮಗೆ ಹುಲಿಯ ಹೆಜ್ಜೆಗುರುತುಗಳನ್ನು ತೋರಿಸಿದರು. ಝರಿಯಲ್ಲಿ ನೀರು ಕುಡಿದ ಹುಲಿ ಕಾಡಿನ ಮಾರ್ಗವನ್ನು ಹಿಡಿದು ಎರಡು ಮೈಲು ದೂರವಿದ್ದ ಬಲಿಯಕಡೆ ಹೋಗಿತ್ತು. ಹೆಜ್ಜೆಗುರುತುಗಳಿಂದ ಇದೊಂದು ಪ್ರೌಢ ಹೆಣ್ಣು ಹುಲಿ ಎಂದು ತೀರ್ಮಾನಿಸಬಹುದಿತ್ತು.

ಹುಲಿ ಎಮ್ಮೆಯನ್ನು ಕೊಂದರೂ ತಿನ್ನದೆ ಬಿಟ್ಟಿರುವುದನ್ನು ನೋಡಿ ನನಗೆ ನಿರಾಸೆಯಾಯಿತು. ಕುತ್ತಿಗೆಯಲ್ಲಿ ಉಗುರುಗಳನ್ನು ನೆಟ್ಟು ಅದನ್ನು ಮುರಿದು ಹಾಕಿದ್ದನ್ನು ನೋಡಿದರೆ ಇದು ಹುಲಿಯಕೃತ್ಯ ಎನ್ನುವುದು ಸ್ಪಷ್ಟವಾಗಿತ್ತು. ಬೆಳಗಿನ ಜಾವದಲ್ಲಿ ಬಲಿಪಶುವನ್ನು ಕೊಂದಿರುವ ಹುಲಿ ಪಕ್ಕದ ರಸ್ತೆಯಲ್ಲಿನ ಜನರ ಓಡಾಟವನ್ನು ಗಮನಿಸಿ ಅದನ್ನು ತಿನ್ನದೆ ಬಿಟ್ಟುಹೋಗಿರಬೇಕು ಎನ್ನುವುದು ನಮ್ಮ ಊಹೆಯಾಗಿತ್ತು.

ದಾರಿಯ ಇಕ್ಕೆಲಗಳ ಕಾಡು ದಟ್ಟವಾಗಿದ್ದು ಹುಲಿ ವಿಶ್ರಮಿಸಲು ಯಾವಕಡೆ ಹೋಗಿದೆ ಎಂದು ತಿಳಿಯುವುದು ಅಸಾಧ್ಯವಾಗಿತ್ತು. ಹಾಗಾಗಿ ಸೋಪುಗೆ ಮಾಡಿ ಅದನ್ನು ಕೊಲ್ಲುವುದು ಸಾಧ್ಯವಿರಲಿಲ್ಲ. ಶವದ ಬಳಿ ಹುಲಿಗಾಗಿ ಕಾಯುವುದು ಉಳಿದೊಂದೇ ಮಾರ್ಗವಾಗಿದ್ದರೂ ಹೀಗೆ ತಿನ್ನದೆ ಬಿಟ್ಟುಹೋದ ಬಲಿಯೆಡೆಗೆ ಹುಲಿ ಹಿಂದಿರುಗುವುದನ್ನು ನಿರೀಕ್ಷಿಸುವಂತಿರಲಿಲ್ಲ. ಹತ್ತಿರದಲ್ಲೇ ಸೂಕ್ತ ಮರವೊಂದು ಕಂಡದ್ದರಿಂದ ಅದರಲ್ಲಿ ಮಚಾನನ್ನು ನಿರ್ಮಿಸಲು ಶಿಕಾರಿಗಳಿಗೆ ಹೇಳಿದೆ. ಆಗ ಮಧ್ಯಾಹ್ನ ಒಂದು ಗಂಟೆಯಾಗಿತ್ತು. ಸ್ವಲ್ಪ ದೂರದ ತಂಪುಜಾಗದಲ್ಲಿ ಕುಳಿತು ನಾನು ಸ್ಯಾಂಡ್‌ವಿಚ್ ತಿನ್ನತೊಡಗಿದೆ. ಮಚಾನನ್ನು ನಿರ್ಮಿಸುವುದು ಬಹಳ ಶ್ರಮದ ಕೆಲಸವಾಗಿದ್ದು ನಿಶಬ್ದವಾಗಿ ಮಾಡಬೇಕಾಗಿತ್ತು. ನಿರ್ಮಿಸುವ ಬಗೆಗೆ ಭಿನ್ನಾಭಿಪ್ರಾಯವಿದ್ದಾಗಲೂ ಮೌನವಾಗಿ ಬಗೆಹರಿಸಿಕೊಳ್ಳಬೇಕಾಗಿತ್ತು. ನನ್ನ ಸಹಾಯಕರು ಕೇವಲ ಸಂಜ್ಞೆಯ ಮೂಲಕ ಕೋಪದಿಂದ ಒಬ್ಬರಿಗೊಬ್ಬರು ಸೂಚನೆ ನೀಡುತ್ತಿದ್ದದ್ದು ನೋಡಲು ರಂಜನೀಯವಾಗಿತ್ತು.

ಆಗ ಅರಣ್ಯದ ದಟ್ಟ ಮೌನವನ್ನು ಅಪಾಯದಲ್ಲಿರುವ ಕಾಡುಹಂದಿಯ ಕೂಗೊಂದು ಮುರಿಯಿತು. ಇದು ತೀರಾ ಹತ್ತಿರದಿಂದ ಬಂದದ್ದರಿಂದ ಕೆಲಸ ಮಾಡುತ್ತಿದ್ದ ನಮ್ಮವರಲ್ಲಿ ದಿಗಿಲು ಹುಟ್ಟಿಸಿತು. ಈ ಕೂಗಿನ ಅರ್ಥ ತಿಳಿದ ಅವರು ಮರದಿಂದ ಇಳಿದು ನನ್ನೆಡೆಗೆ ಓಡಿಬಂದರು. ಹುಲಿ ಹಂದಿಯನ್ನು ಕೊಲ್ಲುತ್ತಿರುವುದರಿಂದ ಎಮ್ಮೆಯ ಶವದ ಕಡೆ ಬರುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟರು. ಶಿಕಾರಿಗಳ ಸಲಹೆಗೆ ವಿರುದ್ಧವಾಗಿ ನಾನು ಹುಲಿಯನ್ನು ಬೆನ್ನುಹತ್ತಲು ನಿರ್ಧರಿಸಿದೆ. ದರ್ಬಾರಿಯನ್ನು ಕರೆದುಕೊಂಡು ಕೂಗು ಬಂದ ದಿಕ್ಕಿನಲ್ಲಿ ಮುಂದೆಹೋದೆ.

ಮುಂದಿನ ಅರ್ಧ ನಿಮಿಷದ ನಂತರ ಕೂಗು ನಿಂತುಹೋಯಿತು. ಆ ದಟ್ಟಡವಿಯ ಎತ್ತರದ ಹುಲ್ಲುಗಳ ಮಧ್ಯೆ ದಿಕ್ಕನ್ನು ಸೂಚಿಸಬಲ್ಲ ಯಾವುದೇ ಶಬ್ದದ ನೆರವಿಲ್ಲದೆ ನಾವು ಎಚ್ಚರಿಕೆಯಿಂದ ಮುಂದುವರೆದೆವು. ಕೊನೆಗೆ ಸುತ್ತಲೂ ನೋಡಲು ಅನುಕೂಲವಾಗುವಂತೆ ಒಂದು ಸಣ್ಣ ಗುಡ್ಡವನ್ನು ತೆವಳಿಕೊಂಡು ಏರತೊಡಗಿದೆವು. ದರ್ಬಾರಿ ಗಾಳಿಯ ದಿಕ್ಕನ್ನು ತಿಳಿಯಲು ಮಣ್ಣನ್ನು ಬೆರಳುಗಳಿಂದ ನಿಧಾನವಾಗಿ ಬೀಳಿಸುತ್ತಿರುವಾಗಲೇ ನಮ್ಮಿಂದ ೫೦ ಅಡಿ ದೂರದಲ್ಲಿ ಆಳವಿಲ್ಲದ ಹಳ್ಳವೊಂದರ ಆಚೆ ಹುಲಿ ಕಾಣಿಸಿತು. ನಮಗೆ ಅಡ್ಡಲಾಗಿದ್ದ ಅದರ ದೇಹ ಬೇಟೆಯ ದಣಿವನ್ನು ಸೂಚಿಸುತ್ತಿತ್ತು. ಹುಲಿಯ ತಲೆ ಭುಜಗಳು ಬಿದಿರು ಬೊಡ್ಡೆಯೊಂದರಿಂದ ಮರೆಯಾಗಿತ್ತು. ಇಂತಹ ಅವಕಾಶವನ್ನು ತಪ್ಪಿಸಿಕೊಳ್ಳಲಾರದೆ ಅದರ ಶ್ವಾಸಕೋಶಗಳಿಗೆ ಗುರಿಹಿಡಿದು ನಾನು ಗುಂಡು ಹಾರಿಸಿದೆ. ಎರಡು ಬಾರಿ ವೂಫ್ ಎಂದು ಗುಡುಗಿದ ಹುಲಿ ಅಲ್ಲಿಂದ ಓಟಕಿತ್ತಿತು. ಹುಲಿ ಮತ್ತು ನನ್ನ ಮಧ್ಯೆ ಇದ್ದ ಒಂದು ರೆಂಬೆಗೆ ನನ್ನ ಗುಂಡು ತಗುಲಿ ಅದು ಮುರಿದು ಬಿದ್ದದ್ದನ್ನು ನೋಡಿ ನನಗೆ ನಿರಾಸೆಯಾಯಿತು. ಇನ್ನೊಂದು ಗುಂಡು ಹೊಡೆಯಲು ಅವಕಾಶ ಸಿಗಬಹುದೆಂದು ನಾನು ಆ ಗುಡ್ಡದ ತುದಿಗೆ ಓಡಿದೆ. ಆದರೆ ಹುಲಿ ಮಾಯವಾಗಿತ್ತು. ಆಶ್ಚರ್ಯಕರವಾಗಿ ಹುಲಿಯ ಜೊತೆ ಮತ್ತೊಂದು ಪ್ರಾಣಿ ಓಡಿ ಹೋದ ಸದ್ದೂ ಬಂದಿತು. ಸಿಟ್ಟು ಮತ್ತು ನಿರಾಶೆಯಿಂದ ನಾನು ದರ್ಬಾರಿಯ ಬಳಿಬಂದೆ. ಅವನು ಹೇಳಲಾರದ ಶಬ್ದಗಳನ್ನು ಅವನ ಕಣ್ಣು ಹೇಳಿತ್ತು. ಗುಂಡು ಹಾರಿಸುವ ಉದ್ವೇಗದಲ್ಲಿ ನಾನು ನಡುವೆ ಇದ್ದ ಮರದ ಕೊಂಬೆಯನ್ನು ಗಮನಿಸದೆ ಗುಂಡು ಹಾರಿಸಿ ಎಲ್ಲಾ ಹಾಳುಗೆಡವಿದ್ದೆ.

ಬಹಳ ಬೇಸರದಿಂದ ನಾವು ಹಳ್ಳವನ್ನು ದಾಟಿ ಹುಲಿ ನಿಂತಿದ್ದ ಸ್ಥಳಕ್ಕೆ ಬಂದೆವು. ಅಲ್ಲಿನ ಬಿದಿರು ಬೊಡ್ಡೆಯ ಹಿಂದೆ ದೈತ್ಯ ಕಾಡುಹಂದಿಯೊಂದು ಸತ್ತುಬಿದ್ದಿತ್ತು. ದರ್ಬಾರಿ ಸಂತೋಷದಿಂದ ಶಕ್ತು ಮತ್ತಿತರರನ್ನು ಬೇಗನೆ ಬರುವಂತೆ ಕೂಗಿ ಕರೆದ. ಭಯದಿಂದಲೇ ಬಂದ ಅವರ ಮುಖಗಳು ಹಂದಿಯನ್ನು ನೋಡಿ ಪ್ರಸನ್ನವಾದವು. ಹುಲಿ ಕೈತಪ್ಪಿ ಹೋದದ್ದು ಅವರಿಗೆ ನಗಣ್ಯವಾಗಿತ್ತು.

ಸ್ವಲ್ಪ ಸುಧಾರಿಸಿಕೊಂಡ ನಾವು ಸಾಲಾಗಿ ಮುಂದೆ ಹೋಗಿ ಹುಲಿಯ ರಕ್ತದ ಗುರುತುಗಳನ್ನು ಹುಡುಕಲು ನಿರ್ಧರಿಸಿದೆವು. ಅದನ್ನು ನೋಡುವ ಯಾವ ಆಶೆ ಇಲ್ಲದಿದ್ದರೂ ಸುಮ್ಮನೆ ಮುಂದುವರೆದೆವು. ಸ್ವಲ್ಪವೇ ದೂರ ಹೋಗುವಷ್ಟರಲ್ಲಿ ಶಕ್ತು ಭಯದಿಂದ ಹಿಮ್ಮೆಟ್ಟಿದ. ಕೆಲವೇ ಅಡಿಗಳ ಮುಂದೆ ಮರದ ಕೆಳಗೆ ಹುಲಿ ಮಲಗಿತ್ತು. ನಮ್ಮ ಕಣ್ಣುಗಳನ್ನು ನಂಬುವುದು ನಮಗೇ ಕಷ್ಟವಾಗಿತ್ತು. ಹುಲಿ ನಿದ್ದೆಮಾಡುತ್ತಾ ಮಲಗಿರುವಂತೆ ಕಾಣಿಸುತ್ತಿತ್ತು. ಅದು ಉಸಿರಾಡುತ್ತಿಲ್ಲವೆಂದು ಖಾತ್ರಿಪಡಿಸಿಕೊಂಡ ನಾನು ಬಂದೂಕನ್ನು ಸಿದ್ಧಮಾಡಿಕೊಂಡು ಮುಂದೆ ಹೋದೆ. ಆದರೆ ಹುಲಿ ನಿಜವಾಗಿ ಸತ್ತುಹೋಗಿತ್ತು. ಅದರ ಮೈಮೇಲೆ ಗುಂಡಿನ ಗುರುತುಗಳಿಲ್ಲದಿದ್ದರೂ ಅದರ ಮೂಗು ಬಾಯಿಗಳಿಂದ ರಕ್ತಸ್ರಾವಾಗುತ್ತಿತ್ತು.

ದರ್ಬಾರಿಗೆ ಮಾತ್ರ ತೃಪ್ತಿಯಾಗಿರಲಿಲ್ಲ. ಗುಂಡು ಹಾರಿಸಿದ ನಂತರ ಓಡಿಹೋದ ಇನ್ನೊಂದು ಪ್ರಾಣಿಯನ್ನು ನಾವು ಹುಡುಕಿಕೊಂಡು ಹೋಗಬೇಕೆಂದು ಅವನು ಒತ್ತಾಯಿಸಿದ. ನಮಗೆ ಮತ್ತೊಂದು ಹುಲಿ ಸತ್ತುಬಿದ್ದಿರುವ ನಿರೀಕ್ಷೆ ಇಲ್ಲದಿದ್ದರೂ ನಾವು ಕೇಳಿದ ಓಟದ ಸದ್ದಿನ ಹಿಂದಿನ ಗುಟ್ಟನ್ನು ನಮಗೆ ತಿಳಿಯಬೇಕಿತ್ತು. ಹುಲಿ ಹಂದಿಯನ್ನು ಕೊಲ್ಲುವಾಗ ಅದನ್ನು ನೋಡುತ್ತಾ ನಿಲ್ಲುವುದು ಮತ್ತೊಂದು ಹುಲಿಗೆ ಮಾತ್ರ ಸಾಧ್ಯವಿತ್ತು. ಅಂತಹ ಯಾವ ಕುರುಹುಗಳು ಅಲ್ಲಿ ಸಿಗದಿದ್ದರೂ ದರ್ಬಾರಿಯ ಊಹೆ ನಿಜವಾಗಿರಲೇಬೇಕು. ಇಂತಹ ದೊಡ್ಡ ಕಾಡುಹಂದಿ ಹುಲಿಗಳನ್ನು ಸಶಕ್ತವಾಗಿ ಎದುರಿಸಿ ಕೆಲವೊಮ್ಮೆ ಗೆಲ್ಲಲೂಬಹುದು. ನನ್ನ ಊಹೆಯ ಪ್ರಕಾರ ಒಂದು ಹುಲಿ ಹಂದಿಯ ತೊಡೆಯನ್ನು ಮುರಿಯುವಾಗ ಮತ್ತೊಂದು ಹೆಣ್ಣು ಹುಲಿ ಅದರ ಕುತ್ತಿಗೆಯನ್ನು ಹಿಡಿದಿತ್ತು. ಆದರೆ ಗಂಡು ಹುಲಿ ನಮ್ಮನ್ನು ಗಮನಿಸಿ ಹಿಂದೆಸರಿದು ಈ ಹೆಣ್ಣು ಹುಲಿಯನ್ನು ಅಪಾಯಕ್ಕೆ ಸಿಲುಕಿಸಿತ್ತು.

ದೈತ್ಯಗಾತ್ರದ ಹುಲಿ ಮತ್ತು ಹಂದಿಯೊಂದಿಗೆ ನಾವು ವಿಜಯೋತ್ಸವವನ್ನು ಆಚರಿಸುತ್ತಾ ಹಳ್ಳಿಗೆ ಮರಳಿದೆವು. ಹತ್ತಿರದ ಹಳ್ಳಿಯಿಂದ ಸೇಂದಿಯನ್ನು ತರಿಸಿ ಎಲ್ಲರನ್ನೂ ಖುಷಿಪಡಿಸಿದೆ! ಪಾನನಿಷೇಧ ಆಗಿನ ಕಾಲದಲ್ಲಿ ಯಾರಿಗೂ ಗೊತ್ತೇ ಇರಲಿಲ್ಲ.

ಆಗಿನ ದಿನಗಳಲ್ಲಿ ಬೇಟೆಯಾಡಿದ ಹುಲಿಯನ್ನು ನೋಡಲು ದೂರದೂರದ ಊರುಗಳಿಂದ ಜನ ಬರುತ್ತಿದ್ದರು. ಹುಲಿಯ ಶವಕ್ಕೆ ಭಕ್ತಿಯಿಂದ ಕೈಮುಗಿದು ಅದರ ಕಾಲುಗುರುಗಳನ್ನು ಮುಟ್ಟುತ್ತಿದ್ದರು. ಕೆಲವರು ಅದರಲ್ಲೂ ಹೆಚ್ಚಾಗಿ ವೃದ್ಧರು ಸ್ವಲ್ಪ ಪ್ರಮಾಣದ ಹುಲಿಯಕೊಬ್ಬಿಗೆ ಬೇಡಿಕೆ ಸಲ್ಲಿಸುತ್ತಿದ್ದರು. ಏಕೆಂದರೆ ಅವರ ಪ್ರಕಾರ ಇದು ಸಂಧಿವಾತ ಕಾಯಿಲೆಗೆ ಸಿದ್ಧೌಷಧವಾಗಿತ್ತು.

(ಮುಂದುವರೆಯುವುದು)


ಒಂದು ಪತ್ರ

...ಕಾರಣ ಉತ್ತರ ಕರ್ನಾಟಕದ ಜನರನ್ನು ಹೀಯಾಳಿಸುತ್ತಾ ...ವಮಾನಿಸುತ್ತಾ ಇರುವಂತಹ ವಿಕೃತ ಬುದ್ಧಿ ...ಂದಿರುವಂತೆ ಉತ್ತರ ಪ್ರದೇಶದಲ್ಲಿಯೂ ಸಮೃದ್ಧ ಪಶ್ಚಿಮ ...ಗದ ಜಾಟರು ಹಿಂದುಳಿದ ಪೂರ್ವಾಂಚಲ ಭಾಗದ ...ೋಜಪುರಿ ಅಥವಾ ಅವಧೀ ಭಾಷಿಗರನ್ನು ...ಯಾಳಿಸುತ್ತಾ ಅವಮಾನಿಸುತ್ತಾ ಇರುತ್ತಾರೆ. ...ನು ನಾಲ್ಕು ವರ್ಷ ಉದ್ಯೋಗ ನಿಮಿತ್ತ ...ತ್ತರ ಪ್ರದೇಶದಲ್ಲಿ ಇದ್ದುದರಿಂದ ಅಲ್ಲಿಯ ...ಮಾಜಿಕ ಸ್ಥಿತಿಗತಿ ವೈಯಕ್ತಿಕವಾಗಿ ನನಗೆ ...ತ್ತಿದೆ. ಹಾಗಾಗಿ ಆ ರಾಜ್ಯ ವಿಭಜನೆಯಾದರೆ ...ದರವರಲ್ಲಿಯೇ ಇರುವ ಈ ಮೇಲು-ಕೀಳೆಂಬ ...ದೇಶಿಕ ವೈಮನಸ್ಸಿಗೆ ತೆರೆ ಬೀಳುತ್ತದೆ. ಮೇಲಾಗಿ ...ಗ ಉತ್ತರಪ್ರದೇಶದ ಮುಖ್ಯಮಂತ್ರಿಯಾದ ಆದಿತ್ಯನಾಥ ...ಂತಹ ಅಪಾಯಕಾರಿ ಮನುಷ್ಯ ಹಾಗೂ ಆತ ಏನನ್ನು ...ಡಬಹುದು ಹೇಳುವುದಿಲ್ಲ. ಹಾಗಿರುವಾಗ ಇಂತಹ ವಿಕಾರ ...ನಸ್ಥಿತಿಯ ಕೈಯಲ್ಲಿ ಅಂತಹ ಬೃಹತ್ ರಾಜ್ಯದ ... ಕೋಟಿ ಜನರ ಭವಿಷ್ಯವನ್ನು ಒತ್ತೆ ಇಡುವುದು ...ೇಕವಾಗುವುದಲ್ಲ. ಹಾಗಾಗಿ ಉತ್ತರಪ್ರದೇಶವನ್ನು ನಾಲ್ಕು ...ಗವಾಗಿ ವಿಭಜಿಸಿದರೆ ಈ ಅಪಾಯಕಾರಿ ಮನುಷ್ಯನ ...ರ್ ವ್ಯಾಪ್ತಿ ಮುಕ್ಕಾಲು ಪಾಲು ಕಡಿಮೆಯಾಗಿ ಅವನ ...ಾಯ ಕೇವಲ ಅವನ ತವರು ಪೂರ್ವಾಂಚಲ್ ಪ್ರದೇಶಕ್ಕೆ ...ತ, ಸೀಮಿತವಾಗಿ ಉಳಿಯುತ್ತದೆ. ಆದರೆ ಇನ್ನೊಂದು ...ಯ ಎದುರಾಗಬಹುದು. ಕಾರಣ ಯಾಪಿಯ ಮಧ್ಯದ ...ಪ್ ಭಾಗಕ್ಕೆ ಸಾಕ್ಷಿ ಮಹಾರಾಜ್, ಪಶ್ಚಿಮದ ಹರಿತ್ ಪ್ರದೇಶಕ್ಕೆ ಸಾಧ್ವಿ ಪ್ರಾಚೀ ಹಾಗೂ ದಕ್ಷಿಣದ ಬುಂದೇಲಖಂಡಕ್ಕೆ ಉಮಾಭಾರತಿಯಂತಹ ವಿಷಕಾರಿ ಕಾವಿಧಾರಿಗಳನ್ನು ಮೋದಿ-ಶಾ ಮುಖ್ಯಮಂತ್ರಿಯಾಗಿ ಹೇರುವ ಸಂಭವವಿದೆ. ಆ ರೀತಿ ಉತ್ತರಪ್ರದೇಶ ವಿಭಜನೆ ಆದ ನಂತರವೂ ಅದು ಕಾವಿ ಶನಿಗಳ ಸಂತೆ ಆಗುವುದನ್ನು ತಪ್ಪಿಸುವುದು ಕಷ್ಟವಾಗಬಹುದು ಎಂದು ಕೆಲವರ ಶಂಕೆ.

ರಾಜ್ಯ ವಿಭಜನೆಗೆ ಕೇವಲ ರಾಜಕೀಯ ಇಚ್ಛಾಶಕ್ತಿ ಬೇಕು ಅಷ್ಟೇ. ಯಾಕೆಂದರೆ ಉತ್ತರ ಪ್ರದೇಶ ವಿಭಜನೆಯಾದರೆ ಮಹಾರಾಷ್ಟ್ರದಲ್ಲಿ ವಿದರ್ಭ ಭಾಗದ ಜನರು ಪ್ರತ್ಯೇಕ ರಾಜ್ಯಕ್ಕಾಗಿ ಚಳವಳಿಗೆ ಇಳಿಯುತ್ತಾರೆ. ಹಾಗೆಯೇ ಉತ್ತರ ಪ್ರದೇಶಕ್ಕಿಂತ ಮಧ್ಯ ಪ್ರದೇಶದಲ್ಲಿ ಜನಸಂಖ್ಯೆ ಕಡಿಮೆ ಇದ್ದರೂ ಭೌಗೋಳಿಕವಾಗಿ ಹೆಚ್ಚು ವಿಸ್ತಾರವಾದ ಮ.ಪ್ರ.ದಲ್ಲಿಯೂ ವಿಭಜನೆಗೆ ಬೇಡಿಕೆಗಳು ಹುಟ್ಟಬಹುದು. ಆದರೆ ಮುತ್ಸದ್ದಿತನದಿಂದ ಅವುಗಳನ್ನು ನಿಭಾಯಿಸಬಹುದು. ಕಾರಣ ಆ ರಾಜ್ಯಗಳಲ್ಲಿಯೂ ಬಿಜೆಪಿ ಆಡಳಿತವೇ ಇರುವುದು. ಜತೆಗೆ ಮಾಯಾವತಿಯವರ ಪಕ್ಷ ಈಗ ಸೋತಿದ್ದರೂ ಅವರು ತಾವೇ 2010ರಲ್ಲಿ ಪಾಸ್ ಮಾಡಿರುವ ರಾಜ್ಯ ವಿಭಜನೆಯ ವಿಧೇಯಕವನ್ನು ಕೇಂದ್ರ ಸರಕಾರ ಈಗ ಅನುಷ್ಠಾನಗೊಳಿಸಬೇಕೆಂದು ಹೋರಾಟ ಮಾಡಿದರೆ ಪಶ್ಚಿಮ ಭಾಗದಾದ ಹರಿತ್ ಪ್ರದೇಶದಲ್ಲಿ ಮಾಯಾವತಿ ಯವರ ರಾಜಕೀಯ ಭವಿಷ್ಯ ಉತ್ತಮಗೊಳ್ಳುವ ಸಂಭವವಿದೆ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಮಠಾಧೀಶರು ಗೋವಿನ ವಿರುದ್ಧ ಹೋರಾಡಬೇಕಿದ



ಭಾರತೀಯ ದೇಶಿ ತಳಿಯ ದನಗಳ ಮಾಂಸದಲ್ಲಿ ವಿಷವಿದ್ದು ಅದನ್ನು ಸೇವಿಸುವವರಿಗೆ ಮೆದುಳು ರೋಗ, ನರಗಳ ದೌರ್ಬಲ್ಯ, ನಪುಂಸಕತ್ವ, ಮಂದಬುದ್ಧಿ ಹಾಗೂ ಮಾನಸಿಕ ಅಸ್ವಸ್ಥತೆಗಳು ಬರುತ್ತವೆ ಎಂದು ರಾಮಚಂದ್ರಾಪುರ ಮಠದ ಗೋಸ್ವಾಮಿ ಮೊನ್ನೆ ಗೋಮಂಗಳ ಯಾತ್ರೆಯಲ್ಲಿ ಹೇಳಿದ್ದಾರೆ. ಕಾರಣ ಅವರು ಹಲವಾರು ವರ್ಷಗಳಿಂದ ಗೋವು ಸಾಕುತ್ತಿದ್ದು ತಮ್ಮ ಮಠದಲ್ಲಿ ಒಂದು ಸಂಶೋಧನಾಲಯ ಸಹ ಹೊಂದಿರುವರಂತೆ. ಹಾಗಾಗಿ ಅವರು ಹೇಳಿರುವುದು ಸರಿಯಾಗಿರಲೇ ಬೇಕು. ಗೋವಿನ ಮಾಂಸದಲ್ಲಿ ವಿಷ ಹಾಗೂ ಮೆದುಳು ರೋಗದ ರೋಗಾಣುಗಳು ಇರುವುದರಿಂದ ಸ್ವಾಭಾವಿಕವಾಗಿ ಆ ಗೋವಿನ ಶರೀರದಲ್ಲಿ ತಯಾರಾಗುವ ಮಲ-ಮೂತ್ರಗಳಲ್ಲೂ ಈ ವಿಷದ ಅಂಶ ಮತ್ತು 33 ಕೋಟಿ ರೋಗಾಣುಗಳು ಇರಲೇ ಬೇಕು. ದೊಡ್ಡ ದೊಡ್ಡ ಆಯುರ್ವೇದಿಕ್ ಔಷಧ ತಯಾರಿಕಾ ಕಂಪನಿಗಳು ತಮ್ಮ ಔಷಧಗಳಲ್ಲಿ ಗೋವಿನ ಮೂತ್ರ ಮತ್ತು ಸೆಗಣಿ ತಪ್ಪದೇ ಉಪಯೋಗಿಸುತ್ತವೆ. ಹಾಗಾಗಿ ಈ ಆಯುರ್ವೇದ ಔಷಧಗಳಲ್ಲಿ ಗೋಮಾಂಸದಲ್ಲಿ ಇರುವಂತಹದ್ದೇ ವಿಷ ಹಾಗೂ ರೋಗಾಣುಗಳು ಇರಲೇ ಬೇಕು. ಆದುದರಿಂದ ಇಂತಹ ಔಷಧಗಳ ಸೇವನೆ ಮಾನವನಿಗೆ ಅಪಾಯಕಾರಿ ಎಂದು ಪರಿಗಣಿಸಬೇಕು. ಜತೆಗೆ ಹಳ್ಳಿಗಳಲ್ಲಿ ಈಗಲೂ ಮನೆಯ ಅಂಗಳಕ್ಕೆ ಹಾಗೂ ತುಳಸಿಕಟ್ಟೆಯ ಸುತ್ತ ಗೋವಿನ ಸೆಗಣಿಯಿಂದ ಸಾರಿಸುತ್ತಾರೆ. ಬೆರಣಿ ಸಹಾ ತಟ್ಟಿ ಅಡುಗೆ ಮನೆಯ ಒಲೆಯಲ್ಲಿ ಉಪಯೋಗಿಸುತ್ತಾರೆ. ಇನ್ನು ಮುಂದೆ ಗೋವಿನ ಮೂತ್ರ ಹಾಗೂ ಸೆಗಣಿ ಯಾವುದೇ ದೇಶಿ ಔಷಧ ಹಾಗೂ ಅಡುಗೆ ಮನೆ ಒಲೆಯಲ್ಲಿ ಬಳಸುವುದನ್ನು ನಿಷೇಧಿಸಬೇಕು. ಕೆಲವರು ಬೆಳಗ್ಗೆ ಎದ್ದು ಆರೋಗ್ಯವರ್ಧನೆಗೆ ಗೋಮೂತ್ರ ಕುಡಿಯುತ್ತಾರೆ. ಅಂತಹದನ್ನೂ ಇನ್ನು ಮುಂದೆ ನಿಲ್ಲಿಸುವಂತೆ ಗೋಮಂಗಳ ಯಾತ್ರೆಯಲ್ಲಿ ಪಾಲುಗೊಂಡ ಎಲ್ಲಾ ಮಠಾಧೀಶರುಗಳು ಜನರ ಮನವೊಲಿಸಬೇಕು. ಕೇವಲ ವೇದಿಕೆಯಲ್ಲಿ ನಿಂತು ಸ್ವಾಮೀಜಿಗಳು ಮತ್ತು ಹಿಂದುತ್ವ ಮುಖಂಡರುಗಳು ಘೋಷಣೆ ಮಾಡಿದರೆ ಸಾಲದು. ಅವರೂ ಫೀಲ್ಡಿಗಿಳಿದು ಕೆಲಸ ಮಾಡಿ ಗೋಮೂತ್ರ ಹಾಗೂ ಸೆಗಣಿಯಲ್ಲಿರುವ ರೋಗಾಣು ಮತ್ತು ವಿಷದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಜನರ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಸಹಾಯ ಮಾಡಬೇಕು. ಅತೀಹೆಚ್ಚು ಮಾನಸಿಕ ಅಸ್ವಸ್ಥರು, ಸ್ಪಾಸ್ಟಿಕ್-ಬುದ್ಧಿ ಮಾಂದ್ಯರು ಮತ್ತು ನರಗಳ ದೌರ್ಬಲ್ಯ ಉಳ್ಳವರು ಜೈನರಲ್ಲಿ ಹಾಗೂ ಹಿಂದೂ ಸವರ್ಣೀಯರಲ್ಲಿ ಹೆಚ್ಚು ಇರಲು ಮುಖ್ಯ ಕಾರಣ ಅನುವಂಶೀಯಕತೆಯಂತೆ. ಎರಡನೆಯ ಕಾರಣ- ಅವರು ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಈರುಳ್ಳಿ-ಬೆಳ್ಳುಳ್ಳಿ ತಿನ್ನದಿರುವುದು ಒಂದು ಕಾರಣವಾದರೆ, ಗೋವಿನ ಮೂತ್ರ ಕುಡಿಯುವುದು ಹಾಗೂ ಮನೆಯ ಅಂಗಳ ಹಾಗೂ ತುಳಸಿಕಟ್ಟೆಯನ್ನು ಸೆಗಣಿಯಿಂದ ಸಾರಿಸುವುದರಿಂದಲೂ ಅದರಲ್ಲಿರುವ ರೋಗಾಣುಗಳು ಅವರ ದೇಹದಲ್ಲಿ ಹರಡಿ ಈ ಸವರ್ಣೀಯರಲ್ಲಿ ಮನೋರೋಗಗಳು ಹಾಗೂ ಬುದ್ಧಿಮಾಂದ್ಯ ಹೆಚ್ಚಿರಲು ಕಾರಣವಾಗಿರಬಹುದು. ಈ ಬಗ್ಗೆ ರಾಮಚಂದ್ರಾಪುರಮಠದ ಸಂಶೋಧನಾಲಯದಲ್ಲಿಯ ಹವ್ಯಕ ವಿಜ್ಞಾನಿಗಳು ಹೆಚ್ಚಿನ ಸಂಶೋಧನೆ ಮಾಡಿ ಜನರಿಗೆ ಸರಿಯಾದ ಮಾರ್ಗದರ್ಶನ ಮಾಡಬೇಕು.

ಗೋಮಾಂಸದಲ್ಲಿ ವಿಷವಿದೆ, ಅದನ್ನು ತಿನ್ನುವುದರಿಂದ ಮೆದುಳು ರೋಗ ಬರುತ್ತದೆ ಎಂದು ಗೋಸ್ವಾಮಿ ಅಪ್ಪಣೆ ಕೊಡಿಸಿದ ಸುದ್ದಿ ಈಗ ವಿದೇಶಕ್ಕೆ ಸಹ ಮುಟ್ಟಿದ್ದು ಭಾರತದಿಂದ ಗೋಮಾಂಸ ಖರೀದಿಸುತ್ತಿದ್ದ ವಿದೇಶಿ ಆಮದುಗಾರರು ಈಗ ಭಾರತದ ಗೋಮಾಂಸ ಸೇವನೆಗೆ ಅರ್ಹವಲ್ಲ ಎಂದು ನಿರ್ಧಾರ ತಳೆದಿದ್ದಾರಂತೆ. ಭಾರತೀಯರಂತೆ ವಿದೇಶಿಗಳೂ ಈಗ ಭಾರತದ ಕಾವಿಧಾರಿಗಳ ಮಾತಿನಲ್ಲಿ ವಿಶ್ವಾಸವಿಟ್ಟು ಭಾರತದ ಗೋಮಾಂಸವನ್ನು ತಮ್ಮಲ್ಲಿ ಆಯಾತ ಮಾಡುವುದನ್ನು ನಿಲ್ಲಿಸಿದರೆ ಭಾರತವು ಗೋಮಾಂಸ ರಫ್ತಿನಲ್ಲಿ ಈಗಿನ ಒಂದನೇ ನಂಬರಿನಿಂದ ಕೊನೆಯ ನಂಬರಿಗೆ ಜಾರುವುದು ಖಂಡಿತ. ಒಂದೆಡೆ ಡೊನಾಲ್ಡ್ ಟ್ರಂಪ್‌ನ ನೀತಿಗಳಿಂದಾಗಿ ಭಾರತದ ಲಕ್ಷಾಂತರ ಐಟಿ ಉದ್ಯೋಗಿಗಳು ಕೆಲಸ ಕಳೆದುಕೊಂಡು ಭಾರತಕ್ಕೆ ಮರಳಿ ಬರುವ ಸಿದ್ಧತೆಯಲ್ಲಿ ಇದ್ದರೆ, ಇನ್ನೊಂದೆಡೆ ಅಮೆರಿಕದಲ್ಲಿ ಭಾರತೀಯರ ಮೇಲೆ ಜನಾಂಗ ದ್ವೇಷ ಹೆಚ್ಚುತ್ತಿದ್ದು ನಡು ಬೀದಿಯಲ್ಲಿಯೇ ಭಾರತೀಯರ ಕೊಲೆಗಳಾಗುತ್ತಿವೆ. ಮತ್ತೊಂದೆಡೆ ಭಾರತದ ಗೋಮಾಂಸ ರಫ್ತು ತೀವ್ರ ಕುಸಿದು ಭಾರತದ ಜೈನ ಮತ್ತು ಬ್ರಾಹ್ಮಣ ಬೀಫ್ ನಿರ್ಯಾತಗಾರರಿಗೆ ಭಾರಿ ನಷ್ಟವಾಗಲಿದೆ. ದನ ಸಾಕುತ್ತಿದ್ದ ರೈತರು ತಮ್ಮ ಮುದಿ ದನಗಳನ್ನು ಕಸಾಯಿಗೆ ಮಾರಲಾಗದೇ ಹಳ್ಳಿಯ ಆರ್ಥಿಕತೆಯೂ ಕುಸಿಯಲಿದೆ. ಮೇಲಾಗಿ ಉತ್ತರ ಪ್ರದೇಶದ ಚುನಾವಣೆ ಮುಗಿದಿದ್ದು ತೊಗರಿ ಬೇಳೆ ಮತ್ತೆ ಕೆಜಿಗೆ 250 ರೂಪಾಯಿಗೆ ಜಿಗಿಯಲಿದೆಯಂತೆ. ಕಾರಣ ಈಗಿನ ಐದು ರಾಜ್ಯಗಳ ಚುನಾವಣೆಗೆ ಧಾನ್ಯ ವ್ಯಾಪಾರಿಗಳು ಬಿಜೆಪಿ ಪಕ್ಷಕ್ಕೆ ಕೊಟ್ಟ ದೇಣಿಗೆಯನ್ನು ಅವರು ವಸೂಲು ಮಾಡದೇ ಇರುತ್ತಾರೆಯೇ? ಜತೆಗೆ ಯೋಗಿ ಆದಿತ್ಯನಾಥನಂತಹ ತಲೆತಿರುಕ ಈಗ ಉತ್ತರಪ್ರದೇಶದ ಮುಖ್ಯಮಂತ್ರಿ ಆಗಿರುವುದು ಇಡಿ ದೇಶಕ್ಕೇ ಶನಿ ಹಿಡಿದಂತೆ ಆಗಿದೆ. ಇಪ್ಪತ್ತೊಂದನೇ ಶತಮಾನದಲ್ಲಿ ಭಾರತಕ್ಕೆ ಜಾತಿ-ಧರ್ಮದ ರಾಜಕಾರಣ ಮಾಡುವ ನೀಚರಿಂದಾಗಿ ಭಯಂಕರ ವಿಪತ್ತು ಕಾದಿದೆ ಎಂದು ಫ್ರೆಂಚ್ ಭವಿಷ್ಯಕಾರ ನೋಸ್ಟ್ರಡಮಸ್ ಐನೂರು ವರ್ಷಗಳ ಹಿಂದೆ ಹೇಳಿದ್ದ ಭವಿಷ್ಯವಾಣಿ ಇಷ್ಟು ಬೇಗ ನಿಜವಾಗುತ್ತಿರುವುದು ಭಾರತದ ದುರದೃಷ್ಟ.

- ರಾಮಕೃಷ್ಣ ಕುಲಾಲ್, ಬೆಂಗಳೂರು

ಜನಪರತೆಯ ಸ್ವವಿಮರ್ಶೆಗಿದು ಸಕಾಲ?

ಪ್ರಸ್ತುತ ದೇಶದಲ್ಲಿ ಘಟಿಸುತ್ತಿರುವ ಸಮಾಜಮುಖಿ ಯೆನಿಸದ ಅನೇಕ ಸಂಗತಿಗಳು ಸಹೃದಯಿ ಮನಸ್ಸುಗಳಿಗೆ ತಲ್ಲಣ ಹುಟ್ಟಿಸಿರುವುದಂತೂ ನಿಜ. ಮಣಿಪುರದಲ್ಲಿ ತನ್ನ ಬದುಕಿನ ಅಮೂಲ್ಯ ಕಾಲವನ್ನೇ ನ್ಯಾಯಕ್ಕೋಸ್ಕರವಾಗಿ ಸವೆಸಿದ ಇರೋಮ್ ಶರ್ಮಿಳಾರಿಗೆ ನೋಟಾಕ್ಕಿಂತಲೂ ಕಡಿಮೆ (ಕೇವಲ ತೊಂಭತ್ತು) ಮತಗಳು ಸಿಕ್ಕಿದ್ದಾಗಲೀ, ಈ ದೇಶದ ಅತಿದೊಡ್ಡ ರಾಜ್ಯವನ್ನು ದೇಶದ ಸಂವಿಧಾನವನ್ನೇ ಗೌರವಿಸದಂತಹ ಚರಿತ್ರೆಯನ್ನು ಹೊಂದಿರುವಂತ ವ್ಯಕ್ತಿಯ ಸುಪರ್ದಿಗೆ ಕೊಟ್ಟಿರುವುದಾಗಲೀ, ಲಂಕೇಶರ ಜನ್ಮದಿನಾಚರಣೆಯ ಕಾರ್ಯಕ್ರಮದಲ್ಲಿ ದಾವಣಗೆರೆಯ ಫ್ಯಾಸಿಸ್ಟ್ ಶಕ್ತಿಯೊಂದು ಲೇಖಕರ ಮೇಲೆ ನಡೆಸಿದ ದಾಳಿಯಾಗಲೀ, ಮಂಗಳೂರಿನ ಹಿರಿಯ ಸಮಾಜಮುಖಿ ಹೋರಾಟಗಾರ ನರೇಂದ್ರ ನಾಯಕರ ಮೇಲಿನ ಹತ್ಯಾ ಯತ್ನಗಳಾಗಲೀ ಈ ದೇಶ ಸ್ಪಷ್ಟವಾಗಿ ಎಡವುದರತ್ತಲೇ ಸಾಗುತ್ತಿರುವುದನ್ನ ಬೊಟ್ಟು ಮಾಡುತ್ತಿದೆ. ಇದಕ್ಕಿಂತಲೂ ಘೋರವಾಗಿ ಇಷ್ಟೆಲ್ಲಾ ನಡೆಯುತ್ತಿದ್ದರೂ ಕೂಡ ಈ ಬಗ್ಗೆ ಎಲ್ಲೂ ಹೇಳಿಕೊಳ್ಳುವ ಪ್ರತಿರೋಧಗಳು ಕಂಡುಬಾರದೇ ಇರುತ್ತಿರುವುದು ವಿಚ್ಛಿದ್ರಕಾರಿ ಶಕ್ತಿಗಳಿಗೆ ಇನ್ನಷ್ಟು ಪ್ರೋತ್ಸಾಹ ವನ್ನು ನೀಡುವಂತಿದೆ. ಇದೆಲ್ಲ ಯಾವುದರ ಸೂಚನೆ?

ಮೌಢ್ಯ ಹಾಗು ಜನಪರ ಸಿದ್ಧಾಂತಗಳ ತಾಕಲಾಟಕ್ಕೆ ದೇಶ ಕಾಲವನ್ನೂ ಮೀರಿದ ಇತಿಹಾಸವಿದೆ. ಈ ತಿಕ್ಕಾಟಗಳೆಲ್ಲ ಮನುಷ್ಯ ಜೀವಿ ಈ ಭೂಮಿಯಲ್ಲಿರುವ ತನಕ ಮುಂದುವರೆಯುವುದೂ ಕೂಡ ಹಗಲಿನಷ್ಟೇ ಸತ್ಯ. ಲಿಂಕನ್, ಗಾಂಧಿ, ಅಂಬೇಡ್ಕರ್, ರಾಜಾರಾಮ್ ಮೋಹನ್ ರಾಯ್, ಕುದ್ಮುಲ್ ರಂಗರಾಯರಂತವರೆಲ್ಲ ಆಯಾ ಕಾಲದ ಸಾಮಾಜಿಕ ಪ್ರತಿಫಲನಗಳೇ ಹೊರತು ಗೀತೆಯಲ್ಲಿನ "ಪರಿತ್ರಾಣಾಯ ಸಾಧೂನಾಂ ವಿನಾಶಾಯ ದುಷ್ಕೃತಾ/ಸಂಭವಾಮಿ ಯುಗೇ ಯುಗೇ.." (ಸಜ್ಜನರ ರಕ್ಷೆ ದುರ್ಜನರ ವಿನಾಶಕ್ಕಾಗಿ ನಾನು ಕಾಲ ಕಾಲಕ್ಕೂ ಹುಟ್ಟಿಬರುವೆ) ಎಂಬ ಕೃಷ್ಣನ ಮಾತಿನಂತೆ ಇವರೆಲ್ಲ ಅದಕ್ಕೆಂದೇ ದುಡಕ್ಕನೆ ಭೂಮಿಯಲ್ಲಿ ಅವತರಿಸಿದವರೇನಲ್ಲ. ಬ್ರಿಟಿಷ್ ಸರಕಾರದ ಆಡಳಿತಾವಧಿಯಲ್ಲಿ ಮೇಲ್ವರ್ಗದವರ ಅಸ್ಪೃಶ್ಯತೆಯ ಕಾರಣಕ್ಕೆ ರಾಯರು ಕೆಲಸ ಮಾಡುತ್ತಿದ್ದ ಕೋರ್ಟಿನಲ್ಲಿ ಅನ್ಯಾಯಕ್ಕೊಳಗಾದ ದಲಿತನ ಪರನಿಂತು ಸೋತ ಕುದ್ಮುಲ್ ರಂಗರಾಯರು ಬಳಿಕ ಬ್ರಿಟಿಷ್ ನ್ಯಾಯಾಧೀಶರ ಸಲಹೆಯ ಮೇರೆಗೆ ದಲಿತರ ಉದ್ಧಾರಕ್ಕಾಗಿ ಸಮಾಜವನ್ನೇ ಎದುರು ಹಾಕಿಕೊಂಡು ಶಾಲೆಗಳನ್ನು ಆರಂಭಿಸಿ ಮಹಾನ್ ಕ್ರಾಂತಿಯನ್ನು ಮಾಡಿದ್ದರು. ಒಂದು ವೇಳೆ ಈ 'ತಿರುವಿ'ನ ಘಟನೆ ಘಟಿಸದಿದ್ದರೆ ರಂಗರಾಯರಂತಹ ಮಹಾತ್ಮ ದಲಿತರಿಗೆ ದೊರಕುತ್ತಿರಲಿಲ್ಲ. ಆದರೆ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಜನರು ತೀರಾ ಸಂವೇದನಾಶೀಲರಂತೆ ವರ್ತಿಸುತ್ತಿರುವ ಕಾರಣವಾದರೂ ಏನು? ಇರೋಮ್ ಶರ್ಮಿಳಾರಂತವರ ಹೋರಾಟದ ಔನತ್ಯವನ್ನೇ ಸಾರಾಸಗಟಾಗಿ ತಿರಸ್ಕರಿಸಿದ ಇವರುಗಳ ನೀರಸ ಪ್ರತಿಸ್ಪಂದನೆಯ ಮೂಲವಾದರೂ ಏನು?



ಹೌದು, ಯಾವುದೇ ಹೋರಾಟದ ವಿಚಾರಗಳು ಬದಲಾಗದೇ ಇದ್ದರೂ ಅದರ ಸುತ್ತಲಿನ ಪ್ರಭಾವಳಿ ಕಾಲಕ್ಕೆ ತಕ್ಕಂತೆ ಬದಲಾಗುತ್ತಲೇ ಹೋಗುತ್ತದೆ. ಇದು ವಾಸ್ತವ. ಉದಾಹರಣೆಗೆ ಯಾವಯಾವುದೋ ರೀತಿಯಲ್ಲಿ ಇಂದಿಗೂ ಕೂಡ ಅಸ್ಪೃಶ್ಯತೆ ಜೀವಂತವಿದ್ದರೂ ನಾಲ್ಕೈದು ದಶಕಗಳ ಹಿಂದಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಹೋರಾಟ ಇವತ್ತಿಗೆ ಅಷ್ಟು ಸೂಕ್ತವೆನಿಸದು. ವಿದ್ಯೆ, ಬಟ್ಟೆ, ಅನ್ನದ ಕೊರತೆಯ ಅಂದಿನ ಜೀತ ಜೀವನದಲ್ಲಿ ಇಂದು ದೇಶದ ಹಲವೆಡೆಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ವಿದ್ಯೆ, ಬಟ್ಟೆ, ಅನ್ನ, ವಸತಿ ಇಂದು ದೊಡ್ಡ ವಿಚಾರವೇನಲ್ಲ. ಹೋರಾಟದಲ್ಲಿ ಭಾಗಿಗಳಾಗ ಬೇಕಿರುವ ಇಂದಿನ ಯುವಪೀಳಿಗೆಯೂ ಕೂಡ ಅಸ್ಪೃಶ್ಯತೆ ಯನ್ನು ಭಯಂಕರ ಎಂದು ಭಾವಿಸುವ ವಾತಾವರಣದಲ್ಲಿ ಬೆಳೆದು ಬಂದಿಲ್ಲ. (ಹೊಸ ಪೀಳಿಗೆಯ ಈ ದೌರ್ಬಲ್ಯವೇ ಸ್ವಯಂ ಶೋಷಕರಾಗಿಯೂ ಕೂಡ ಅದನ್ನು ಜಾಣತನದಿಂದ ಮರೆಸಿ ಬಹುದೊಡ್ಡ ಸಂಖ್ಯೆಯಲ್ಲಿ ಶೂದ್ರಪಡೆಯನ್ನು ಕೋಮುವಾದದತ್ತ ಸೆಳೆಯುವಲ್ಲಿ ಸಂಘಿಗಳು ಯಶಸ್ವಿಯಾಗಿದ್ದದು) ಆದರೂ ಒಂದಲ್ಲ ಒಂದು ರೀತಿಯಲ್ಲಿ ಈ ಜಾತೀಯತೆ ಮತ್ತು ಅಸ್ಪೃಶ್ಯತೆಯನ್ನು ಸಮಾಜದಲ್ಲಿ ಗಟ್ಟಿಗೊಳಿಸಲು ಹೆಣಗುತ್ತಿರುವ (ಮರ್ಯಾದಾ ಹತ್ಯೆ, ವೇಮುಲಾರಂತವರ ಪರೋಕ್ಷ ಹತ್ಯೆ ಇತ್ಯಾದಿಗಳ ಮೂಲಕ) ಶಕ್ತಿಗಳ ವಿರುದ್ಧ ಹೋರಾಟ ನಡೆಯುತ್ತಿರಲೇಬೇಕು. ಇದು ಇನ್ನಿತರ ವಿಚಾರಗಳಿಗೂ ಕೂಡ ಅನ್ವಯ.

ದೇಶದ ಬಲಾಢ್ಯ ಉದ್ಯಮಿಗಳ ಕೈಗೊಂಬೆಗಳಾಗಿ ಹಾಗು ಜನರನ್ನು ಪ್ರಭಾವಿಸುವ ಮಾಧ್ಯಮಗಳ ಹಿಡಿತವನ್ನಿಟ್ಟು ಕೊಂಡು ಪ್ರಭುತ್ವವನ್ನು ನಡೆಸಿ ಮೆರೆಯುತ್ತಿರುವ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಸಂಘಟಿತ ಹೋರಾಟದ ಕೊರತೆ ಎಲ್ಲೆಡೆ ಎದ್ದು ಕಾಣುವಂತಹ ವಿಚಾರ. ಇತ್ತೀಚೆಗೆ ಪಿಣರಾಯಿ ವಿಜಯನ್ ಮಂಗಳೂರಿಗೆ ಬಂದಾಗ ಇದರ ಪಾರಂಪರಿಕ ಶತ್ರುವಾದ ಕೇಸರಿಪಡೆ ಇದನ್ನು ಬಲವಾಗಿ ವಿರೋಧಿಸಿದ್ದರ ಜೊತೆಜೊತೆಗೇ ಫೇಸ್‌ಬುಕ್ ವಾಟ್ಸ್ ಅಪ್ಪುಗಳಲ್ಲಿ ಕಾಂಗ್ರೆಸಿಗರೂ ಕಮ್ಯುನಿಸ್ಟರೊಂದಿಗೆ ಹಳೆಯ ಎಲ್ಲೆಲ್ಲಿಯದ್ದೋ ವಿಚಾರಗಳನ್ನೆಲ್ಲ ಕೆದಕಿ ಕಚ್ಚಾಡಿಕೊಂಡರು. ಸಂಘಿಗಳ ಭದ್ರಕೋಟೆಯಲ್ಲಿ ಅವರ ಬೆವರಿಳಿಸುವಂತೆ ಅತ್ಯಂತ ಯಶಸ್ವಿಯಾಗಿ ನಡೆದ 'ಉಡುಪಿ ಚಲೋ' ಚಳವಳಿಯನ್ನು ಮುಂದುವರೆಸುವ ಅಥವ ಜೀವಂತವಾಗಿಡುವ ಬದಲು ಅದರ ಯಶಸ್ಸಿನ ಹಕ್ಕುದಾರಿಕೆ ಅಥವಾ ಇನ್ನಿತರ ಕ್ಷುಲ್ಲಕ ವಿಚಾರಗಳ ಬಗ್ಗೆ ವಾದವಿವಾದಗಳು ನಡೆದವು. ಕನ್ನಯ್ಯ ಕುಮಾರ್ ಕುರಿತಾಗಿ ಸಂಪಾದಕೀಯದಲ್ಲಿ ವಿಶೇಷವಾಗಿ ಉಲ್ಲೇಖಿಸಿದ್ದಕ್ಕಾಗಿ ಕೆಲ ದಲಿತ ವಿಚಾರವಾದಿ ಗಳು ಗೌರಿಯವರನ್ನೇ ಒಮ್ಮೆ ತರಾಟೆಗೆ ತೆಗೆದುಕೊಂಡಿದ್ದರು. (ಆವತ್ತು ಬದನವಾಳು ಪ್ರಕರಣದಲ್ಲಿ ಪಿ.ಲಂಕೇಶರು ನಿಂತದ್ದು ದಲಿತರ ಪರವಾಗಿಯೇ ಹೊರತು ತಮ್ಮ ಜಾತಿಯ ಪರ ವಕಾಲತ್ತು ವಹಿಸಿರಲಿಲ್ಲ) ಸಮಾನ ಮನಸ್ಕರೊಳ... ಇರುವಂತಹ ಇಂತಹ ಒಡಕುಗಳು ಫ್ಯಾಸಿಸ್ಟ್ ಶಕ್ತಿ... ಬೆಳವಣಿಗೆಗೆ ಮತ್ತಷ್ಟು ಶಕ್ತಿಯನ್ನು ಒದಗಿಸಿರುವುದಂ... ಹೌದು. ಇಂದಿನ ಸಂದಿಗ್ಧ ಸನ್ನಿವೇಶದಲ್ಲಿ ಇಂತಹ ವಿಚಾರ... ಬಗ್ಗೆ ಸ್ವಯಂ ವಿಮರ್ಶೆಗಿಳಿದು ತಿದ್ದಿಕೊಳ್ಳದೇ ಹೋ... ಯಾವ ಹೋರಾಟಗಳೂ ಕೂಡ ತಕ್ಕ ಮಟ್ಟಿಗಿನ ಗುರಿಯ... ತಲುಪಲಾರವು.


ಸಿದ್ಧಾಂತವನ್ನು ಸಿದ್ಧಾಂತದಿಂದಲೇ ಎದುರಿಸುವ ಬದ... ದಾಬೋಲ್ಕರ್, ಗೋವಿಂದ ಪನ್ಸಾರೆ, ಕಲ್ಬುರ್ಗಿಯಂ... ಹಿರಿಯ ಜೀವಗಳನ್ನು ಹತ್ಯೆಗೈದು ಅವರುಗಳು ಸಾ... ಕೊಂಡರು. ಇದೇ 'ಸಾಧನೆ'ಯ ಉಮೇದಿನಲ್ಲಿ ಮ... ಮಂಗಳೂರಿನ ನರೇಂದ್ರ ನಾಯಕರು ಬಲಿಬೀಳುವ ಸಂದ... ಕೂದಲೆಳೆಯ ಅಂತರದಲ್ಲಿ ತಪ್ಪಿಹೋಯಿತು. ... ಬಳಿದವರು, ದ್ವೇಷ ಕಾರಿಕೊಂಡವರು, ಬಟ್ಟೆ ಎ... ಬೆತ್ತಲಾಗಿಸಿದವರೆಲ್ಲ ಅವರ ಮಹತ್ಸಾಧನೆಗಾಗಿ 'ಬಹುಮ... ಅಧಿಕಾರಗಳನ್ನೆಲ್ಲ' ಸಾಧನೆಗನುಗುಣವಾಗಿ ಗಿಟ್ಟಿಸಿಕೊಂಡ... ಹಾಗಾದರೆ ನಾವು ಇರುವುದಾದರೂ ಯಾವ ದೇಶದ...

ಕಾಲಚಕ್ರಗಳು ಒಂದೇ ರೀತಿಯಿರದು, ತಿರುಗುವ... ಅದರ ಗುಣ. ನೆರೆಯ ದ್ರಾವಿಡ ಹೋರಾಟಗಳ ನಾ... ಬಳಿಕ ಬ್ರಾಹ್ಮಣ ಮುಖ್ಯಮಂತ್ರಿ 'ಅಮ್ಮ'ನಿಂದ ದೀ... ಕಾಲ ಆಳಿಸಿಕೊಂಡಿತು. ಯುದ್ಧಾಕಾಂಕ್ಷಿಗಳ ಕರುನಾಡು... ನಾಡು ಜಪಾನ್ (ಚೀನಾದ ನಾನ್ ಕಿಂಗ್ ಹಾಗು ಭಾ... ಅಂಡಮಾನ್ ಆಕ್ರಮಣದ ಜಪಾನೀ ದೌರ್ಜನ್ಯಗಳು ... ಹಿಟ್ಲರ್ ಗಿರಿಗೂ ಕಡಿಮೆಯಿರಲಿಲ್ಲ) ಬಳಿಕ ... ಸಂಯಮದ ನಾಡೆನಿಸಿತು. ಅದೇ ರೀತಿ ಈ ಬು... ನಾಡೂ ಸಹ ಅಬುದ್ಧನ ಆಳ್ವಿಕೆಯನ್ನು ದಾಟ... ಮುಂದುವರೆಯಬೇಕಾದ ಪ್ರಮೇಯ ಈಗ ಎದುರಾದದ... ಈ ವಿಷಮ ಕಾಲದ ವ್ಯಾಪ್ತಿ ವಿಸ್ತರಣೆಗಳು ಮಾತ್ರ ಜನ... ಮನಸ್ಸುಗಳು ತಮ್ಮ ಸೈದ್ಧಾಂತಿಕ ಭಿನ್ನತೆಗಳನ್ನು ಮ... ಒಂದಾಗಿ ನಿಂತು ಎದುರಿಸುವ ಪ್ರಾಮಾಣಿಕ ಪ್ರಕ್ರಿಯೆ... ಮೇಲೆ ಹರಡಿ ನಿಂತಿದೆ ಎನ್ನುವುದರಲ್ಲಿ ಎರಡು ಮಾ...

- ಓದುಗ, ಬೆಂಗಳ...


ಚುನಾವಣಾ ಪ್ರಕ್ರಿಯೆ ಭ್ರಷ್ಟಗೊಂಡಾಗ...

ತಮ್ಮ ಪತ್ರಿಕೆಯು ಸೇರಿದಂತೆ ನಿಜ ಪ್ರಜಾಪ್ರಭುತ್ವ... ವಿಶ್ವಾಸವಿಟ್ಟ ಕೆಲ ಉತ್ತಮ ಪತ್ರಿಕೆಗಳು, ಉತ್ತರ ಪ್ರದೇ... ಬಿಜೆಪಿ ಗೆಲುವಿನ ಕಾರಣಗಳನ್ನು ಸರಿಯಾಗಿ ವಿಶ್ಲೇಷಿ... ಖ್ಯಾತ ಅಂಕಣಕಾರರಾದ ಟಿ.ಜೆ.ಎಸ್.ಜಾರ್ಜ್ 'ದಿ ... ಇಂಡಿಯನ್ ಎಕ್ಸ್‌ಪ್ರೆಸ್' ಅಂಕಣಗಳಲ್ಲಿ ಹೇಗಾದ... ಮಾಡಿ ಅಧಿಕಾರ ಗಿಟ್ಟಿಸಿಕೊಳ್ಳಬೇಕೆಂಬ ಬಿಜೆಪಿ ನೀ...



ಗಳನ್ನು ಚೆನ್ನಾಗಿ ಸಾದರಪಡಿಸಿದ್ದಾರೆ. ಎಲ್ಲಕ್ಕಿಂತ ಖೇ... ಸಂಗತಿಯೆಂದರೆ ನೋಟು ರದ್ದತಿಯನ್ನು ಚುನಾ... ಗಳಿಗಾಗಿಯೇ ರೂಪಿಸಿ, ಉತ್ತರ ಪ್ರದೇಶ, ಉತ್ತರಾಖಂ... ಹೆಚ್ಚಾಗಿರುವ ಬಡ ಜನರನ್ನು ಹಣಕ್ಕಾಗಿ ಕಂಗಾಲು... ಹಿಂದೂತ್ವವಾದ ಹೆಸರಿನಲ್ಲಿ ಮತ ಧ್ರುವೀಕರಿಸಿ, ವಿಷ... ಅರ್ಭಟ, ಖರ್ಚುಗಳಲ್ಲಿ ಜನ ಸಮೂಹ ವಿಚಾರ ಕ... ಕೊಳ್ಳುವಂತೆ ಮಾಡಿರುವುದು ಪ್ರಜಾಪ್ರಭುತ್ವಕ್ಕೆ ... ತರುವಂತಿದೆ. ಕೆಲ ಮಾಧ್ಯಮಗಳು ಕೂಡ (ಹಣದ ಪ್ರಭಾ... ಒಳಗಾಗಿ?) ಬಿಜೆಪಿಗೆ ಸಹಕರಿಸಿವೆ. ಚುನಾವಣಾ ಆಯ... ನೀತಿಸಂಹಿತೆ ಉಲ್ಲಂಘನೆಯಾಗುತ್ತಿದ್ದರೂ ಕಟ್ಟುನಿಟ್ಟಿನ... ಕೈಗೊಳ್ಳದಿದ್ದರೆ ಪ್ರಜಾಪ್ರಭುತ್ವ ಮಾದರಿಯ ಚುನಾ... ವಿಫಲವಾದಂತೆ.


ನೋಟು ರದ್ದತಿ ಆ ಮೂಲಕ ಚುನಾವಣಾ ಗೆ... ಯೋಜನೆಯನ್ನು ಸಂಘಕ್ಕೆ ಸೇರಿದ ಅಧಮ ಪುರಿ... ನೀಡಿದ್ದರು ಎಂಬ ವದಂತಿಗಳಿವೆ. ಇದಕ್ಕೆ ಇಂಬು ಕೊಡು... ಸಂಘಕ್ಕೆ ಹತ್ತಿರದ ಕಾವಿಧಾರಿಗೆ ಅಧಿಕಾರ ನೀಡಲಾ...





ಕಿರುತೆರೆಯೇ ನನ್ನ ತವರು ಮನೆ: ಅಕುಲ್ ಬಾಲಾಜಿ

ಸಿನಿಮಾ ಮತ್ತು ಕಿರುತೆರೆ ಈ ಎರಡು ರಂಗದಲ್ಲೂ ಏಕಕಾಲಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡವರು ಸ್ಟಾರ್ ನಿರೂಪಕ ಅಕುಲ್ ಬಾಲಾಜಿ. ಅನೇಕ ರಿಯಾಲಿಟಿ ಶೋಗಳಿಗೆ ನಿರೂಪಕರಾಗಿ ಕೆಲಸ ಮಾಡುವುದರ ಜತೆಗೆ ಹಲವು ಚಿತ್ರಗಳಲ್ಲೂ ನಟಿಸಲು ಗ್ರೀನ್‌ಸಿಗ್ನಲ್ ಕೊಟ್ಟಿದ್ದಾರೆ. ಈ ಕುರಿತು ಅವರು ಮಾತನಾಡಿದ್ದಾರೆ.



ಕನ್ನಡದ ಸ್ಟಾರ್ ನಿರೂಪಕರಲ್ಲಿ ಮೊದಲನೇ ಸ್ಥಾನದಲ್ಲಿ ನಿಲ್ಲುತ್ತಾರೆ ಅಕುಲ್ ಬಾಲಾಜಿ. ಬಹುತೇಕ ಚಾನೆಲ್‌ಗಳು ಬಿಡ್ ಮಾಡಿ ಅಕುಲ್‌ರನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಅಷ್ಟರಮಟ್ಟಿಗೆ ಇವರು ಫೇಮಸ್. ಕಿರುತೆರೆಯಲ್ಲಿ ಮಾತ್ರವಲ್ಲ, ಬೆಳ್ಳಿತೆರೆಯಲ್ಲೂ ಅಕುಲ್ ಮಿಂಚಿದ್ದಾರೆ. ರಿಯಾಲಿಟಿ ಶೋಗಳಲ್ಲಿ ಕೆಲಸ ಮಾಡುತ್ತಲೇ ಸಿನಿಮಾ ರಂಗದಲ್ಲೂ ಪಾತ್ರ ನಿರ್ವಹಿಸುತ್ತಾರೆ. ಹೀಗಾಗಿ ಅಕುಲ್ ವರ್ಷದ ಹನ್ನೆರಡೂ ತಿಂಗಳೂ ಬಿಜಿ. ಕನ್ನಡದ ಬಹುತೇಕ ಚಾನಲ್‌ಗಳಲ್ಲಿ ಕೆಲಸ ಮಾಡಿರುವ ಇವರು, ಸದ್ಯ ಬಿಗ್‌ಬಾಸ್ ಖ್ಯಾತಿಯ ನಿರ್ದೇಶಕ ಪ್ರಥಮ್ ಅವರ 'ದೇವ್ರು ಅವ್ನೆ ಬಿಡುಗುರು' ಸಿನಿಮಾದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಈ ಎಲ್ಲದರ ಹಿನ್ನೆಲೆಯಲ್ಲಿ ಕೇಳಲಾದ ಪ್ರಶ್ನೆಗೆ ಅಕುಲ್ ಉತ್ತರಿಸಿದ್ದು ಇಲ್ಲಿದೆ.


** ಸಿನಿಮಾಗಿಂತಲೂ ಕಿರುತೆರೆಯೇ ವಾಸಿ ಅಂತ ಯಾವತ್ತಾದ್ರೂ ಅನಿಸಿದೆಯಾ?*

ಎಲ್ಲರಿಗೂ ಗೊತ್ತಿರುವಂತೆ ನಾನು ಸಿನಿಮಾಗಳಲ್ಲಿ ನಟಿಸಿದ್ದು ಕಡಿಮೆ. ಕಿರುತೆರೆಯೇ ನನಗೆ ತಾಯಿಮನೆ. ಖುಷಿಗಾಗಿ ನಾನು ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಇವತ್ತು ನಾನೇನಾದರೂ ದುಡಿದಿದ್ದೇನೆ, ಹೆಸರು ಮಾಡಿದ್ದೇನೆ ಅಂದರೆ, ಅದು ಕಿರುತೆರೆಯಿಂದಾನೆ. ನನಗೆ ಶುದ್ಧವಾಗಿ ಕನ್ನಡ ಮಾತಾಡುವುದಕ್ಕೆ ಬರುತ್ತಿರಲಿಲ್ಲ. ಈಗ ಅದರ ಸಮಸ್ಯೆ ಇಲ್ಲ. ಈ ಎಲ್ಲವನ್ನೂ ನನಗೆ ಕಲಿಸಿದ್ದು ಕಿರುತೆರೆ ಎನ್ನಬಹುದು. ಇದೇ ರಂಗದಲ್ಲಿ ಸಖತ್ ಬಿಜಿ ಆಗಿದ್ದೇನೆ.

** ಕಲಾವಿದರು ಅಂದರೆ ಯಾರು?*

ಇಂತಹ ಪ್ರಶ್ನೆಗೆ ನನ್ನಂತ ಚಿಕ್ಕವನಿಂದ ಉತ್ತರ ಬಯಸುತ್ತಿದ್ದೀರಿ. ನನಗೆ ಅನಿಸಿದ್ದನ್ನು ಮಾತ್ರ ಹೇಳುತ್ತಿದ್ದೇನೆ. ಕಲಾವಿದ ಎಲ್ಲರಿಗೂ ಮಾದರಿ ಆಗುವಂಥವನು ಆಗಿರಬೇಕು. ಅದರಲ್ಲೂ ಮುಂದಿನ ಪೀಳಿಗೆಯ ಬಗ್ಗೆ ಎಚ್ಚರಿಕೆ ಇಟ್ಟುಕೊಂಡು ಕೆಲಸ ಮಾಡಬೇಕು. ಪರಸ್ಪರ ಗೌರವಿಸಬೇಕು. ಯಾವುದೇ ಸಂದರ್ಭದಲ್ಲೂ ವೃತ್ತಿಗೆ ಮೋಸ ಮಾಡಬಾರದು. ಅಲ್ಲದೇ ಸದಾ ಹೊಸತನ್ನೇ ಯೋಚಿಸುತ್ತಿರಬೇಕು.

** ನಿಮ್ಮ ಟ್ಯಾಲೆಂಟ್ ತೋರಿಸೋಕೆ, ಇಂಥದ್ದೇ ಪಾತ್ರ ಬೇಕು ಅಂತೇನಾದ್ರೂ ಯೋಚನೆ ಇದೆಯಾ?*



ಕನಸಿನ ಪಾತ್ರದ ಬಗ್ಗೆ ತುಂಬಾ ಸಲ ಅನಿಸಿದ್ದಿದೆ. ಅದು ಪಕ್ಕಾ ಲವ್‌ಸ್ಟೋರಿ ಆಗಿರಬೇಕು. ಹೀರೋ ಕ್ಲಾಸಿಕಲ್ ಡಾನ್ಸರ್ ಆಗಿದ್ದು, ತನ್ನ ಪ್ರೇಮವನ್ನು ಆ ಮೂಲಕ ಹೇಳಬೇಕು ಅಂತ. ಅದು ಯಾವಾಗ ಸಿಗುತ್ತದೆಯೋ ನೋಡಬೇಕು.

** ಪ್ರಥಮ್ ಜತೆಗಿನ ಸಿನಿಮಾ ಸದ್ಯ ಯಾವ ಹಂತದಲ್ಲಿದೆ?*

ಅವನು ಬಿಗ್‌ಬಾಸ್‌ಗೆ ಹೋಗುವುದಕ್ಕಿಂತ ಮುಂಚೆಯೇ ಸಾಂಗ್ಸ್ ಸೇರಿದಂತೆ ಹಲವು ಕೆಲಸಗಳನ್ನು ಮುಗಿಸಿದ್ದು, ನನಗೆ ಗೊತ್ತಿರುವ ಪ್ರಕಾರ ಶೇಕಡಾ 70ರಷ್ಟು ಭಾಗದ ಶೂಟಿಂಗ್ ಮುಗಿಸಿದ್ದಾನೆ. ಸಾಂಗ್ಸ್ ಬ್ಯಾಲೆನ್ಸ್ ಇದೆ.

** ಪ್ರಥಮ್ ಬಗ್ಗೆ ಏನ್ ಹೇಳ್ತೀರಿ?*

ಅವನು ಟ್ಯಾಲೆಂಟ್ ಇರುವಂತಹ ಹುಡುಗ. ತುಂಬಾನೇ ಓದಿಕೊಂಡಿದ್ದಾನೆ. ಯಾವುದೇ ಕೆಲಸವಿರಲಿ ಅದನ್ನು ಮುಗಿಸೋತನಕ ನಿದ್ದೆ ಮಾಡಲ್ಲ. ಅವನಲ್ಲಿರುವ ಪ್ರತಿಭೆಗೆ ಸೂಕ್ತ ಬೆಂಬಲ ಸಿಗಬೇಕು.

** ನಿಮ್ಮನ್ನು ಕಿರುತೆರೆ ಸ್ಟಾರ್ ನಿರೂಪಕ ಎಂದು ಕರೆಯುತ್ತಾರೆ? ಈ ಬಗ್ಗೆ ನಿಮ್ಮ ಕಾಮೆಂಟ್?*

ಅಯ್ಯೋ.. ನಾನಂತೂ ಯಾವತ್ತೂ ಹಾಗೆ ಅಂದುಕೊಳ್ಳಲ್ಲ. ಪ್ರೀತಿಯಿಂದ ಕರೆಯುವವರನ್ನು ಬೇಡ ಅಂತಾನೂ ಹೇಳೋಕೆ ಆಗಲ್ಲ. ಪ್ರೀತಿ ಅನ್ನುವುದು ಯಾವ್ಯಾವುದೋ ರೂಪದಲ್ಲಿ ಸಿಗುತ್ತದೆ. ನನಗೆ ಈ ರೀತಿ ಸಿಕ್ಕಿದೆ ಎಂದು ಭಾವಿಸಿಕೊಳ್ಳುತ್ತೇನೆ. ನನಗೆ ಸಿಕ್ಕಿರುವ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳುತ್ತಿದ್ದೇನೆ. ಆದಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಇದೇ ನನಗೆ ಹೆಸರು ತಂದುಕೊಟ್ಟಿದೆ.

** 'ಸೂಪರ್ ಜೋಡಿ' ಶೋಗಾಗಿ ನೀವು ಹಾಡು ಕೂಡ ಹಾಡಿದ್ದೀರಂತೆ?*

ಹೌದು, ಮೊಟ್ಟ ಮೊದಲ ಬಾರಿಗೆ ನಾನು ಟೈಟಲ್ ಟ್ರ್ಯಾಕ್‌ಗೆ ಹಾಡಿದ್ದೇನೆ. ನಾನು ವೃತ್ತಿಪರ ಗಾಯಕನಲ್ಲ ಅನ್ನುವುದು ನನಗೆ ಗೊತ್ತಿದೆ. ತಿಳಿದಂತೆ ಹಾಡಿದ್ದೇನೆ. ಅದನ್ನು ಜನರೂ ಒಪ್ಪಿಕೊಂಡಿದ್ದಾರೆ. ■

ಭಾರತೀಯ ಪರಂಪರೆಯಲ್ಲಿ ಸನ್ಯಾಸಿಯ ಸ್ಥಾನ ದೊಡ್ಡದು. ಸನ್ಯಾಸಿ ಎನ್ನುತ್ತಲೇ ಅವಾಚ್ಯ ಪದ ಬಳಸುವುದು, ಅಧಿಕಾರಕ್ಕಾಗಿ ಹಪಹಪಿಸುವುದು ಸರಿಯೇ ಎಂಬುದನ್ನು ಸಾಮಾನ್ಯರು ಚಿಂತಿಸಬೇಕಿದೆ.

ಚೋದ್ಯವೆಂದರೆ ಇಂತಹ ಕೀಳರಿಯದ ಹೀನ ರಾಜಕೀಯ, ಹಣಬಲ, ಸಂಹಿತೆಗಳ ದುರ್ಬಳಕೆಗಳ ಮೂಲಕ ಪ್ರಜಾಪ್ರಭುತ್ವಕ್ಕೆ, ಸಂವಿಧಾನದ ಮೂಲ ಆಶಯಗಳಿಗೆ ಹಾನಿ ಆಗುತ್ತಿದ್ದಾಗ್ಯೂ ಕಾಂಗ್ರೆಸ್-ತೃತೀಯ ರಂಗದ ನೇತಾರರು ಇಂತಹ ಹೊಲಸಿನ ಚುನಾವಣಾ ವ್ಯವಸ್ಥೆಯನ್ನು ಬದಲಿಸಲು ಸರಿಯಾಗಿ ಹೋರಾಡುತ್ತಿಲ್ಲ. ಕಡಿಮೆ ಚುನಾವಣಾ ಖರ್ಚು, ಅಭ್ಯರ್ಥಿಗಳ ಸಮೂಹ ಸನ್ನಿಯನ್ನು ಕಲ್ಪಿಸುವ ಕ್ರಮಗಳಿಗಾಗಿ, ಮಾಧ್ಯಮಗಳು ನಿಯಮಬಾಹಿರ ರಾಗಿ-ಹಣದ ಪ್ರಭಾವಕ್ಕೆ ತಡೆಯುವ ಕ್ರಮಗಳಿಗಾಗಿ ಸಾರ್ವಜನಿಕರಲ್ಲಿ ಅರಿವು-ತಿಳಿವಳಿಕೆ ಮೂಡಿಸುತ್ತಿಲ್ಲ. ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಭ್ರಷ್ಟಾಚಾರದ ವಿರುದ್ಧ ಹಾಗು ಲೋಕಪಾಲ್ ನೇಮಕಕ್ಕಾಗಿ ಹೋರಾಡುತ್ತಿದ್ದ ವ್ಯಕ್ತಿಗಳು, ಶಕ್ತಿಗಳು ಸರಿಯಾಗಿ ಪ್ರತಿಭಟಿಸುತ್ತಿಲ್ಲ. ಪಾರ್ಲಿಮೆಂಟ್‌ನಲ್ಲಿ ಮತ್ತು ಇತರ ವೇದಿಕೆಗಳಲ್ಲಿ ಚುನಾವಣಾ ಆಯೋಗದ ಅಧಿಕಾರಿಗಳು ಎಡಪದಂತಾಗಲು ಬೇಕಾದ ನಿಯಮಗಳ ಚರ್ಚೆ ಹಾಗು ಅದು ಕಾನೂನಿನ ರೂಪ ಪಡೆಯುವ ಅಗತ್ಯತೆ ಇದೆ. ಶೀಘ್ರವಾಗಿ ಈ ಕುರಿತು ಗಾಂಧೀಜಿ, ಅಂಬೇಡ್ಕರ್, ಲೋಹಿಯಾ ತತ್ವಗಳಲ್ಲಿ ವಿಶ್ವಾಸವಿಟ್ಟವರೆಲ್ಲ ಸೇರಿ ಪ್ರಯತ್ನಿಸ ಬೇಕಿದೆ. ಸರಿಯಾದ ಕಾನೂನು-ನಿಯಮಗಳ ಅಡಿಯಲ್ಲಿ ಚುನಾವಣೆಗಳು ನಡೆಯುದಿದ್ದರೆ ಪ್ರಜಾಪ್ರಭುತ್ವಕ್ಕೆ ಮಾನ್ಯತೆ ಇಲ್ಲದಾಗ ಸಂವಿಧಾನದಲ್ಲಿ ನಂಬಿಕೆ ಇಟ್ಟವರು ಕೂಡ ಚುನಾವಣಾ ಪ್ರಕ್ರಿಯೆಯನ್ನೇ ಬಹಿಷ್ಕರಿಸಬೇಕಾಗಬಹುದೇನೋ?

– ಲಕ್ಷ್ಮಣ ನಾಯ್ಕ, ಬೆಳಗಾವಿ

ಮೋದಿಯನ್ನು ಹಾಡಿ ಹೊಗಳಿದ್ದ ಎಸ್‌ಪಿಬಿ




ಉತ್ತರ ಪ್ರದೇಶದ ಯೋಗಿ ಆದಿತ್ಯನಾಥರ ಮೂಲ ಹೆಸರು ಅಜಯ್ ಸಿಂಗ್ ಬಿಷ್ಟ್. ಇವರು ಠಾಕೂರ್ ಜಾತಿಯವರು. ಮೂಲತಃ ಉತ್ತರಾಖಂಡ್ ರಾಜ್ಯದ ಪೌರಿ ಜಿಲ್ಲೆಯವರು. ನಂತರ ಅವರು ನಾಥ ಪಂಥ ಸೇರಿ, ಉತ್ತರಪ್ರದೇಶದ ಪೂರ್ವ ಜಿಲ್ಲೆ ಗೋರಖ್‌ಪುರದಲ್ಲಿ ಅಲ್ಲಿಯ ಗೋರಖನಾಥ್ ಮಂದಿರದ ಮಹಂತನಾದನು. ಜನರು ತಿಳಿದಿರುವಂತೆ ನಿಜವಾಗಿ ಇವನು 'ಜೋಗಿ' ಜಾತಿಯವನಲ್ಲ, ರಾಮಮಂದಿರದ ವಿವಾದವನ್ನು ಈತನು ತನ್ನ ತೋಳು ಬಲದಿಂದ ಬಗೆಹರಿಸಿ 2019ರ ಲೋಕಸಭೆಯ ಚುನಾವಣೆಯ ಒಳಗೆ ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟಿಸಿಯೇತೀರುತ್ತಾನೆ ಎಂದು ಆರೆಸ್ಸೆಸ್ ದೃಢವಾಗಿ ನಂಬಿದೆ. ಹಾಗೆ ನೋಡಿದರೆ ಈ ರಾಮಮಂದಿರ ಒಮ್ಮೆ ಕಟ್ಟಿ ಬಿಟ್ಟರೆ ಒಳ್ಳೆಯದು. ಕಾರಣ ಆಗ ಜನರಿಗೆ ಅರ್ಥವಾಗುತ್ತದೆ-ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟುವುದರಿಂದ ಜನರ ಬಡತನ ನಿವಾರಣೆಯಾಗುವುದಿಲ್ಲ. ನೆರೆಯ ವೈರಿ ದೇಶಗಳು ಒಮ್ಮೆಲೇ ವೈರತ್ವ ಬಿಡುವುದಿಲ್ಲ. ಗೋಮಾಂಸ ರಫ್ತು ನಿಲ್ಲುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಹಿಂದೂ ಸಮಾಜದಲ್ಲಿಯ ಜಾತಿ ತಾರತಮ್ಯ, ಜಾತಿಯ ಶೋಷಣೆ, ಅಸ್ಪೃಶ್ಯತೆ ಹಾಗೂ ಮಹಿಳೆಯರ ಮೇಲಿನ ಅತ್ಯಾಚಾರ ನಿಲ್ಲುವುದಿಲ್ಲ. ಅವೆಲ್ಲಾ ಈಗಿನಂತೆ ಮುಂದುವರಿಯುತ್ತವೆ. ಹಿಂದೂ ಧರ್ಮ ಇರುವವರೆಗೆ ಜಾತಿ ತಾರತಮ್ಯ ನಿವಾರಣೆಯಾಗಲು ಸಾಧ್ಯವೇ ಇಲ್ಲ ಎಂದು ಡಾ.ಅಂಬೇಡ್ಕರರು ಹೇಳಿದ್ದು ಅತಿಸತ್ಯ ಎಂದು ಭಾರತೀಯರಿಗೆ ಆಗಲಾದರೂ ಮನವರಿಕೆಯಾಗಿ, ದೇವರು-ಧರ್ಮ-ದೇವಸ್ಥಾನ- ಜಾತಿಯ ಹೆಸರಲ್ಲಿ ಜನರನ್ನು ಮಂಗ ಮಾಡುವ ರಾಜಕೀಯ ನೇತಾರರನ್ನು ಭವಿಷ್ಯದಲ್ಲಿ ದೂರವಿಡಲು ಶುರುಮಾಡುತ್ತಾರೆ. ಅದಕ್ಕಾಗಿ ಆದಷ್ಟು ಬೇಗ ರಾಮಮಂದಿರ ಕಟ್ಟಿಬಿಡಲಿ ಮತ್ತು ಜನರನ್ನು ಭಾವನಾತ್ಮಕವಾಗಿ ಮೂರ್ಖರನ್ನಾಗಿಸುವ ಸಂಘಿಗಳ ಕಾರ್ಯ ಒಮ್ಮೆ ಶಾಶ್ವತವಾಗಿ ಮುಗಿದುಬಿಡಲಿ.

ಸುಪ್ರಸಿದ್ಧ ಸಂಗೀತ ನಿರ್ದೇಶಕ ಇಳಿಯರಾಜರವರು ಅಮೆರಿಕದಲ್ಲಿ ಈಗ ಕಾರ್ಯಕ್ರಮ ಕೊಡುತ್ತಿರುವ ಹಾಡುಗಾರ ಎಸ್.ಪಿ.ಬಾಲಸುಬ್ರಹ್ಮಣ್ಯರಿಗೆ ಕಾನೂನು ನೋಟಿಸ್ ಜಾರಿ ಮಾಡಿ ಎಸ್‌ಪಿಬಿಯವರು ತನ್ನ ರಚನೆಗಳನ್ನು ಹಾಡಬಾರದು ಎಂದು ನಿರ್ಬಂಧಿಸಿದ್ದಾರೆ ಹಾಗೂ ಇಳಿಯರಾಜರ ಈ ನೋಟಿಸಿಗೆ ಪ್ರತಿಕ್ರಿಯಿಸಿದ ಎಸ್‌ಪಿಬಿಯವರು ತಾನು ಇನ್ನು ಮುಂದೆ ವಿದೇಶದಲ್ಲಿ ಇಳಿಯರಾಜರ ರಚನೆಗಳನ್ನು ಹಾಡುವುದಿಲ್ಲ ಎಂದು ಒಪ್ಪಿದ್ದಾರೆ ಎಂದು ವರದಿಯಾಗಿದೆ. ಇದೇ ಎಸ್‌ಪಿಬಿ ಕಳೆದ ವರ್ಷ ಬಿಜೆಪಿ ಪಕ್ಷದಿಂದ ಐದು ಕೋಟಿ ರೂಪಾಯಿ ಸಂಭಾವನೆ ಪಡೆದು ಮೋದಿಯನ್ನು ಹಾಡಿ ಹೊಗಳಿ ದೈವತ್ವಕ್ಕೆ ಏರಿಸಿದ್ದ ಒಂದು ವಿಡಿಯೋ ತಯಾರಿಸಿ ಮೋದಿ ಯನ್ನು 'ಭಾರತ ಭಾಗ್ಯವಿಧಾತ' ಎಂದು ಹೊಗಳಿದ್ದರು. ಹಿಂದಿನ 70 ವರ್ಷದಿಂದ ಭಾರತವನ್ನು ಆಳಿದವರು ಏನೂ ಮಾಡಲಿಲ್ಲ ಆದರೆ ಮೋದಿ ಅದೇನೋ ಪವಾಡ ಮಾಡುತ್ತಿದ್ದಾನೆ ಎಂದು ಎಸ್‌ಪಿಬಿ ಹಾಡಿ ಹೊಗಳಿದ್ದ ಈ ವಿಡಿಯೋ ಮೋದಿಯ ಭಕ್ತ-ಕುರಿಗಳು ಸಾಮಾಜಿಕ ಜಾಲತಾಣದಲ್ಲಿ ಬಹಳ ಹರಿದಾಡಿಸಿದ್ದರು. (ಎಸ್‌ಪಿಬಿ ಹೇಳಿರುವ 70 ವರ್ಷದಲ್ಲಿ ಬ್ರಿಟಿಷರ ಆಡಳಿತದ 2 ವರ್ಷ ಹಾಗೂ ವಾಜಪೇಯಿ ಆಡಳಿತದ ಐದು ವರ್ಷ ಸಹ ಸೇರಿದೆ!). ಬಿಜೆಪಿಯಿಂದ ಕೋಟಿಗಟ್ಟಲೆ ಸಂಭಾವನೆ ಪಡೆದ ಮೇಲೂ ಹಾಡುಗಾರ ಎಸ್‌ಬಿಪಿಯವರ ಹಣದ ಮೋಹ ಹೋಗಿಲ್ಲ. ಅವರು ತನ್ನ ಸಂಭಾವನೆಯಲ್ಲಿ ಇಳಿಯರಾಜರಿಗೆ ಕೊಡಬೇಕಾಗಿದ್ದ ನ್ಯಾಯವಾದ ಪಾಲು ಕೊಟ್ಟಿದ್ದರೆ ಈಗಿನ ಕಾನೂನು ಸಮಸ್ಯೆ ಉದ್ಭವಿಸುತ್ತಲೇ ಇರಲಿಲ್ಲ. ಇನ್ನು ಎಸ್‌ಪಿಬಿಯವರಿಂದ ಮೋದಿಯನ್ನು ಹಾಡಿ-ಹೊಗಳಿಸಿದ್ದ ಭಕ್ತ ಕುರಿಗಳು ಮೋದಿಗೆ ಚಾಡಿ ಹೇಳಿ ಇಳೆಯರಾಜಾ ಮೇಲೆ ಆದಾಯಕರ ಇಲಾಖೆಯಿಂದ ದಾಳಿ ಮಾಡಿಸುತ್ತಾರೋ ಏನೋ!

– ಜಿ.ರವಿಕಿರಣ, ಮೈಸೂರು

ಕಾಂಗ್ರೆಸ್‌ಗಿಂತ ಬಿಜೆಪಿ ಭಿನ್ನವಲ್ಲ

ಕಾಂಗ್ರೆಸ್ ಗೆದ್ದ ರಾಜ್ಯದಲ್ಲಿ ಮುಖ್ಯಮಂತ್ರಿಯ ಹೆಸರು ದೆಹಲಿಯಿಂದ ಮುಚ್ಚಿದ ಲಕೋಟೆಯಲ್ಲಿ ಬರುತ್ತದೆ ಎಂದು ಕಾಂಗ್ರೆಸ್‌ನವರನ್ನು ಗೇಲಿ ಮಾಡುತ್ತಿದ್ದ ಬಿಜೆಪಿಯವರು ಈಗ ತಾವೇ ಮಾಡಿದ್ದೇನು? ಬಿಜೆಪಿ ಮುಖ್ಯಮಂತ್ರಿಯ ಹೆಸರು ಮಾತ್ರವಲ್ಲ ಉಪಮುಖ್ಯಮಂತ್ರಿ, ಹಾಗೂ ಇತರ ಸಚಿವರ ಹೆಸರುಗಳೂ ನಾಗಪುರದ ಆರೆಸ್ಸೆಸ್ ಹೆಡ್ ಆಫೀಸಿನಿಂದಲೇ ಬರುತ್ತದೆ ಎನ್ನುವುದು ನಿಜವಾಯಿತು ತಾನೇ. ಕಾಂಗ್ರೆಸ್‌ನಲ್ಲಿ ಕಡೆಪಕ್ಷ ಅದೇ ಪಕ್ಷದ ಹೈಕಮಾಂಡ್ ಮುಖ್ಯಮಂತ್ರಿಯನ್ನು ಆರಿಸುತ್ತದೆ. ಆದರೆ ಬಿಜೆಪಿಯ ವಿಷಯದಲ್ಲಿ ಪಕ್ಷದ ಹೊರಗಿನವರಾದ ಆರೆಸ್ಸೆಸ್‌ನವರು ದೂರದ ನಾಗಪುರದಲ್ಲಿ ಕುಳಿತು ಮುಖ್ಯಮಂತ್ರಿ ಮತ್ತು ಇತರ ಸಚಿವರನ್ನೂ ಆರಿಸುತ್ತದೆ! ಉತ್ತರ ಪ್ರದೇಶದಂತಹ ಅತಿದೊಡ್ಡ ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರು ಎಂಬ ವಾಸನೆ ಸಹ ಆ ಪಕ್ಷದ ಎಲ್ಲಾ 312 ಶಾಸಕರಿಗೆ ಇರಲಿಲ್ಲ ಎಂದರೆ ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವ



ಎಲ್ಲಿದೆ? ಜನಪ್ರತಿನಿಧಿಗಳಾದವರಿಗೆ ತಮ್ಮ ನಾಯಕನನ್ನು ಆಯ್ಕೆ ಮಾಡಲಾರದಂತಹ ದುಸ್ಥಿತಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಂದಿರುವುದು ನಿಜಕ್ಕೂ ಶೋಚನೀಯ. ಕಾಂಗ್ರೆಸ್ ಮಾಡಿದ್ದ ಎಲ್ಲಾ ತಪ್ಪುಗಳನ್ನೂ ಬಿಜೆಪಿ ಸಹ ಮಾಡಿ ತಾನು ಕಾಂಗ್ರೆಸ್‌ಗಿಂತ ಭಿನ್ನವೇನೂ ಅಲ್ಲ ಎಂದು ಮತ್ತೆ ಮತ್ತೆ ಸಾಬೀತು ಮಾಡುತ್ತಿದೆ.

ಉತ್ತರ ಪ್ರದೇಶದಲ್ಲಿ ಈಗಿನ ಮುಖ್ಯಮಂತ್ರಿ ಯೋಗಿಯ ಮೊಟ್ಟಮೊದಲ ಕಾರ್ಯ ತನ್ನ ರಾಜ್ಯದಲ್ಲಿ ಮುಂದಿನ ನೂರು ದಿನಗಳಲ್ಲಿ ಕನಿಷ್ಠ ನೂರು ಪಟ್ಟಣಗಳ ಹಾಗೂ ಹತ್ತು ಸಾವಿರ ಹಳ್ಳಿ, ರಸ್ತೆ ಸ್ಥಳಗಳ ಪರ್ಶಿಯನ್ ಭಾಷೆಯ ಹೆಸರು ಅಥವಾ ಮುಸ್ಲಿಂ ಹೆಸರುಗಳನ್ನು ಬದಲಾಯಿಸಿ ಸಂಸ್ಕೃತ ಹೆಸರುಗಳನ್ನು ಇಡುವುದು!! ಇದುವೇ ಅಭಿವೃದ್ಧಿ ಅದುವೇ ಸಬ್ಕಾ ಸಾಥ್ ದಂಗಾ ಪಾರ್ಟ್, ಸಬ್ಕಾ ವಿನಾಶ್!!!

– ಆರ್.ಬಿ.ಶೇಣವ, ಮಂಗಳೂರು

ವಿ.ಸೂ.: ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ಮೇಲ್ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು **9980331427** ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ **SMS** ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 12-04-2017 RNI No. KARKAN2005



ವಿಚಿತ್ರಕತೆ ಹೇಳ್ತಾರಂತೆ ಕರ್ವದ ಅನು

'ಕರ್ವ' ಚಿತ್ರದ ನಾಯಕಿ ಅನು ಈಗ ಏನು ಮಾಡುತ್ತಿದ್ದಾರೆಂಬ ಪ್ರಶ್ನೆ ಅವರ ಅಭಿಮಾನಿಗಳನ್ನು ಕಾಡುತ್ತಿತ್ತು. 'ಕರ್ವ' ಸಿನಿಮಾದ ನಂತರ ಅವರು ಬಿಜಿ ಆಗುತ್ತಾರೆಂದು ಆ ಸಿನಿಮಾದ ನಿರ್ದೇಶಕರು ಕೂಡ ಹೇಳಿದ್ದರು. ಆದರೆ ಅನು ಮಾತ್ರ ಎಲ್ಲಿಯೂ ಕಾಣಿಸಿಕೊಳ್ಳಲಿಲ್ಲ, ಸಿನಿಮಾ ರಂಗದಿಂದಲೇ ದೂರ ಆದರಾ ಅನ್ನುವ ಪ್ರಶ್ನೆ ಏಳುವ ಮುನ್ನವೇ ಅನು ಸಿನಿಮಾವೊಂದರ ಶೂಟಿಂಗ್ ಮುಗಿಸಿಕೊಂಡು ಬಂದಿದ್ದಾರೆ. 'ಕಥಾ ವಿಚಿತ್ರ' ಹೆಸರಿನಲ್ಲಿ ಮೂಡಿ ಬಂದಿರುವ ಈ ಚಿತ್ರಕ್ಕೆ ಅನು ನಾಯಕಿ.

ಇದು ಅನೂಪ್ ಅಥೋಣಿ ನಿರ್ದೇಶನದಲ್ಲಿ ಮೂಡಿಬಂದಿರುವ ಸಿನಿಮಾ. 'ಕಥಾ ವಿಚಿತ್ರ' ಚಿತ್ರಕ್ಕಾಗಿ ಅನೇಕ ಪ್ರಯೋಗಗಳನ್ನು ಮಾಡಿದ್ದಾರಂತೆ ನಿರ್ದೇಶಕರು. ಇದೇ ಮೊದಲ ಬಾರಿಗೆ ಆಡಿಯೋ ಟೀಸರ್‌ವೊಂದನ್ನು ತಯಾರು ಮಾಡಿದ್ದು, ಚಿತ್ರದ ಹಲವು ಕೌತುಕಗಳನ್ನು ಟೀಸರ್ ಬಿಚ್ಚಿಡಲಿದೆ.

ಚಿತ್ರದಲ್ಲಿ ಸಸ್ಪೆನ್ಸ್ ಮತ್ತು ಥ್ರಿಲ್ಲರ್ ಕಥೆ ಇದೆ. ಸಿನಿಮಾ ಮುಗಿಯುವವರೆಗೂ ಚಿತ್ರಕತೆ ಕುತೂಹಲವನ್ನು ಕಾಪಾಡಿಕೊಂಡು ಹೋಗುತ್ತದೆ. ಇದು ಯೂತ್ಸ್‌ಗೆ ಹೇಳಿ ಮಾಡಿಸಿದ ಚಿತ್ರ ಅಂತಾರೆ ಅನು.

ಪುನೀತ್ ಚಿತ್ರಕ್ಕೆ ಟೈಟಲ್ ಚಿಂತೆ




ಮೊದಲ ಬಾರಿಗೆ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಸಿನಿಮಾ ನಿರ್ಮಾಣಕ್ಕೆ ಮುಂದಾಗಿದ್ದರು. ಹೊಂಬಾಳೆ ಕ್ರಿಯೇಷನ್ಸ್ ಜೊತೆಗೂಡಿ 'ಅರ್ಧಸತ್ಯ' ಹೆಸರಿನ ಚಿತ್ರ ಮಾಡಲು ಅವರು ತಯಾರಿಯನ್ನೂ ಮಾಡಿಕೊಳ್ಳುತ್ತಿದ್ದರು. ಇನ್ನೇನು ಸಿನಿಮಾ ಸೆಟ್ಟೇರಬೇಕು ಅನ್ನುವ ಹೊತ್ತಿಗೆ ಟೈಟಲ್ ವಿವಾದ ಶುರುವಾಯಿತು. ಈಗಾಗಲೇ ಕನ್ನಡದಲ್ಲಿ 'ಅರ್ಧಸತ್ಯ' ಹೆಸರಿನ ಸಿನಿಮಾ ಶೂಟಿಂಗ್ ಆಗಿ ಅರ್ಧಕ್ಕೆ ನಿಂತಿರುವುದರಿಂದ ಆ ಸಿನಿಮಾದ ನಿರ್ಮಾಪಕರು 'ಅರ್ಧಸತ್ಯ' ಹೆಸರಿನಲ್ಲಿ ಸಿನಿಮಾ ಮಾಡದಂತೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಮೆಟ್ಟಿಲು ಏರಿದ್ದರು. ಹಾಗಾಗಿ ಪುನೀತ್ ರಾಜ್‌ಕುಮಾರ್ 'ಅರ್ಧಸತ್ಯ' ಟೈಟಲ್ ಅನ್ನು ಅರ್ಧಕ್ಕೆ ಬಿಡಬೇಕಾಗಿ ಬಂದಿದೆ. ಜೊತೆಗೆ ಹೊಸ ಶೀರ್ಷಿಕೆಯನ್ನು ಹುಡುಕುವ ಹೊಸ ಕೆಲಸ ನಡೆದಿದೆ.

ಇದು 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾದ ನಿರ್ದೇಶಕ ಹೇಮಂತ್ ರಾವ್ ಡೈರೆಕ್ಷನ್‌ನಲ್ಲಿ ಮೂಡಿಬರಬೇಕಿರುವ ಚಿತ್ರ. ಈಗಾಗಲೇ ಚಿತ್ರದ ಪೋಸ್ಟರ್ ಕೂಡ ರಿಲೀಸ್ ಆಗಿದೆ. ಸದ್ಯದಲ್ಲೇ ಹೊಸ ಶೀರ್ಷಿಕೆ ಹುಡುಕಿ ಸಿನಿಮಾ ಶುರು ಮಾಡುವುದಾಗಿ ಹೇಮಂತ್ ಹೇಳಿದ್ದಾರೆ. "ನಮ್ಮ ಕತೆಗೆ ಅದೇ ಸೂಕ್ತ ಟೈಟಲ್ ಅಂತ ಇಟ್ಟಿದ್ದೆವು. ಆದರೆ ಅದನ್ನು ಬೇರೆಯವರು ಬಳಸಿದ್ದಾರೆ ಅಂದರೆ, ನಮಗ್ಯಾವ ತೊಂದರೆಯೂ ಆಗದು. ಕತೆಗೆ ತಕ್ಕಂತೆ ಹೊಸ ಶೀರ್ಷಿಕೆಯನ್ನು ಸದ್ಯದಲ್ಲೇ ಇಡುತ್ತೇವೆ" ಎಂದು ಹೇಮಂತ್ ಹೇಳಿದ್ದಾರೆ. ಸಿನಿಮಾದ ಬಹು ಮುಖ್ಯಪಾತ್ರದಲ್ಲಿ ಮನೀಶ್ ರಿಷಿ ನಟಿಸಲಿದ್ದು, ನಾಯಕಿಯ ಹುಡುಕಾಟ ನಡೆದಿದೆ.

ಹನ್ನೆರಡು ಕೋಟಿ ಕೇಳಿದ್ರಾ ದರ್ಶನ್?

ಸುದೀಪ್, ಗಣೇಶ್, ಪುನೀತ್ ರೀತಿಯಲ್ಲೇ ದರ್ಶನ್ ಕೂಡ ರಿಯಾಲಿಟಿ ಶೋ ನಡೆಸಿಕೊಡುತ್ತಾರೆಂಬ ಸುದ್ದಿ ಗಾಂಧಿನಗರದಲ್ಲಿ ಹಬ್ಬಿತ್ತು, ಅದು ಕುತೂಹಲಕ್ಕೂ ಕಾರಣವಾಗಿತ್ತು. ಸುದ್ದಿಯಾದ ಎರಡ್ಮೂರು ದಿನದಲ್ಲಿ ತಾವು ಯಾವುದೇ ರಿಯಾಲಿಟಿ ಶೋನಲ್ಲಿ ಭಾಗವಹಿಸಲ್ಲ ಅಂತ ಸ್ವತಃ ದರ್ಶನ್ ಹೇಳಿಕೆ ನೀಡಿದ್ದರು. ಈ ನ್ಯೂಸ್ ಕುರಿತಾದ ಕೆಲವು ಇಂಟ್ರೆಸ್ಟಿಂಗ್ ಸಂಗತಿಗಳು ಈಗ ಹೊರಬಿದ್ದಿವೆ. ಖಾಸಗಿ ಚಾನೆಲ್‌ವೊಂದು ರಿಯಾಲಿಟಿ ಶೋ ನಡೆಸಿಕೊಡುವಂತೆ ದರ್ಶನ್ ಅವರನ್ನು ಕೇಳಿದ್ದು ನಿಜವಂತೆ. ತೀರಾ ಆಪ್ತರ ಕಡೆಯಿಂದಲೂ ದರ್ಶನ್ ಅವರನ್ನು ಒಪ್ಪಿಸುವ ಕೆಲಸವನ್ನೂ ಚಾನೆಲ್‌ನ ಮುಖ್ಯಸ್ಥರು ಮಾಡಿದ್ದರಂತೆ. ಆಗಲ್ಲ ಅಂತ ಹೇಳೋಕೆ ಆಗದೇ ದರ್ಶನ್ ಉಪಾಯವೊಂದನ್ನು ಮಾಡಿದರಂತೆ. ಅದೇ 'ಬಿಗ್' ಬೇಡಿಕೆ! ತಾವು ರಿಯಾಲಿಟಿ ಶೋ ನಡೆಸಿಕೊಡಲು ತಯಾರಿದ್ದು, ತಾನು ಕೇಳಿದಷ್ಟು ಸಂಭಾವನೆ ಕೊಟ್ಟರೆ ಒಪ್ಪುತ್ತೇನೆ ಅಂದರಂತೆ ದರ್ಶನ್. ಆದರೆ ದರ್ಶನ್ ಕೇಳಿದ ಸಂಭಾವನೆ ಬರೋಬ್ಬರಿ ಹನ್ನೆರಡು ಕೋಟಿ!! ಈ ಮೊತ್ತ ಕೇಳಿದ ನಂತರ ಮತ್ತೆ ಚಾನೆಲ್‌ನವರು ಆ ಕಡೆ ತಲೆ ಕೂಡ ಹಾಕಿಲ್ಲ ಅಂತಿದ್ದಾರೆ ದರ್ಶನ್ ಆಪ್ತರು.



ಕದ್ದ ವಿಮಾನ



ರಮೇಶ್ ಅರವಿಂದ್ ಅವರ ನೂರನೇ ಸಿನಿಮಾ 'ಪುಷ್ಪಕ ವಿಮಾನ' ಕತೆ ಕದ್ದ ಆರೋಪಕ್ಕೆ ಗುರಿಯಾಗಿದೆ. ಹಾಲಿವುಡ್‌ನ 'ಮಿರಾಕಲ್ ಇನ್ ಸೆಲ್ ನಂ 7' ಚಿತ್ರದ ರೀಮೇಕ್ ಸಿನಿಮಾ ಇದಾಗಿದ್ದು ರೀಮೇಕ್ ಅನುಮತಿಯನ್ನು ಪಡೆಯದೇ ಸಿನಿಮಾ ಮಾಡಿದ್ದರಿಂದ ಕ್ರೋಸ್ ಪಿಕ್ಚರ್ ಮತ್ತು ಕ್ರೋಸ್ ಟೆಲಿವಿಷನ್ ಸಂಸ್ಥೆಯು ಕೋರ್ಟ್ ಮೆಟ್ಟಿಲೇರಿದೆ. ಹಾಗಾಗಿ 'ಪುಷ್ಪಕ ವಿಮಾನ' ಚಿತ್ರದ ನಿರ್ಮಾಪಕನ ವಿರುದ್ಧ ಪ್ರಕರಣ ದಾಖಲಾಗಿದೆ.

ಇದು ನಿರ್ದೇಶಕ ಪವನ್ ಒಡೆಯರ್ ಮತ್ತು ವಿಖ್ಯಾತ್ ಚಿತ್ರ ಬ್ಯಾನರ್‌ನಲ್ಲಿ ಮೂಡಿಬಂದಿರುವ ಸಿನಿಮಾ. ಐವತ್ತು ದಿನಗಳನ್ನು ಪೂರೈಸಿ, ಚಾನೆಲ್‌ನಲ್ಲೂ ಪ್ರಸಾರವಾದ ನಂತರ ಪ್ರಕರಣ ದಾಖಲಾಗಿದ್ದು ಇದೀಗ ಸಂಕಷ್ಟಕ್ಕೆ ಕಾರಣವಾಗಿದೆ. ಈ ಕುರಿತು ನಿರ್ಮಾಪಕರು ಸ್ಪಷ್ಟನೆ ನೀಡುವುದು ಹೀಗೆ: "'ಪುಷ್ಪಕ ವಿಮಾನ' ಸಿನಿಮಾ ಸಂಪೂರ್ಣ ರೀಮೇಕ್ ಚಿತ್ರವಲ್ಲ. 'ಮಿರಾಕಲ್ ಇನ್ ಸೆಲ್ ನಂ 7' ಸೇರಿದಂತೆ ಇನ್ನೂ ಮೂರು ಸಿನಿಮಾಗಳ ಪ್ರೇರಣೆ ಪಡೆದುಕೊಂಡು ಮಾಡಿರುವ ಚಿತ್ರ ಇದಾಗಿದೆ. ಟೈಟಲ್ ಕಾರ್ಡ್‌ನಲ್ಲೂ ಅದನ್ನು ಹಾಕಿದ್ದೇವೆ. ಆದರೂ 'ಮಿರಾಕಲ್...' ಸಿನಿಮಾದ ರೈಟ್ಸ್ ಕನ್ನಡದ ನಿರ್ಮಾಪಕರೊಬ್ಬರ ಬಳಿ ಇತ್ತು. ಹತ್ತು ಲಕ್ಷ ರೂಪಾಯಿ ಕೊಟ್ಟು ರೈಟ್ಸ್ ಪಡೆದಿದ್ದೇವೆ. ಇದೆಲ್ಲವೂ ಕ್ರೋಸ್ ಪಿಕ್ಚರ್‌ನವರಿಗೆ ಗೊತ್ತಿಲ್ಲ. ಏಕಾಏಕಿ ಇಮೇಲ್ ಮೂಲಕ ನೋಟಿಸ್ ಕಳುಹಿಸಿದ್ದಾರೆ. ನಾವು ಕೂಡ ಅವರಿಗೆ ಉತ್ತರ ಕೊಡುತ್ತೇವೆ."

ಅದರ ಜೊತೆಗೆ ತಾವು ಇದು ರೀಮೇಕ್ ಸಿನಿಮಾ ಅಲ್ಲ ಅಂತ ಹೇಳಿದರೂ, ರೀಮೇಕ್ ಸಿನಿಮಾ ಮಾಡಲು ಹೊರಟಿರುವ ತಂತ್ರದ ಒಂದು ಭಾಗ ಕೂಡ ಇದಾಗಿದೆ ಅನ್ನುತ್ತಿದೆ ಚಿತ್ರತಂಡ. ಸದ್ಯಕ್ಕೆ ನೋಟಿಸ್ ಪಡೆದಿರುವ ನಿರ್ಮಾಪಕರು ಕೋರ್ಟ್‌ನಲ್ಲಿ ಯಾವ ಉತ್ತರ ಕೊಡುತ್ತಾರೋ ಕಾದು ನೋಡಬೇಕು.

ಸುದ್ದಿಯಲ್ಲಿ ಅನಿತಾ ಭಟ್

'ಸೈಕೋ' ಚಿತ್ರ ಖ್ಯಾತಿಯ ಅನಿತಾ ಭಟ್, ಸಿ... ಮತ್ತು ವೈಯಕ್ತಿಕ ಬದುಕಿನ ಕಾರಣದಿಂದಾಗಿ ... ಸುದ್ದಿಯಲ್ಲಿದ್ದಾರೆ. ಮೊನ್ನೆಯಷ್ಟೇ ಅ... ಶಿವರಾಜ್‌ಕುಮಾರ್ ನಟನೆಯ 'ಟಗರು' ಸಿನಿಮ... ಅತಿಥಿ ಪಾತ್ರ ಮಾಡಿದ್ದಾರೆ. ಅದೊಂದು ಚಿ... ಪಾತ್ರವಾಗಿದ್ದರಿಂದ ಅನಿತಾ ಅವರನ್ನೇ ಹುಡುಕಿಕೊ... ಬಂದಿದ್ದರಂತೆ ನಿರ್ದೇಶಕ ಸೂರಿ. ಈ ನಿರ್ದೇಶಕರ ಜ... ಅವರು ಮಾಡಿರುವ ಎರಡನೇ ಸಿನಿಮಾ ಇದು... ಕಳೆದ ವರ್ಷ ತೆರೆಕಂಡ 'ದೊಡ್ಮನೆ ಹುಡ... ಸಿನಿಮಾದಲ್ಲೂ ಅನಿತಾ ನಟಿಸಿದ್ದರು.

ಅದರ ಜೊತೆಗೆ ಮೂರು ದಿನಗಳ ಹಿಂದೆ... ತಾವು 'ಲಿವ್ ಇನ್ ರಿಲೇಷನ್‌ಶಿಪ್'ನಲ್ಲಿ ಇರುವ... ಹೇಳಿಕೊಂಡಿದ್ದಾರೆ. ಮಲ್ಟಿಪ್ಲೆಕ್ಸ್ ಚಿತ್ರಮಂದಿರ... ಸಂಬಂಧಿಸಿದ ಸಂಸ್ಥೆಯಲ್ಲಿ ಕೆಲಸ ಮಾ... ಹುಡುಗನ ಜತೆ ತಾವೀಗ ನೆಮ್ಮದಿಯಾಗಿ ದಿನ... ಕಳೆಯುತ್ತಿರುವುದಾಗಿ ಹೇಳಿಕೊಂಡಿದ್ದಾರೆ.

ನಾಯಕಿಯ ಪಾತ್ರಕ್ಕಿಂತ ಅತಿಥಿ ಮತ್ತು ... ಸಾಂಗ್‌ಗಳಿಂದಾಗಿಯೇ ಫೇಮಸ್ ಆದವರು ಅ... ಕನ್ನಡದ ಸಾಕಷ್ಟು ಮಾದಕ ಗೀತೆಗಳಿಗೆ ... ಹಾಕಿರುವ ಇವರು, ಒಳ್ಳೆಯ ಕತೆ ಮತ್ತು ಪಾತ್ರ... ಈಗಲೂ ಕಾಯುತ್ತಿದ್ದಾರಂತೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com